ದಶಮಾನ ಕಂಡ ಜಿಲ್ಲೆಯ ಮೊದಲ ಪ್ರಾದೇಶಿಕ ದಿನ ಪತ್ರಿಕೆ

ದಾವಣಗೆರೆ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಗದಗ, ಬೆಂಗಳೂರು ಗ್ರಾಮಾಂತರ

# ಕನ್ನಡ ಭಾರತಿ

ಸಂಪಾದಕರು : ಮಲ್ಲಿಕಾರ್ಜುನ್ ಕಬ್ಬೂರು

ನೊಂದವರ ನೈಜ ಕನ್ನಡಿ

ಸಂಪುಟ : 12 ಸಂಚಿಕೆ : 203
4–2–2025 ಮಂಗಳವಾರ

₹3 KA/SK/DVG-006/2023-2025 KARKAN/2013/50807 KANNADA BHARATHI REGIONAL DALIY DAVANAGERE dvgkanndabharathi@gmail.com Page : 6 VOLUME : 12 ISSUE : 203

## ಬೆಂಗಳೂರು ವಿವಿ ಹಾಸ್ಟೆಲ್‌ನಲ್ಲಿ ಪಿಜಿ ವಿದ್ಯಾರ್ಥಿನಿ ಆತ್ಮಹತ್ಯೆಗೆ ಶರಣು



**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿಯೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ದಾರುಣ ಘಟನೆ ಸೋಮವಾರ ನಡೆದಿದೆ.

ಕನ್ನಡ ವಿಭಾಗದಲ್ಲಿ ದ್ವಿತೀಯ ವರ್ಷದ ಎಂಎ ಓದುತ್ತಿದ್ದ ಎಚ್.ಎನ್.ಪಾವನ ಅವರು ಇಂದು ಮಧ್ಯಾಹ್ನ 12 ಗಂಟೆ–ಯ ಸುಮಾರಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಸ್ಟೆಲ್‌ನಲ್ಲಿದ್ದ ಕೆಲ ಯುವತಿಯರು ಗಮನಿಸಿ ಮಾಹಿತಿ ನೀಡಿದ ಬಳಿಕ ಘಟನೆ ಬೆಳಕಿಗೆ ಬಂದಿದೆ.

ಪಾವನ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಹೆಬ್ಬಲಗುಪ್ಪೆ ಗ್ರಾಮದ ನಿವಾಸಿಯಾಗಿದ್ದು. ನಾನು ಗೆಳೆಯನೊಬ್ಬನನ್ನು ನಂಬಿದ್ದೆ, ಆತನಿಂದ ಮೋಸವಾಗಿದೆ. ಕ್ಷಮಿಸಿ ಅಪ್ಪ, ಅಮ್ಮ.. ಐ ಲವ್ ಯೂ ಎಂದು ಡೆತ್?ನೋಟ್?? ಬರೆದಿಟ್ಟು ಸಾವಿಗೆ ಶರಣಾಗಿದ್ದಾರೆ. ಸದ್ಯ ವಿಕ್ಟೋರಿಯಾ ಆಸ್ಪತ್ರೆಗೆ ವಿದ್ಯಾರ್ಥಿನಿ ಪಾವನ ಶವ ಶಿಫ್ಟ್ ಮಾಡಲಾಗಿದ್ದು,? ಪೋಷಕರು ಬೆಂಗಳೂರಿಗೆ ಬಂದ ಬಳಿಕ ಮರಣೋತ್ತರ ಪರೀಕ್ಷೆ ನಡೆಯಲಿದೆ. ಈ ಸಂಬಂಧ ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

## ಆಯವ್ಯಯ ಸಭೆ

**ದಾವಣಗೆರೆ:** ಮಹಾನಗರಪಾಲಿಕೆಯ ಮಹಾಪೌರರಾದ ಚಮನ್ ಸಾಬ್.ಕೆ ಇವರ ಅಧ್ಯಕ್ಷತೆಯಲ್ಲಿ ಫೆಬ್ರವರಿ 6 ರಂದು ಬೆಳಿಗ್ಗೆ 11 ಗಂಟೆಗೆ ಪಾಲಿಕೆ ಸಭಾಂಗಣದಲ್ಲಿ ಆಯವ್ಯಯ ಸಭೆಯನ್ನು ಆಯೋಜಿಸಲಾಗಿದೆ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

## ಸವಿತಾ ಮಹರ್ಷಿ ಜಯಂತಿ ಆಚರಣೆ

**ದಾವಣಗೆರೆ:** ಜಿಲ್ಲಾಡಳಿತ ವತಿಯಿಂದ ಫೆಬ್ರವರಿ 5 ರಂದು ಬೆಳಿಗ್ಗೆ 11 ಗಂಟೆ–ಗೆ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಸವಿತಾ ಮಹರ್ಷಿ ಜಯಂತಿಯನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಜಿಲ್ಲಾ ಪ್ರವಾಸ

**ದಾವಣಗೆರೆ:** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಪುರುಷೋತ್ತಮ ಬಿಳಿಮಲೆ ಇವರು ಫೆಬ್ರವರಿ 6 ಮತ್ತು 7 ರಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಫೆಬ್ರವರಿ 6 ರಂದು ದಾವಣಗೆರೆ ಆಗಮಿಸಿ ವಾಸ್ತವ್ಯ ಮಾಡುವರು. ಫೆಬ್ರವರಿ 7 ರಂದು ಬೆಳಿಗ್ಗೆ 10 ಗಂಟೆ–ಗೆ ದಾವಣಗೆರೆ ವಿಶ್ವವಿದ್ಯಾನಿಲಯ ತೋಳಹುಣಸೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿಗೆ ಪ್ರಯಾಣಿಸುವರು.

## ಪುಸ್ತಕ ಬಿಡುಗಡೆ ನಾಳೆ

**ದಾವಣಗೆರೆ:** ದಾವಣಗೆರೆ ನಗರದ ಡಯಟ್ ಕಾಲೇಜಿನಲ್ಲಿ ಫೆ.5ರಂದು ಬೆಳಿಗ್ಗೆ 10:30ಕ್ಕೆ ಹಮ್ಮಿಕೊಂಡಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಬುನಾದಿ ತರಬೇತಿ ಕಾರ್ಯಕ್ರಮದಲ್ಲಿ ವಿಶ್ರಾಂತ ಜಂಟಿ ನಿರ್ದೇಶಕರು ಹಾಗೂ ಗೌರವ ಸಲಹೆಗಾರರು ಆಗಿರುವ ಹೆಚ್.ಕೆ. ಲಿಂಗರಾಜು ಅವರ 'ಶಿಕ್ಷಕರಿಗಾಗಿ ಸೇವಾ ನಿಯಮಗಳು ಪುಸ್ತಕ'ವನ್ನು ಡಯಟ್‌ನ ಪ್ರಾಚಾರ್ಯರು ಹಾಗೂ ಪದನಿಮಿತ್ತ ಉಪನಿರ್ದೇಶಕರು ಆಗಿರುವ ಎಸ್. ಗೀತಾ ಲೋಕಾರ್ಪಣೆಗೊಳಿಸಲಿದ್ದಾರೆ.

## ಉದ್ಯೋಗ ನೋಂದಣಿ

**ಚಿಕ್ಕಮಗಳೂರು: ಫೆ. 03:** ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ವತಿಯಿಂದ ಫೆಬ್ರವರಿ 05 ರಂದು ಮಧ್ಯಾಹ್ನ 12:30 ಗಂಟೆ–ಗೆ ನಗರದ ಎ.ವಿ.ಎಸ್ ಬಿ.ಎಡ್. ಕಾಲೇಜಿನಲ್ಲಿ ಉದ್ಯೋಗ ನೋಂದಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆಸ್ತಕ ಅಲ್ಪಸಂಖ್ಯಾತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಭಾಗವಹಿಸ ಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ದೂರವಾಣಿ: 9945198500/08262–295538 ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಎನ್‌ಎಎಸಿ ಗ್ರೇಡ್ ಕೊಡಲು ಲಂಚಕ್ಕೆ ಬೇಡಿಕೆ ಆರೋಪ:

# ದಾವಣಗೆರೆ ವಿವಿ ಪ್ರಾಧ್ಯಾಪಕಿ ಪ್ರೊ. ಗಾಯತ್ರಿ ದೇವರಾಜ್ ಬಂಧನ

**ದಾವಣಗೆರೆ:** ನ್ಯಾಕ್ ಗ್ರೇಡ್ ಕೊಡಲು ಲಂಚ–ಕ್ಕೆ ಬೇಡಿಕೆ ಇಟ್ಟ ಆರೋಪದ ಮೇಲೆ ದಾವಣಗೆರೆ ವಿವಿಯ ಪ್ರೊ.ಗಾಯತ್ರಿ ದೇವರಾಜ್ ಅವರನ್ನು ಹೈದರಾಬಾದ್‌ನಲ್ಲಿ ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

ಗಾಯತ್ರಿ ಅವರು ದಾವಣಗೆರೆ ವಿಶ್ವವಿದ್ಯಾನಿಲಯದ ಮಾಜಿ ರಿಜಿಸ್ಟ್ರಾರ್ (ಆಡಳಿತ) ಆಗಿದ್ದರು ಮತ್ತು ಮೈಕ್ರೋಬಯಾಲಜಿ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿಯ (NAAC) ಏಳು ಸದಸ್ಯರ ತಪಾಸಣೆ ತಂಡದ ಭಾಗವಾಗಿದ್ದರು.

ಬಂಧಿತ ವ್ಯಕ್ತಿಗಳಲ್ಲಿ ತಪಾಸಣಾ ಸಮಿತಿಯ ಅಧ್ಯಕ್ಷರು ಮತ್ತು ಆರು ಸದಸ್ಯರು ಸೇರಿದ್ದಾರೆ. ಬಂಧಿತರಲ್ಲಿ ಆಂಧ್ರಪ್ರದೇಶದ ಗುಂಟೂರಿನಲ್ಲಿರುವ ಕೋನೇರು ಲಕ್ಷ್ಮಯ್ಯ ಶಿಕ್ಷಣ ಪ್ರತಿಷ್ಠಾನದ (ಕೆಎಲ್‌ಇಎಫ್) ಉಪಕುಲಪತಿಗಳು ಮತ್ತು ಇಬ್ಬರು ಕಾರ್ಯನಿರ್ವಾಹಕರು ಸೇರಿದ್ದಾರೆ.

ಅಧಿಕೃತ ಹೇಳಿಕೆಯಲ್ಲಿ, ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳು ಹಾಗೂ ನ್ಯಾಕ್ ಪರಿಶೀಲನಾ ತಂಡದ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ



ಎಂದು ಸಿಬಿಐ ದೃಢಪಡಿಸಿದೆ. ಅನುಕೂಲಕರವಾದ ಓಂಂಅ ರೇಟಿಂಗ್‌ಗಳಿಗೆ, ನಿರ್ದಿಷ್ಟವಾಗಿ A++ ಮಾನ್ಯತೆ ನೀಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ತಿಳಿದು ಬಂದಿದೆ.

ಕೆಎಲ್‌ಇಎಫ್ ಅಧ್ಯಕ್ಷ ಕೋನೇರು ಸತ್ಯನಾರಾಯಣ, ನ್ಯಾಕ್ ಮಾಜಿ ಉಪ ಸಲಹೆಗಾರ ಎಲ್ ಮಂಜುನಾಥ ರಾವ್, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮತ್ತು ನಿರ್ದೇಶಕ (ಐಕ್ಯೂಎಸಿ–ಎನ್‌ಎಸಿ) ಎಂ ಹನುಮಂತಪ್ಪ ಮತ್ತು ನ್ಯಾಕ್ ಸಲಹೆಗಾರ ಎಂಎಸ್ ಶ್ಯಾಮಸುಂದರ್ ಅವರನ್ನೂ ಎಫ್‌ಐಆರ್‌ನಲ್ಲಿ ಆರೋಪಿಗಳಾಗಿ ಹೆಸರಿಸಲಾಗಿದೆ ಎಂದು ಸಿಬಿಐ ತಿಳಿಸಿದೆ.

ನ್ಯಾಕ್ ತಪಾಸಣೆಯ ಸದಸ್ಯರಿಗೆ ಲಂಚ ನೀಡುವಲ್ಲಿ ಭಾಗಿಯಾಗಿರುವ ಆರೋಪದಲ್ಲಿ ಕೆಎಲ್‌ಇಎಫ್ ಉಪಕುಲಪತಿ ಜಿ ಪಿ ಸಾರಧಿ ವರ್ಮ, ಕೆಎಲ್‌ಇಎಫ್ ಉಪಾಧ್ಯಕ್ಷ ಕೋನೇರು ರಾಜಾ ಹರೇನ್ ಮತ್ತು ಹೈದರಾಬಾದ್ ಕ್ಯಾಂಪಸ್‌ನ ಕೆಎಲ್ ವಿಶ್ವವಿದ್ಯಾಲಯದ ನಿರ್ದೇಶಕ ಎ ರಾಮಕೃಷ್ಣ ಅವರನ್ನು ಸಿಬಿಐ ಬಂಧಿಸಿದೆ. ಪ್ರಕರಣದಲ್ಲಿ ಒಟ್ಟು 14 ವ್ಯಕ್ತಿಗಳು ಭಾ–ಗಿಯಾಗಿದ್ದಾರೆ ಎಂದು ಸಿಬಿಐ ತಿಳಿಸಿದೆ. ಅಪರಾಧದ ಸಂಪೂರ್ಣ ವ್ಯಾಪ್ತಿಯನ್ನು ತಿಳಿದುಕೊಳ್ಳಲು ತನಿಖೆ ನಡೆಯುತ್ತಿದೆ ಎಂದು ದೃಢಪಡಿಸಿದೆ.

ತನಿಖಾ ಸಂಸ್ಥೆಯು ವಿಜಯವಾಡ, ಚೆನ್ನೈ, ಬೆಂಗಳೂರು, ಪಲಮು, ಸಂಬಲ್‌ಪುರ್, ಭೋಪಾಲ್, ಬಿಲಾಸ್‌ಪುರ, ಗೌತಮ್ ಬುದ್ಧ ನಗರ ಮತ್ತು ನವದೆಹಲಿ ಸೇರಿದಂತೆ ವಿವಿಧ ನಗರಗಳ 20 ಸ್ಥಳಗಳಲ್ಲಿ ಶೋಧ ನಡೆಸಿತು. ಈ ಶೋಧದ ವೇಳೆ ಸಿಬಿಐ ಅಧಿಕಾರಿಗಳು 37 ಲಕ್ಷ ರೂಪಾಯಿ ನಗದು, ಆರು ಲ್ಯಾಪ್‌ಟಾಪ್‌ಗಳು, ಒಂದು ಮೊಬೈಲ್ ಫೋನ್ ಮತ್ತು ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

### ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತಗೆ ಮತ್ತೊಂದು ದೂರು

# ಬೇನಾಮಿ ಹೆಸರಿನಲ್ಲಿ ಆಸ್ತಿ ಎಂದು ಗಂಭೀರ ಆರೋಪ

**ಮೈಸೂರು:** ಸಿಎಂ ಸಿದ್ದರಾಮಯ್ಯನವರು ಬೇನಾಮಿ ಹೆಸರಿನಲ್ಲಿ ಆಸ್ತಿ ಮಾಡಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಗಂಭೀರ ಆರೋಪ ಮಾಡಿದ್ದಾರೆ. ಈ ಕುರಿತಾಗಿ ತನಿಖೆ ನಡೆಸುವಂತೆ ಮೈಸೂರಿನಲ್ಲಿ ಲೋಕಾಯುಕ್ತಕ್ಕೆ ದೂರು ನೀಡಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ಸೋಮವಾರ ಮಾಧ್ಯಮಗಳ ಜತೆ ಮಾತನಾಡಿದ ಸ್ನೇಹಮಯಿ ಕೃಷ್ಣ ಅವರು, " ಸಿದ್ದರಾಮಯ್ಯನವರು ಕೆಸರೆ ಗ್ರಾಮದ ಜಾಗವನ್ನ ಅರಿಶಿನ ಕುಂಕುಮ ರೂಪದಲ್ಲಿ ಪತ್ನಿಗೆ ಕೊಟ್ಟಿದ್ದಾರೆ ಎಂದಿದ್ದರು. ಈಗ ಮತ್ತೆ ಮಲ್ಲಿಕಾರ್ಜುನಸ್ವಾಮಿ ಒಂದು ಎಕರೆ ದಾನ ಮಾಡಿದ್ದಾರೆ. ಯಾಕೆ ಮಲ್ಲಿಕಾರ್ಜುನಸ್ವಾಮಿ ಖರೀದಿ ಮಾಡಿದ ಭೂಮಿಗಳನ್ನೇ ದಾನ ಮಾಡ್ತಿದ್ದಾರೆ. ಈ ಬಗ್ಗೆ ಸಿದ್ದರಾಮಯ್ಯನವರು ಎಲ್ಲಿಯೂ ಹೇಳಿಲ್ಲ ಯಾಕೆ? " ಎಂದು ಪ್ರಶ್ನೆ ಮಾಡಿದ್ದಾರೆ.



**ಸಿಎಂ ಪತ್ನಿ ಆಸ್ತಿ ಪತ್ತೆ ಮಾಡಿ:** "ಮೊದಲು ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರ ಕುಟುಂಬದ ಆಸ್ತಿ ಎಷ್ಟು ಎಂಬುದು ಪತ್ತೆ ಮಾಡಿ. ಮಲ್ಲಿಕಾರ್ಜುನಸ್ವಾಮಿ ಎಷ್ಟು ಆಸ್ತಿ ಖರೀದಿ ಮಾಡಿದ್ದಾರೆ ಎಂಬುದನ್ನ ತನಿಖೆ ಮಾಡಿ. 1983ರಲ್ಲಿ ಆಲನಹಳ್ಳಿ ಸರ್ವೇ ನಂಬರ್ 113/4ರಲ್ಲಿ 1 ಎಕರೆ ಖರೀದಿ ಮಾಡಿದ್ದಾರೆ. 1996ರಲ್ಲಿ ಮುಡಾ ಅಂತಿಮ ಅಧಿಸೂಚನೆ ಹೊರಡಿಸಿದ್ದರೂ ಡಿನೋಟಿಫೈ ಆಗಿದೆ. ಸಿದ್ದರಾಮಯ್ಯ ಪ್ರಭಾವದಿಂದ ಡಿನೋಟಿಫೈ ಆಗಿದೆ. ಅದೇ ಭೂಮಿಯನ್ನ 2010 ಅಕ್ಟೋಬರ್‌ನಲ್ಲಿ ಪಾರ್ವತಿಗೆ ದಾನ ಮಾಡಲಾಗಿದೆ " ಎಂದು ಸ್ನೇಹಮಯಿ ಕೃಷ್ಣ ಆರೋಪ ಮಾಡಿದ್ದಾರೆ.

ಸಿಎಂ ಪತ್ನಿಯಿಂದ ಪುತ್ರ ಯತೀಂದ್ರಗೆ ದಾನ

"ಪಾರ್ವತಿಯವರು ಕೂಡ ಒಂದೇ ತಿಂಗಳಲ್ಲಿ ಮಗನ ಹೆಸರಿಗೆ ದಾನ ಮಾಡಿದ್ದಾರೆ. ತಮ್ಮ ಹೆಸರಿಗೆ ಬಂದ ಭೂಮಿಯನ್ನ ಯತೀಂದ್ರ 4 ತಿಂಗಳಲ್ಲಿ ಮಾರಾಟ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಇಲ್ಲಿವರೆಗೆ ಯಾಕೆ ಸಿದ್ದರಾಮಯ್ಯನವರು ತಿಳಿಸಿಲ್ಲ? ಎಂದು ಪ್ರಶ್ನೆ ಮಾಡಿದರು.

# ನಗರ ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರನ್ನು ನೇರ ಪಾವತಿಗೊಳಪಡಿಸುವಂತೆ ಆಗ್ರಹಿಸಿ ಮನವಿ

**ದಾವಣಗೆರೆ:** ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಎಲ್ಲ ಬಗೆಯ ಕಾರ್ಮಿಕರಿಗೆ ಗುತ್ತಿಗೆ ಪದ್ಧತಿ ರದ್ದುಪಡಿಸಿ ನೇರಪಾವತಿಗೆ ತರುವ ಪ್ರಸ್ತಾವನೆಯನ್ನು ಬಜೆಟ್ ನಲ್ಲಿ ಘೋಷಿಸುವಂತೆ ಹೊರಗುತ್ತಿಗೆ ನೌಕರರ ಸಂಘ ರಾಜ್ಯ ಕಛೇರಿ ಬೆಂಗಳೂರು, ದಾವಣಗೆರೆ ಮಹಾನಗರ ಪಾಲಿಕೆಯ ಹೊರಗುತ್ತಿಗೆ ಘನತ್ಯಾಜ್ಯ ವಿಲೇವಾರಿ ವಾಹನ ಚಾಲಕರ ಸಂಘವು ಮನವಿ ಮಾಡಿತು.

ಸೋಮವಾರ ಸಂಘದ ಪದಾಧಿಕಾರಿಗಳು, ಸದಸ್ಯರು ಪಾಲಿಕೆಯಿಂದ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಎಡಿಸಿ ಲೋಕೇಶ್ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯಾಧ್ಯಕ್ಷ ಎಂ. ನಾಗನಗೌಡ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರು ಸ್ವಚ್ಛತೆ ವಿಭಾಗದಲ್ಲಿ ನೀರು ಸರಬರಾಜು ಸಹಾಯಕರು, ಸ್ವಾನಿಟರಿ ಸೂಪರ್ ವೈಸರ್ ಗಳು, ಕಸದ ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್, ಒಳಚರಂಡಿ ಕಾರ್ಮಿಕರು, ತ್ಯಾಜ್ಯ ಸಹಾಯಕರು ಸೇರಿದಂತೆ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ



ನಿರ್ವಹಿಸುತ್ತಿದ್ದಾರೆ. ಸಕಾಲಕ್ಕೆ ಬಾರದ ಸಂಬಳ. ಕೈಗೆ ಸೇರದ ಕನಿಷ್ಟವೇತನ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಕಿರುಕುಳ ನಿತ್ಯದ ಸಂಗತಿಯಾಗಿದೆ ಎಂದು ದೂರಿದರು.

ಪೌರಕಾರ್ಮಿಕರನ್ನು ಗುತ್ತಿಗೆ ಪದ್ಧತಿಯಿಂದ ಬಿಡುಗಡೆಗೊಳಿಸಿದ ಸರಕಾರ ಪೌರಕಾರ್ಮಿಕರೊಟ್ಟಿಗೆ ಕರ್ತವ್ಯ ನಿರ್ವಹಿಸುವ ಇನ್ನುಳಿದ ಕಾರ್ಮಿಕರನ್ನು ಸಹ ಗುತ್ತಿಗೆ ಪದ್ಧತಿಯಿಂದ ನೇರಪಾವತಿಗೆ ತರುವಂತೆ ಕೋರುತ್ತೇವೆ ಎಂದರು.

ಗೌರವಾಧ್ಯಕ್ಷ ಎಂ. ವೀರೇಶ್ ಮಾತನಾಡಿ, ಹೊರಗುತ್ತಿಗೆ ನೌಕರರನ್ನು ಸರಕಾರವೇ ಸೊಸೈಟಿ ರಚಿಸಿ ಸೊಸೈಟಿ ಮೂಲಕ ವೇತನ ನೀಡುವುದು ಗುತ್ತಿಗೆ ಪದ್ಧತಿಯ ಮತ್ತೊಂದು ರೂಪವಲ್ಲದೆ ಮತ್ತೇನಲ್ಲ. ಈಗಾಗಲೇ ಬೀದರ್ ನಲ್ಲಿ ಅಪ್ರಸ್ತುತವಾಗಿರುವ ಈ ಮಾದರಿಯನ್ನು ಜಿಲ್ಲಾಧಿಕಾರಿಗಳು ಕೈಬಿಟ್ಟು ಎಲ್ಲ ಹೊರಗುತ್ತಿಗೆ ನೌಕರರನ್ನು ಪೌರಕಾರ್ಮಿಕರ ಮಾದರಿಯಲ್ಲಿ ನೇರಪಾವತಿಗೆ ತರಬೇಕು ಎಂದು ಆಗ್ರಹಿಸಿದರು.

ಈ ಸಂಬಂಧ ಈಗಾಗಲೇ ಪಾಲಿಕೆ ಅಗತ್ಯ ನಿರ್ಣಯ ಅಂಗೀಕರಿಸಿ ಸರಕಾರಕ್ಕೆ ಕಳುಹಿಸಿಕೊಟ್ಟಿದೆ. ಅದರನುಸಾರ ನೇರಪಾವತಿ ಜಾರಿಯಾಗಬೇಕೆ ಹೊರತು ಸೊಸೈಟಿ ಮಾದರಿಯಲ್ಲ. ಸರಕಾರವು ಸಹ ಸ್ಥಳೀಯ ಸಂಸ್ಥೆಗಳ ಆಡಳಿತಾತ್ಮಕ ನಿರ್ಧಾರಗಳನ್ನು ಜಾರಿಗೊಳಿಸುವ ಬದ್ಧತೆ ತೋರಬೇಕು ಎಂದರು.

ಕಾರ್ಯದರ್ಶಿ ಮಂಜಪ್ಪ ಮಾತನಾಡಿ, ಕಾರ್ಮಿಕರನ್ನು ನೇರಪಾವತಿಗೆ ತರುವ ಪ್ರಸ್ತಾವನೆಯನ್ನು ಹಣಕಾಸು ಇಲಾಖೆ ಎರಡು ಬಾರಿ ಹಿಂತಿರುಗಿಸಿ ಈ ಸಾರಿಯ ಬಜೆಟ್ ಪ್ರಸ್ತಾವನೆಯಲ್ಲಿ ಮಂಡಿಸಲು ನಗರಾಭಿವೃದ್ಧಿ ಇಲಾಖೆಗೆ ಸೂಚಿಸಿದೆ.

ಈ ಸಾರಿಯ ಬಜೆಟ್ಟಿನಲ್ಲಿ ಈ ಬೇಡಿಕೆಯ ಈಡೇರಿಕೆಗೆ ಅಗತ್ಯ ರಾಜಕೀಯ ಇಚ್ಛಾಶಕ್ತಿಯನ್ನು ತೋರುವಂತೆ ಹಾಗೂ ಬಜೆಟ್ಟಿನಲ್ಲಿ ಈ ಬೇಡಿಕೆಯ ಜಾರಿ ಘೋಷಣೆ ಮಾಡುವಂತೆ ಕೋರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಸಫಾಯಿ ಕರ್ಮಚಾರಿಗಳ ಸಂಘದ ಅಧ್ಯಕ್ಷ ಹುಲಿಗೇಶ್ ಮಾತನಾಡಿದರು. ಬಿ.ಡಿ. ಸುರೇಶ್, ಎಂ.ಆರ್. ದುಗ್ಗೇಶ್, ಸಂತೋಷ್, ಇನ್ನಿತರರು ಪಾಲ್ಗೊಂಡಿದ್ದರು.

# ವಿಧಾನಸೌಧ ಆವರಣದಲ್ಲಿ ಪುಸ್ತಕ ಮೇಳ: ಸ್ಪೀಕರ್ ಯು.ಟಿ. ಖಾದರ್

**ಚಿಕ್ಕಮಗಳೂರು: (ಮಂಗಳೂರು) ಫೆ. 03:** ಜನಸಾಮಾನ್ಯರಿಗೆ ವಿಧಾನಸೌಧ ಆವರಣ ಮುಕ್ತವಾಗಿಸಿ, ಅವರಲ್ಲಿ ಓದಿನ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದೊಂದಿಗೆ ಫೆ.28ರಿಂದ ಮಾ.3ರ ವರೆಗೆ ವಿಧಾನ ಸೌಧ ಆವರಣದಲ್ಲಿ ಪುಸ್ತಕ ಮತ್ತು ಸಾಹಿತ್ಯ ಮೇಳ ಆಯೋಜಿಸಲಾಗುತ್ತಿದೆ ಎಂದು ಸ್ಪೀಕರ್ ಯು.ಟಿ. ಖಾದರ್ ತಿಳಿಸಿದ್ದಾರೆ.

ಅವರು ಸೋಮವಾರ ಮಂಗಳೂರು ಸರ್ಕ್ಯುಟ್ ಹೌಸ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ವಿಧಾನಸೌಧದ ಆವರಣದಲ್ಲಿ ಫೆ.28ರಿಂದ ಮಾ.3ರವರೆಗೆ ಪುಸ್ತಕ ಮತ್ತು ಸಾಹಿತ್ಯ ಮೇಳ ನಡೆಯಲಿದೆ. ನಾಡಿನ ಸಾಹಿತಿಗಳು, ಬುದ್ಧಿಜೀವಿಗಳು, ಬರಹಗಾರರು,



ಸಚಿವರು, ಶಾಸಕರು ಸೇರಿದಂತೆ ಪುಸ್ತಕಗಳನ್ನು ಪ್ರೀತಿಸುವವರು ಭಾಗವಹಿಸಲಿರುವ ಈ ಮೇಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆ.28ರಂದು ಚಾಲನೆ ನೀಡಲಿದ್ದಾರೆ ಎಂದು ಹೇಳಿದರು.


ಪುಸ್ತಕ ಮೇಳದೊಂದಿಗೆ ಸಾಹಿತ್ಯ ಚರ್ಚೆ, ಗೋಷ್ಠಿ, ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಿಗೂ ಇಲ್ಲಿ ಅವಕಾಶ ನೀಡಲಾಗಿದೆ. ಪುಸ್ತಕ ಮೇಳದ ಯಶಸ್ಸಿಗೆ ಹಿರಿಯ ಅಧಿಕಾರಿಗಳ ಸಮಿತಿ ರಚಿಸಲಾಗಿದೆ ಎಂದು ಅವರು ಹೇಳಿದರು.

ಪುಸ್ತಕ ಮೇಳದಲ್ಲಿ ಖಾಸಗಿ ಪುಸ್ತಕ ಪ್ರಕಾಶನಗಳಿಗೂ ಪುಸ್ತಕಗಳ ಪ್ರದರ್ಶನಕ್ಕೆ ಅವಕಾಶ ನೀಡಲಾಗುವುದು. ಲೇಖಕರು ಅಥವಾ ಸಾಹಿತಿಗಳು ತಮ್ಮ ಪುಸ್ತಕಗಳನ್ನು ಬಿಡುಗಡೆಗೊಳಿಸಲು ಅವಕಾಶ ಕಲ್ಪಿಸಲಾಗುವುದು. ಇದಲ್ಲದೆ, ಉತ್ತಮ ಸಾಹಿತ್ಯ ಕೃತಿಗೆ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ ಎಂದು ಸ್ಪೀಕರ್ ವಿವರಿಸಿದರು.

ಶಾಸಕರ ಅನುದಾನದಲ್ಲಿ ಖರೀದಿಗೆ ಅವಕಾಶ:

ಸ್ಪರ್ಧಾತ್ಮಕ ಪುಸ್ತಕಗಳು ಸೇರಿದಂತೆ ನಾನ ಪ್ರಕಾರದ ಬೇಡಿಕೆಯ ಪುಸ್ತಕಗಳನ್ನು ಶಾಸಕರು ಇಲ್ಲಿ ಖರೀದಿಸಿ ತಮ್ಮ ಕ್ಷೇತ್ರಗಳಲ್ಲಿನ ಗ್ರಂಥಾಲಯಗಳು, ಸರಕಾರಿ ಕಾಲೇಜುಗಳಿಗೆ ಪೂರೈಸಬಹುದು. ಇದಕ್ಕೆ ಪೂರಕವಾಗಿ ಶಾಸಕ ನಿಧಿಯಲ್ಲಿನ 2 ರಿಂದ 3 ಲಕ್ಷ ರೂ.ವರೆಗೆ ಪುಸ್ತಕಗೆ ಖರೀದಿಗೆ ಅವಕಾಶ ಮಾಡಿಕೊಡಲಾಗುವುದು ಎಂದು ಸಭಾಧ್ಯಕ್ಷರು ಹೇಳಿದರು.

# ವಿವಿಗಳು ಯೋಗ್ಯ ಮಾನವ ಸಂಪನ್ಮೂಲ ಸೃಜಿಸುವ ಶಕ್ತಿ ಕೇಂದ್ರಗಳಾಗಬೇಕು: ಕುಲಪತಿ ಡಾ. ಎಸ್.ಆರ್. ಶಂಕಪಾಲ್



**ದಾವಣಗೆರೆ :** ನಗರದ ಪ್ರತಿಷ್ಠಿತ ಜಿಎಂ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ವೊಕೇಷ್ನಲ್ ಟ್ರೈನಿಂಗ್ ಸ್ಕಿಲ್ ಡೆವಲಪ್ಮೆಂಟ್ ವಿಭಾಗದ ವತಿಯಿಂದ 2024 – 25ನೇ ಸಾಲಿನ ಶೈಕ್ಷಣಿಕ ವರ್ಷದ ಬಿ. ವೋಖ್ ಡಿಗ್ರಿ ಪ್ರೋಗ್ರಾಮ್ಸ್ ಅಂಡ್ ವೊಕೇಷ್ನಲ್ ಟ್ರೈನಿಂಗ್ ಸರ್ಟಿಫಿಕೇಟ್ ಪ್ರೋಗ್ರಾಮ್ಸ್ ಉದ್ಘಾಟನೆಗೊಂಡಿತು. ಅಲ್ಲದೇ ಜಿಎಂ ವಿಶ್ವವಿದ್ಯಾಲಯದ ಜ್ಞಾನ ಸರಣಿ (GM university knowledge series) ಎಂಬ ಶೀರ್ಷಿಕೆಯಡಿ ಜನೋಪಯುಕ್ತವಾಗುವ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಒಟ್ಟು 9 ಪುಸ್ತಕಗಳನ್ನು ಫೆಬ್ರವರಿ 3ರ ಸೋಮವಾರ ಜಿ.ಎಂ. ವಿಶ್ವವಿದ್ಯಾಲಯದ ಎ.ವಿ. ಕೊಠಡಿಯಲ್ಲಿ ಬಿಡುಗಡೆಗೊಳಿಸಲಾಯಿತು.

ಈ ವೇಳೆ ಮಾತನಾಡಿದ ಜಿಎಂ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಆರ್. ಶಂಕಪಾಲ್, ವಿಶ್ವವಿದ್ಯಾಲಯಗಳು ಪದವೀಧರರನ್ನು ಉತ್ಪಾದಿಸುವುದರ ಜೊತೆಗೆ ಸ್ಥಳೀಯ ಬೇಡಿಕೆಗಳ ಆಧಾರದಲ್ಲಿ ಯೋಗ್ಯ ಮಾನವ ಸಂಪನ್ಮೂಲ ಸೃಜಿಸುವ ಶಕ್ತಿ ಕೇಂದ್ರಗಳಾಗಬೇಕು ಎಂದು ಅಭಿಪ್ರಾಯ ಪಟ್ಟರು.

ನಾವು ಸಹ ಜಿಎಂ ವಿಶ್ವವಿದ್ಯಾಲಯವನ್ನು ಈ ಆಧಾರದಲ್ಲಿ ಕಟ್ಟುತ್ತಿದ್ದೇನೆ. ದಾವಣಗೆರೆ ಜಿಲ್ಲೆಯ ಸಮಗ್ರ ಬೇಡಿಕೆಗೆ ಅನುಸಾರವಾಗಿ ಶಿಕ್ಷಣ ಒದಗಿಸುವ ಕೆಲಸ ಮಾಡುತ್ತಾ ಬಂದಿದ್ದೇವೆ. ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಸುಮಾರು 900 ಹಳ್ಳಿಗಳು, 117 ಗ್ರಾಮ ಪಂಚಾಯತಿಗಳು ಇದ್ದು, ಈ ಎಲ್ಲಾ ಕಡೆ ತಾಂತ್ರಿಕತೆ ವಿಚಾರದಲ್ಲಿ ಸ್ಥಳೀಯ ಬೇಡಿಕೆಗಳ ಪೂರೈಸುವ ಕೆಲಸ ಮಾಡಬೇಕಾಗಿದೆ ಎಂದು ಆಶಿಸಿದರು.

ಹೊಸ ಹೊಸ ಯಂತ್ರೋಪಕರಣಗಳು ಮಾರುಕಟ್ಟೆಗೆ ಬರುತ್ತಿದ್ದು, ಅವುಗಳನ್ನು ಸರಿಯಾಗಿ ಹೇಗೆ ಬಳಕೆ ಮಾಡಬೇಕೆಂಬ ಜ್ಞಾನವುಳ್ಳ ತಂತ್ರಜ್ಞರ ಕೊರತೆ ಇದೆ. ವೈದ್ಯಕೀಯ ಉಪಕರಣಗಳ ಖರೀದಿ ಮಾಡಲಾಗುತ್ತದೆ ಆದರೆ ಅವುಗಳ ಬಳಕೆಗೆ ಮಾನವ ಸಂಪನ್ಮೂಲವನ್ನು ಬೇರೆ ಕಡೆಯಿಂದ ಕರೆಸುವಂತಹ ಪರಿಸ್ಥಿತಿ ಇದೆ. ಈ ರೀತಿಯ ವಿಚಾರಗಳಲ್ಲಿನ ಕೊರತೆ ಬಗ್ಗೆ ಪರಿಹಾರ ಕಂಡುಕೊಳ್ಳುವುದನ್ನು ಪಠ್ಯದಲ್ಲಿ ಅನುಸರಣೆ ಮತ್ತು ಅಳವಡಿಕೆ ಅಸಾಧ್ಯ. ಆದರೆ, ವೃತ್ತಿಪರ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ಶಿಬಿರಗಳ ಮುಖೇನ ಅನುಭವಿಗಳನ್ನು ತಯಾರು ಮಾಡಿದರೆ ಸ್ಥಳೀಯವಾಗಿ ತಂತ್ರಜ್ಞರು ಸಿಗಲಿದ್ದು, ಸ್ಥಳೀಯವಾಗಿ ಉದ್ಯೋಗಕಾಶವು ಸಿಕ್ಕಂತಾಗುತ್ತದೆ ಎಂದು ತಿಳಿಸಿದರು.

ಉನ್ನತ ವ್ಯಾಸಂಗಕ್ಕೆ ವಿದೇಶಕ್ಕೆ ಹೋಗುವ ಗುರಿ ಒಂದು ಕಡೆಯಾದರೆ ವಿದ್ಯಾಭ್ಯಾಸ ಮಾಡುವುದೇ ಉದ್ಯೋಗಕ್ಕಾಗಿ ಎಂಬ ಈ ಎರಡು ರೀತಿಯಾಗಿ ವಿದ್ಯಾಭ್ಯಾಸಕ್ಕೆ ಬರುವಂತಹ ವಿದ್ಯಾರ್ಥಿಗಳನ್ನು ಕಾಣಬಹುದು. ಹಾಗಾಗಿ ವಿಶ್ವವಿದ್ಯಾಲಯಗಳು (3ನೇ ಪುಟಕ್ಕೆ)

# ಮೈಕೊರೆಯುವ ಚಳಿ ಲೆಕ್ಕಿಸದೇ ಅಂಗನವಾಡಿ ಕಾರ್ಯಕರ್ತೆಯರ ಧರಣಿ



**ದಾವಣಗೆರೆ:** ಗೌರವ ಧನ ಹೆಚ್ಚಳ ಮತ್ತು ಆರನೇ ಗ್ಯಾರಂಟಿ ಜಾರಿಗೆ ಒತ್ತಾಯಿಸಿ ಎಐಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಶನ್ ಸಂಘಟನೆಯಿಂದ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಅಹೋರಾತ್ರಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಆರಂಭವಾಗಿದೆ.

ಸತ್ಯಾಗ್ರಹ ಚಳುವಳಿಯಲ್ಲಿ ದಾವಣಗೆರೆ ಜಿಲ್ಲೆಯಿಂದಲೂ ಸುಮಾರು 2000 ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ರಾಜ್ಯ ಕಾರ್ಯದರ್ಶಿ ಅವರಗೆರೆ ಚಂದ್ರು ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಎಸ್.ಮಲ್ಲಮ್ಮ ಅವರ ನೇತೃತ್ವದಲ್ಲಿ ಭಾಗವಹಿಸಿ ಹೋರಾಟಕ್ಕೆ ಬಲ ತುಂಬಿದರು.

ಗೌರವ ಧನ ಹೆಚ್ಚಿಸುವುದು ಸೇರಿದಂತೆ ತಮ್ಮ ಇತರ ಬೇಡಿಕೆಗಳಾದ ಸುಪ್ರೀ ಕೋರ್ಟ್ ತೀರ್ಪಿನಂತೆ ನಿವೃತ್ತರಾದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ನೀಡಬೇಕು, ಗುಜರಾತ್ ಹೈಕೋರ್ಟ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೀಡಿರುವ ನಿರ್ದೇಶನದಂತೆ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸೇವೆಯನ್ನು 'ನಾಗರಿಕ ಸೇವೆ' ಎಂಬುದಾಗಿ ಪರಿಗಣಿಸಿ ಕನಿಷ್ಠ ವೇತನ ನಿಗದಿಪಡಿಸಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಈ ಹೋರಾಟ ನಡೆಯುತ್ತಿದೆ.

ಮುಂಬರುವ ರಾಜ್ಯ ಬಜೆಟ್‌ನಲ್ಲಿ ಕನಿಷ್ಠ ವೇತನ ನಿಗದಿಪಡಿಸಬೇಕು, ರಾಜ್ಯ ಸರಕಾರದ ಆರನೇ ಗ್ಯಾರಂಟಿಯಾಗಿ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಯಂತೆ ಕಾರ್ಯಕರ್ತೆಯರಿಗೆ ಮಾಸಿಕ ರೂ.15000 ಮತ್ತು ಸಹಾಯಕಿಯರಿಗೆ ಮಾಸಿಕ ರೂ 10000 ಗೌರವಧನ ನೀಡಬೇಕು, ಗ್ರಾಚ್ಯುಟಿ ಸೌಲಭ್ಯ ಜಾರಿಗೊಳಿಸಬೇಕು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಕ್ರಮವಾಗಿ 'ಸಿ' ಮತ್ತು 'ಡಿ' ದರ್ಜೆ ನೌಕರರ ಸ್ಥಾನಮಾನ ನೀಡಬೇಕು ಎಂದು ಹೋರಾಟಗಾರರು ಸರಕಾರವನ್ನು ಆಗ್ರಹಿಸಿದರು. ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯಭಾಸ್ಕರ್, ಅಂಗನವಾಡಿ ಪೆಡರೇಶನ್‌ನ ರಾಜ್ಯಾಧ್ಯಕ್ಷ ಬಿ.ಅಮ್ಜದ್, ಪ್ರಧಾನ ಕಾರ್ಯದರ್ಶಿ ಜಯಮ್ಮ ಮತ್ತಿತರರು ಹೋರಾಟದ ಮುಂದಾಳತ್ವವನ್ನು ವಹಿಸಿದ್ದರು.

# ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನದ್ದು ರಾಷ್ಟ್ರವಾದ




**ಶಿವಮೊಗ್ಗ:** ಕೆಲವರು ಜಾತಿವಾದ, ಪ್ರದೇಶವಾದವನ್ನು ಪ್ರತಿಪಾದಿಸುತ್ತಾರೆ. ಆದರೆ ಎಬಿವಿಪಿಯದ್ದು ರಾಷ್ಟ್ರವಾದ. ಸ್ವಾತಂತ್ರ್ಯ ಬಳಿಕ ನಮ್ಮನ್ನು ಆಳಿದವರು ನಮ್ಮ ದೇಶವನ್ನು ಚೀನಾ, ಅಮೆರಿಕ, ಇಂಗ್ಲೆಂಡ್‌ನ ನಕಲು ಮಾಡಲು ಯತ್ನಿಸುತ್ತಿದ್ದರು. ಆದರೆ ಭಾರತ ಎಂದಿಗೂ ಭಾರತವಾಗಿಯೇ ಉಳಿಯಬೇಕು ಎಂಬ ಪರಿಕಲ್ಪನೆಯಲ್ಲಿ ಕೆಲಸ ಮಾಡಿದ್ದು ಎಬಿವಿಪಿ ಎಂದು ಎಬಿವಿಪಿ ರಾಷ್ಟ್ರೀಯ ಕಾರ್ಯದರ್ಶಿ ಶಾಲಿನಿ ವರ್ಮಾ ಹೇಳಿದರು. ಎಬಿವಿಪಿ ಪ್ರಾಂತ ಸಮ್ಮೇಳನದ ನಿಮಿತ್ತ ಏರ್ಪಡಿಸಿದ್ದ ಶೋಭಾಯಾತ್ರೆ ಬಳಿಕ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಈ ದೇಶದ ಮಹಾಪುರುಷ ವೀರ ಸಾವರ್ಕರ್ ಅವರನ್ನು ಅವಮಾನಿಸಿದರು. ಸಂವಿಧಾನ ನೀಡಿದ ಡಾ. ಅಂಬೇಡ್ಕರ್ ಅವರನ್ನು ಅವಮಾನಿಸಿದರು.

## ಇಂದಿನ ರಾಶಿ ಭವಿಷ್ಯ

### ಮೇಷ ರಾಶಿ

ಅಭದ್ರತೆ / ದಿಗ್ಭ್ರಮೆಯ ಭಾವನೆ ತಲೆತಿರುಗುವಿಕೆಯನ್ನು ಉಂಟುಮಾಡಬಹುದು. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಕುಟುಂಬದ ಸದಸ್ಯರೊಂದಿಗೆ ಕೆಲವು ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ. ಪ್ರತಿಯೊಂದು ವಿಷಯದಲ್ಲಿ ಪ್ರೀತಿಯನ್ನು ತೋರಿಸುವುದು ಸರಿಯಿಲ್ಲ. ಇದು ನಿಮ್ಮ ಸಂಬಂಧವನ್ನು ಸುಧಾರಿಸುವ ಬದಲು ಹಾಳುಮಾಡುತ್ತದೆ. ಹೊಸ ಪಾಲುದಾರಿಕೆ ಇಂದು ಭರವಸೆಯಿಂದ ಕೂಡಿರುತ್ತವೆ.

### ವೃಷಭ ರಾಶಿ

ಇಂದು ನಿಮ್ಮನ್ನು ಆವರಿಸುವ ಭಾವನಾತ್ಮಕ ಮನಸ್ಥಿತಿಯಿಂದ ನೀವು ಹೊರಬರಲು ಬಯಸಿದರೆ ಹಿಂದಿನದ್ದೆಲ್ಲವನ್ನೂ ಮರೆತುಬಿಡಬೇಕು. ಯಾವುದೇ ಹಳೆಯ ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು. ನೀವು ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು?. ಅತಿಥಿಗಳು ನಿಮ್ಮ ಮನೆಗೆ ಭೇಟಿ ನೀಡಿ ಅದನ್ನು ಆಹ್ಲಾದಕರ ಮತ್ತು ಅದ್ಭುತ ದಿನವನ್ನಾಗಿಸುತ್ತಾರೆ. ಏಕಪಕ್ಷೀಯ ವ್ಯಾಮೋಹ ನಿಮಗೆ ಕೇವಲ ಎದೆಗುದಿ ತರುತ್ತದೆ.

### ಮಿಥುನ ರಾಶಿ

ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಸ್ನೇಹಿತರು ಹಾಗೂ ಕುಟುಂಬದ ಸದಸ್ಯರೊಡನೆ ಒಂದು ಸಂಜೆಯನ್ನು ಆಯೋಜಿಸಿ. ನಿಮ್ಮ ಪ್ರೀತಿಪಾತ್ರರ ಭಾವನೆಗಳನ್ನು ಇಂದು ಅರ್ಥಮಾಡಿಕೊಳ್ಳಿ. ನೀವು ಇಂದು ಹಾಜರಾಗುವ ಉಪನ್ಯಾಸಗಳು ಮತ್ತು ವಿಚಾರಗೋಷ್ಠಿಗಳು ಬೆಳವಣಿಗೆಗೆ ಹೊಸ ವಿಚಾರಗಳನ್ನು ತರುತ್ತವೆ. ನಿಮ್ಮ ಮನಸ್ಸಿನಲ್ಲಿರುವುದನ್ನು ಹೇಳಲು ಹಿಂಜರಿಯದಿರಿ.

### ಕರ್ಕ ರಾಶಿ

ನಿಮ್ಮ ಮಗುವಿನ ಸಾಧನೆ ನಿಮಗೆ ಅಪಾರ ಸಂತೋಷ ನೀಡಬಹುದು. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ಮಕ್ಕಳು ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವಿಫಲವಾಗಿ ನಿಮಗೆ ನಿರಾಶೆಯುಂಟುಮಾಡಬಹುದು. ನಿಮ್ಮ ಕನಸು ನನಸಾಗಿಸಲು ನೀವು ಅವರನ್ನು ಪ್ರೋತ್ಸಾಹಿಸಬೇಕು.

### ಸಿಂಹ ರಾಶಿ

ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ – ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ. ನಿಮ್ಮ ಸಾಮಾಜಿಕ ಜೀವನವನ್ನು ನಿರ್ಲಕ್ಷಿಸಬೇಡಿ.

### ಕನ್ಯಾ ರಾಶಿ

ನಿಮ್ಮ ಕುಂದಿದ ಜೀವಂತಿಕೆ ವ್ಯವಸ್ಥೆಯಲ್ಲಿ ದೀರ್ಘಕಾಲೀನ ವಿಷದಂತ ವರ್ತಿಸುತ್ತದೆ. ನಿಮ್ಮನ್ನು ಸೃಜನಶೀಲ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಮತ್ತು ರೋಗದ ವಿರುದ್ಧ ಹೋರಾಡಲು ಪ್ರೇರೇಪಿಸುವುದು ಒಳ್ಳೆಯದು. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಇತರರಲ್ಲಿ ಅನಗತ್ಯವಾಗಿ ದೋಷಗಳನ್ನು ಹುಡುಕುವ ನಿಮ್ಮ ಬುದ್ಧಿಗೆ ಸಂಬಂಧಿಕರಿಂದ ಟೀಕೆ ಎದುರಾಗಬಹುದು. ಇದು ಕೇವಲ ಸಮಯ ವ್ಯರ್ಥ ಮಾಡುವಿಕೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು. ನೀವಿದರಿಂದ ಏನೂ ಗಳಿಸುವುದಿಲ್ಲ. ನಿಮ್ಮ ಅಭ್ಯಾಸವನ್ನು ಬದಲಾಯಿಸಿಕೊಳ್ಳುವುದೊಳ್ಳೆಯದು

### ತುಲಾ ರಾಶಿ

ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು –ಏಕೆ ಏನನ್ನಾದರೂ ಮಾಡಬಾರದು ? ಇದು ನಿಮ್ಮ ಗಳಿಕೆಯ ಶಕ್ತಿಯನ್ನು ಸುಧಾರಿಸುತ್ತದೆ. ನಿಮಗೆ ಹತ್ತಿರವಿರುವ ಯಾರಾದರೂ ಅತ್ಯಂತ ಅನಿರೀಕ್ಷಿತ ಮನಸ್ಥಿತಿಯಲ್ಲಿರುತ್ತಾರೆ. ನೀವು ಪ್ರೀತಿಸುವ ವ್ಯಕ್ತಿಯ ಕಡೆಗಿನ ನಿಮ್ಮ ಒರಟು ವರ್ತನೆ ಸಂಬಂಧದಲ್ಲಿ ಬಹಳಷ್ಟು ಅಸಾಮರಸ್ಯವನ್ನು ತರಬಹುದು. ಕೆಲಸದಲ್ಲಿನ ಸಂಕಷ್ಟಗಳು ಸಹಚರರ ಸಕಾಲಿಕ ಸಹಾಯದಿಂದ ಕಳೆದುಹೋಗುತ್ತವೆ

### ವೃಶ್ಚಿಕ ರಾಶಿ

ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ – ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ. ನೀವು ಇಡೀ ಕುಟುಂಬಕ್ಕೆ ಏಳಿಗೆ ತರುವ ಯೋಜನೆಗಳನ್ನು ಆರಿಸಿಕೊಳ್ಳಬೇಕು. ಮೂರನೇ ವ್ಯಕ್ತಿಯ ಹಸ್ತಕ್ಷೇಪ ನೀವು ಮತ್ತು ನಿಮ್ಮ ಪ್ರೀತಿಪಾತ್ರರಲ್ಲಿ ಕಂದಕ ತರಬಹುದು. ನೀವು ಹೆಚ್ಚುವರಿ ಜ್ಞಾನ ಮತ್ತು ಕೌಶಲ್ಯಗಳನ್ನು ಪಡೆಯುವಲ್ಲಿ ಸ್ವಲ್ಪ ಹೆಚ್ಚುವರಿ ಸಮಯ ಮತ್ತು ಶಕ್ತಿ ವ್ಯಯಿಸಿದರೆ ಅಗಾಧ ಪ್ರಯೋಜನ ಪಡೆಯುತ್ತೀರಿ.

### ಧನು ರಾಶಿ

ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ದುರ್ಬಲ ಆರ್ಥಿಕ ಸ್ಥಿತಿಯಿಂದ ಕೆಲವು ಪ್ರಮುಖ ಕೆಲಸಗಳು ಸ್ಥಗಿತಗೊಳ್ಳುತ್ತವೆ. ನಿಮ್ಮ ಕುಟುಂಬದ ಕಲ್ಯಾಣಕ್ಕಾಗಿ ಕೆಲಸ ಮಾಡಿ. ನಿಮ್ಮ ಕಾರ್ಯಗಳು ದುರಾಶೆಯಿಂದಲ್ಲದೇ ಪ್ರೀತಿ ಮತ್ತು ಸಕಾರಾತ್ಮಕ ದೃಷ್ಟಿಯಿಂದ ನಡೆಯಬೇಕು.

### ಮಕರ ರಾಶಿ

ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ಜನರು ನಿಮ್ಮಿಂದ ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ ತೋರುತ್ತದೆ –ಆದರೆ ಇಂದು ನಿಮ್ಮ ಖರ್ಚುಗಳಲ್ಲಿ ತುಂಬಾ ಉದಾರಿಯಾಗದಿರಲು ಪ್ರಯತ್ನಿಸಿ. ನಿಮ್ಮನ್ನು ನೀವೇ ಮುದ್ದಿಸಿಕೊಳ್ಳಲು ಮತ್ತು ನೀವು ಹೆಚ್ಚು ಆನಂದಿಸುವ ಕೆಲಸಗಳನ್ನು ಮಾಡಲು ಒಳ್ಳೆಯ ದಿನ.

### ಕುಂಭ ರಾಶಿ

ಕೆಲಸದ ನಡುವೆ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ ಮತ್ತು ತಡರಾತ್ರಿ ಕೆಲಸ ಮಾಡುವುದನ್ನು ತಪ್ಪಿಸಿ. ನೀವು ಇಂದು ಹಣ ಉಳಿಸುವುದು ಕಷ್ಟ ? ನೀವು ಇಂದು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ ನಿರ್ಲಕ್ಷ್ಯತನದಿಂದ ಕೆಲವು ಸಮಸ್ಯೆಗಳು ಖಂಡಿತ. ಕುಟುಂಬದ ಸದಸ್ಯರ ಖುಷಿಯ ಸ್ವಭಾವ ಮನೆಯಲ್ಲಿನ ವಾತಾವರಣವನ್ನು ಹಗುರಗೊಳಿಸುತ್ತದೆ. ನೀವು ಪ್ರೀತಿಯ ಮನೋಭಾವದಲ್ಲಿರುತ್ತೀರಿ ಮತ್ತು ಅದಕ್ಕೆ ಅವಕಾಶಗಳೂ ಸಾಕಷ್ಟಿರುತ್ತವೆ

### ಮೀನ ರಾಶಿ

ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ಇಂದು ನಿಮಗೆ ಅರ್ಥವಾಗಬಹುದು. ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು, ಇದು ಮನೆಯಲ್ಲಿ ಆತಂಕದ ಕ್ಷಣಗಳು ತರುತ್ತದೆ.

## ಇಂದು ತರಳಬಾಳು ಹುಣ್ಣಿಮೆ ಮಹೋತ್ಸವ ಅಂಗವಾಗಿ ಬೈಕ್ ರ್‍ಯಾಲಿ

**ದಾವಣಗೆರೆ:** ಚಿತ್ರದುರ್ಗ ತಾಲೂಕಿನ ಭರಮಸಾಗರದಲ್ಲಿ ಇದೆ ಫೆಬ್ರವರಿ 4 ರಿಂದ 12 ರವರೆಗೆ ನಡೆಯಲಿರುವ 76 ನೇ ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದಿಂದ ಭರಮಸಾಗರದವರೆಗೆ ಬೃಹತ್ ಬೈಕ್ ರ್‍ಯಾಲಿಯ ಮೂಲಕ ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾದೀಶ ಶ್ರೀ ತರಳಬಾಳು ಜಗದ್ಗುರು 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಕರೆತರಲಾಗುವುದು ಎಂದು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಇಂದು ಭರಮಸಾಗರದ ನಿರಂಜನ ಮೂರ್ತಿ ಕಲ್ಯಾಣ ಮಂಟಪದಲ್ಲಿ ನಡೆದ ಶ್ರೀ ತರಳಬಾಳು ಶಿವಸೈನ್ಯ ರಾಜ್ಯ ಘಟಕದ ಪದಾಧಿಕಾರಿಗಳ ಸಭೆಯಲ್ಲಿ 76ನೇ ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಬೈಕ್ ರ್‍ಯಾಲಿಯನ್ನು ಶ್ರೀ ತರಳಬಾಳು ಶಿವಸೈನ್ಯ ರಾಜ್ಯ ಘಟಕದ ನೇತೃತ್ವದಲ್ಲಿ ಹಮ್ಮಿಕೊಂಡು ಆ ಮೂಲಕ ಹುಣ್ಣಿಮೆಗೆ ಶುಭ ಕೋರಬೇಕೆಂದು ತೀರ್ಮಾನಿಸಲಾಯಿತು.

ಬೈಕ್ ರ್‍ಯಾಲಿಯು ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಿರಿಗೆರೆಯಿಂದ ಫೆ 4 ರ ಬೆಳಗ್ಗೆ 10 ಗಂಟೆಗೆ ಪ್ರಾರಂಭಗೊಂಡು ಭರಮಸಾಗರ ಹೋಬಳಿಯ ಸುಮಾರು 30 ಹಳ್ಳಿಗಳ ಮೂಲಕ ಸಾಗಿ ಸುಮಾರು 5000 ಬೈಕ್ ರ್‍ಯಾಲಿಯ ಮೂಲಕ ಸಂಜೆ ನಾಲ್ಕು ಗಂಟೆಗೆ ಭರಮಸಾಗರದಲ್ಲಿ ನಡೆಯಲಿರುವ ಶ್ರೀ ತರಳಬಾಳು ಹುಣ್ಣಿಮೆ ಮಹೋತ್ಸವದ ಮಹಾ ಮಂಟಪಕ್ಕೆ ತಲುಪುವುದು.

ಭರಮಸಾಗರ ಹೋಬಳಿಯ ಭಕ್ತರ ಆಶಯದಂತೆ ಅಂದು ಸಂಜೆ ನಾಲ್ಕು ಗಂಟೆಗೆ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ತೆಪ್ಪೋತ್ಸವ ಕಾರ್ಯಕ್ರಮವನ್ನು ಭರಮಸಾಗರದ ಕೆರೆಯಲ್ಲಿ ಹಮ್ಮಿಕೊಳ್ಳಲಾಗಿದೆ.

***ವಿಶೇಷ ಸೂಚನೆ* : ಫೆಬ್ರವರಿ 4 ರಿಂದ 12 ರವರೆಗೆ ನಡೆಯುವ ತರಳಬಾಳು ಹುಣ್ಣಿಮೆಗೆ ದಾವಣಗೆರೆಯಿಂದ ಭರಮಸಾಗರಕ್ಕೆ ತೆರಳುವ ಭಕ್ತಾದಿಗಳಿಗೆ ಹೆಬ್ಬಾಳು ಟೋಲ್ ನಲ್ಲಿ ಉಚಿತ ಪ್ರವೇಶ ಕಲ್ಪಿಸಲಾಗಿರುತ್ತದೆ. ತಮ್ಮ ವಾಹನಗಳಿಗೆ ಶಿವಧ್ವಜ ಕಟ್ಟಿಕೊಂಡ ಭಕ್ತರಿಗೆ ಉಚಿತ ಪ್ರವೇಶವಿರುತ್ತದೆ.**

ಈ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಹಾಗೂ ಸರ್ವ ಸಮಾಜದ ಬಾಂಧವರು ಭಾಗವಹಿಸಿ ಬೈಕ್ ರ್‍ಯಾಲಿಯನ್ನು ಹಾಗೂ 76ನೇ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಶ್ರೀ ತರಳಬಾಳು ಶಿವಸೈನ್ಯ ರಾಜ್ಯ ಘಟಕ ದಾವಣಗೆರೆ ಇವರು ಕೋರಿದ್ದಾರೆ.

ಸಭೆಯಲ್ಲಿ ಶಶಿಧರ ಹೆಮ್ಮನ ಬೇತೂರು, ಮೋಹನ್ ಸಿರಿಗೆರೆ,

ಕುಮಾರ್ ಮೆಳ್ಳೆ ಕಟ್ಟೆ, ಬಸವರಾಜ್ ಸಿರಿಗೆರೆ, ಶೈಲೇಶ್ ಚೌಲಹಳ್ಳಿ, ಶ್ರೀನಿವಾಸ್ ರಾಮಘಟ್ಟ, ಸಿದ್ದೇಶ್ ನಂದಿ ಕಂಬ, ರಾಕೇಶ್ ಸಾತಿ, ಲಿಂಗರಾಜ್ ನಾಗನೂರು, ಅಶೋಕ್ ಹೊನ್ನ ನಾಯಕನಹಳ್ಳಿ, ಮಲ್ಲಿಕಾರ್ಜುನ್ ಮೆಳ್ಳೆಕಟ್ಟೆ, ಸಂತೋಷ್ ಗಂಗನಕಟ್ಟೆ, ಮತ್ತಿತರ ಪದಾಧಿಕಾರಿಗಳು ಹಾಗೂ ಗಣ್ಯರು ಹಾಜರಿದ್ದರು.

## ಚಿತ್ರಕಲೆಯಲ್ಲಿ ಮಕ್ಕಳಿಗೆ ಒಲವು ಮೂಡಿಸುವ ಕಾರ್ಯಗಾರ



**ಸಂತೆಬೆನ್ನೂರು:** ಯೂನಿವರ್ಸಿಟಿ ಕಾಲೇಜ್ ಆಫ್ ವಿಜುವಲ್ ಆರ್ಟ್ಸ್ ಅಲುಮ್ನಿ ಅಸೋಸಿಯೇಷನ್ (ರಿ.) ಹಾಗೂ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ ಇವರ ವತಿಯಿಂದ 60 ನೇ ವರ್ಷದ ವಜ್ರಮಹೋತ್ಸವ ಸಂಭ್ರಮ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ ಹಾಗೂ ಯುಕೊವಾ ಕಲಾವಿದರಿಂದ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಸಂತೆಬೆನ್ನೂರಿನ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಜಯಪ್ಪ.ಎಲ್ ವಹಿಸಿಕೊಂಡಿದ್ದರು. ಇವರು ಮಾತನಾಡುತ್ತಾ ಈಗಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ವಿವಿಧ ಕ್ಷೇತ್ರಗಳ ಹುದ್ದೆಗಳಿಗೆ ಪ್ರಾಮುಖ್ಯತೆ ಕೊಡುವುದು ನಾವು ಕಾಣುತ್ತೇವೆ ಇಂತಹ ಪಠ್ಯೇತರ ಚಟುವಟಿಕೆಗಳಿಗೆ ಸಮಾನವಾಗಿ ಆದ್ಯತೆ ನೀಡಬೇಕಾಗಿದೆ ಇಂದಿನ ದಿನಗಳಲ್ಲಿ ಕಲೆ ಸಾಹಿತ್ಯ ನಾಟಕ ಇಂತಹ ಹಲವಾರು ಚಟುವಟಿಕೆಗಳು ಕಡಿಮೆಯಾಗುತ್ತಿರುವುದು ನಾವು ಕಾಣುತ್ತೇವೆ ಇಂತಹ ಕ್ಷೇತ್ರವನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಬೆಳೆಸಬೇಕಾಗಿದೆ ಮಕ್ಕಳ ಮನೋವಿಕಾಸಕ್ಕೆ ಮತ್ತು ಏಕಾಗ್ರತೆಗೆ ಚಿತ್ರಕಲೆ ಸಹಕಾರಿಯಾಗುತ್ತದೆ, ಮಕ್ಕಳ ಪ್ರತಿಭೆ ಹೊರತೆಗೆಯುವುದೇ ಶಿಕ್ಷಣ, ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಜಯಣ್ಣ.ಎಂ.ಎನ್, ವಿಶ್ವವಿದ್ಯಾನಿಲಯ ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜೈರಾಜ್ ಚಿಕ್ಕಪಾಟೀಲ್ ಮಾತನಾಡಿ ಮಕ್ಕಳಿಗೆ ಕಾಲೇಜಿನ ಚಿತ್ರಕಲಾ ಶಿಕ್ಷಣದ ಬಗ್ಗೆ ವಿವಿಧ ರೀತಿಯ ಕೋರ್ಸ್ ಗಳ ಬಗ್ಗೆ ಮತ್ತು ಅದರ ಮಹತ್ವದ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದ ಯಶಸ್ವಿಗೆ ಶ್ರೀ ದಿವಾಕರ್.ಎಂ.ಸಿ ಕಾರಣರಾದರು.

ಈ ಸಂದರ್ಭದಲ್ಲಿ ಮಕ್ಕಳಿಗೆ ವಿಭಿನ್ನವಾಗಿ ಮತ್ತು ಸರಳ ವಿಧಾನಗಳಲ್ಲಿ ಕಲಾವಿದರುಗಳಾದ ಶ್ರೀ ಅಚ್ಯುತಾನಂದ.ಬಿ ಭಾವಚಿತ್ರ ರಚನೆ, ಶ್ರೀ ಜಕಣಾಚಾರಿ ಸಿ ಮಾಯಾಚಾರಿ, ನಿಸರ್ಗ ಚಿತ್ರ ರಚನೆ, ಶ್ರೀ ಶಿವಕುಮಾರ್ ಕುಂಬಾರ್ ಜೇಡಿಮಣ್ಣಿನ ಕಲೆಯನ್ನು ಮಕ್ಕಳಿಗೆ ಪ್ರಾತ್ಯಕ್ಷಿಕೆ ಕೊಡುವುದರ ಮುಖಾಂತರ ತೋರಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮಕ್ಕಳು ಶಾಲೆಯ ಸಿಬ್ಬಂದಿವರ್ಗ ಮತ್ತು ಯುಕೋವಾ ಸದಸ್ಯರುಗಳಾದ ಚಂದ್ರಶೇಖರ್ ಎಸ್ ಸಂಗಾ, ಡಾ.ಗಿರೀಶ್ ಎಂ ಕೆ, ರಾಮು ಎಂ, ಶ್ರೀಮತಿ ಜಯಶ್ರೀ, ವೆಂಕಟೇಶ್, ಉಪಸ್ಥಿತಿ ಇದ್ದರು.

ಜೆ.ಡಿ ದ್ಯಮೇಶ್ ಸ್ವಾಗತ ಕೋರಿದರು, ಎಲ್ ಮಲ್ಲೇಶಿ ವಂದನಾರ್ಪಣೆ ನಿರ್ವಹಿಸಿದರು.

## ನಿತ್ಯ ಜೀವನದಲ್ಲಿ ಕನ್ನಡತನದ ಸೊಗಡನ್ನಿರಿಸಿಕೊಳ್ಳಿ



**ದಾವಣಗೆರೆ:** ನಮ್ಮ ದೈನಂದಿನ ಬದುಕಿನಲ್ಲಿ ಕನ್ನಡದ ಕಂಪನ್ನು ಕವಿ, ಸಾಹಿತಿಗಳ ಆಶಯದಂತೆ ಆಚರಣೆಯಲ್ಲಿರಿಸಿಕೊಳ್ಳಬೇಕು. ನಿತ್ಯ ಜೀವನದಲ್ಲಿ ಕನ್ನಡತನದ ಸೊಗಡನ್ನಿರಿಸಿಕೊಳ್ಳಬೇಕು ಎಂದು ದಾವಣಗೆರೆ ತಾಲ್ಲೂಕು 11ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಶ್ರೀ ಶಿವಾನಂದ ಗುರೂಜಿ ನುಡಿದರು.

ಶನಿವಾರ ನಗರದ ಕುವೆಂಪು ಕನ್ನಡಭವನದಲ್ಲಿ ಏರ್ಪಡಿಸಿದ್ದ ದಾವಣಗೆರೆ ತಾಲ್ಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೀವನದಲ್ಲಿ ಬೆಳಕು–ಕತ್ತಲೆ, ಶುಭ–ಅಶುಭ, ಬಲ–ಎಡ, ಹುಣ್ಣಿಮೆ–ಅಮವಾಸ್ಯ, ಹಗಲು–ರಾತ್ರಿ ಎಂಬ ಕಲ್ಪನೆಗೆ ಒಳಗಾಗುವುದು ಸರಿಯಲ್ಲ. ಇವೆಲ್ಲವೂ ಪ್ರಕೃತಿಯಲ್ಲಿನ ಕ್ರಮಗಳಾಗಿವೆ. ಇವುಗಳಾಚೆ ನಿಂತು, ಇದಕ್ಕೆ ಪೂರಕವಾಗುವಂತೆ, ಹೃನ್ಮನಗಳು ಅರಳುವಂತೆ ಸಾಹಿತ್ಯ ಕೃತಿಗಳನ್ನು ಅವಲೋಕಿಸುವ ಪ್ರಯತ್ನ ನಡೆಯಬೇಕು ಎಂದು ಅವರು ನುಡಿದರು.

ಹಬ್ಬಗಳಲ್ಲಿ ಕುಡಿತ, ಜೂಜಾಟಗಳ ವಿಕೃತಿ ನಿಲ್ಲಬೇಕು. ಹಿತ–ಮಿತ ಆಹಾರ ಸೇವನೆಯಿಂದ ಆರೋಗ್ಯ ಕಾಪಾಡಿಕೊಳ್ಳಬೇಕು. ನಾವಿದ್ದಲ್ಲೇ, ನಮ್ಮಲ್ಲೇ ದೇವರಿದ್ದಾನೆ ಎಂಬ ತಿಳುವಳಿಕೆಯೊಂದಿಗೆ ನಮ್ಮೊಳಗಣ ರಾಕ್ಷಸೀ ಪ್ರವೃತ್ತಿ ಕೈಬಿಟ್ಟು, ಕನ್ನಡ ಮಾತೆಯ ನಿಜ ಪುತ್ರರಾಗಿ ಬಾಳುವುದನ್ನು ಕಲಿಯಬೇಕು ಎಂದು ಕರೆ ನೀಡಿದರು.

ಸಂಕೇತದ ಹಿಂದಿನ ತತ್ವಗಳನ್ನು ನಮ್ಮ ದೈನಂದಿನ ಬದುಕಿನಲ್ಲಿರಿಸಿಕೊಳ್ಳದೆ, ಲಂಗು–ಲಗಾಮಿಲ್ಲದ ಕುದುರೆಯಂತೆ ಓಡುವುದು ಅಪರಾಧವಾಗಿದೆ. ಗಣಪತಿಯನ್ನು ನೀರಲ್ಲಿ ಮುಳುಗಿಸುವುದೆಂದರೆ ನಾವು ತತ್ವಗಳನ್ನಾಚರಿಸದಿದ್ದಲ್ಲಿ ಸತ್ತಂತೆ ಎಂಬ ಸಂದೇಶವಿದೆ. ಶಿವರಾತ್ರಿ ಹಬ್ಬದಲ್ಲಿ ಸದಾ ಜಾಗೃತನಾಗಿರಬೇಕೆಂಬ ಸಂದೇಶವಡಗಿದೆ.

ರಾತ್ರಿಯೆಲ್ಲಾ ದೂರದರ್ಶನ, ಸಿನಿಮಾ ಅಥವಾ ಇಸ್ಪೀಟ್ ಆಟದಲ್ಲಿ ಮಗ್ನರಾಗುವುದು ಹುಚ್ಚುತನದ ಆಚರಣೆ. ಗಣಪತಿ ಆಕೃತಿಯಲ್ಲಿರುವ ಸಂದೇಶವನ್ನು ಅರ್ಥ ಮಾಡಿಕೊಂಡು ಗಣೇಶ ಚತುರ್ಥಿ ಆಚರಿಸಬೇಕು. ಹಬ್ಬ–ಹರಿದಿನಗಳು ಅನುಭಾವಿಗಳು ಮೆಚ್ಚುವಂತೆ ಇರಬೇಕು ಎಂದು ಅವರು ಸಲಹೆ ನೀಡಿದರು.

ಹಿತವಾದ ಆಹಾರವನ್ನು ಮಿತವಾಗಿ ಸೇವಿಸುವುದು, ಕಾಲಮಾನಕ್ಕೆ ಅನುಸರಿಸಿ ಆಹಾರ ಸೇವನೆ ಇದ್ದರೆ ಯಾವುದೇ ರೋಗಗಳ ಕಾಟವಿರದು. ಒಂದು ವೇಳೆ ರೋಗ ಬಂದರೆ ಆಯುರ್ವೇದ, ವ್ಯಾಯಾಮ, ಪ್ರಾಣಾಯಾಮ, ನಿಯಮಿತ ಆಹಾರ ಸೇವನೆಯಿಂದ ದೂರ ಮಾಡಬಹುದು. ಮೊಬೈಲ್ ದಾಸರಾಗದೆ ಸತ್ಯಶುದ್ಧ ಆಚರಣೆಗಳಲ್ಲಿ ತೊಡಗಿಸಿಕೊಳ್ಳಬೇಕು. ಮೊಬೈಲ್, ಹೋಟೆಲ್ ನಮಗಾಗಿ ಇರಲಿ. ನಾವು ಅವುಗಳಿಗಾಗಿ ಇರುವುದು ಬೇಡ. ಕೆಟ್ಟ ಚಟಗಳ ದಾಸರಾಗದೆ, ಹಿರಿಯರು ಮೆಚ್ಚುವ ಸದಾಚಾರಗಳು ನಮಗಿರಲಿ ಎಂದು ಅವರು ತಮ್ಮದೇ ವಚನವೊಂದನ್ನು ಉಲ್ಲೇಖಿಸಿ ಸೂಚ್ಯವಾಗಿ ಹೇಳಿದರು.

ಸಮ್ಮೇಳನವನ್ನು ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ ಶೆಟ್ಟಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ತಾಲೂಕು ಅಧ್ಯಕ್ಷೆ ಸುಮತಿ ಜಯಪ್ಪ, ನಿಕಟಪೂರ್ವ ಸಮ್ಮೇಳನಾಧ್ಯಕ್ಷೆ ಬಿ.ಟಿ. ಜಾಹ್ನವಿ, ಹಿರಿಯ ಸಾಹಿತಿ ಡಾ. ಲೋಕೇಶ ಅಗಸನಕಟ್ಟೆ, ಮಹಾನಗರ ಪಾಲಿಕೆ ಸದಸ್ಯರಾದ ಗೀತಾ ದಿಳ್ಯಪ್ಪ, ವೀಣಾ ನಂಜಪ್ಪ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ ಒಡೇನಪುರ, ಮಾಜಿ ಜಿಲ್ಲಾಧ್ಯಕ್ಷ ಕೆ.ಶಿವಶಂಕರ, ಕಸಾಪ ಪದಾಧಿಕಾರಿಗಳಾದ ಜಿಗಳಿ ಪ್ರಕಾಶ್, ಬಿ.ದಿಳ್ಳೆಪ್ಪ, ಕೆ.ಪಿ.ಲಿಂಗರಾಜ, ನಾಗರಾಜ ಸಿರಿಗೆರೆ, ದಾಗಿನಕಟ್ಟೆ ಪರಮೇಶ್ವರಪ್ಪ, ವೀಣಾ ಕೃಷ್ಣಮೂರ್ತಿ ಕಸಾಪ ಪದಾಧಿಕಾರಿಗಳು ಉಪಸ್ಥಿತರಿದ್ದರು.

### ಹೊಸವರ್ಷವನ್ನು ಯುಗಾದಿಯಂದೇ ಆಚರಿಸೋಣ

ಹೊಸ ವರ್ಷದ ಆಚರಣೆಯಲ್ಲಿ ಕನ್ನಡಿಗರು ತಪ್ಪು ಹೆಜ್ಜೆಯಲ್ಲಿ ನಡೆಯುತ್ತಿರುವುದು ಬೇಸರದ ಸಂಗತಿ. ಜನವರಿ 1 ರಂದು ಹೊಸ ವರ್ಷವೆಂದು ಕುಪ್ಪಳಿಸಿ ಕುಣಿಯುವುದು ಹಿರಿಯ ಸಾಹಿತ್ಯಾಸಕ್ತರಿಗೆ ದ್ರೋಹ ಬಗೆದಂತೆ. ಕವಿ ದ.ರಾ. ಬೇಂದ್ರೆಯವರ ಯುಗ ಯುಗಾದಿ ಕಳೆದರೂ 'ಯುಗಾದಿ ಮರಳಿ ಬರುತಿದೆ' ಎಂಬ ಕಾವ್ಯದ ಆಶಯದಂತೆ ಗಣ್ಯ ಸಾಹಿತ್ಯಾಸಕ್ತರು ಯುಗಾದಿಯೇ ಹೊಸ ವರ್ಷದ ಆರಂಭವೆಂದು ನಿರ್ಣಯಿಸಿದ್ದಾರೆ. ಇದಕ್ಕೆ ಹಿರಿಯ ಸಾಹಿತಿಗಳು, ಕವಿಗಳು ಹಲವು ರೀತಿಯ ಕಾವ್ಯ, ಪ್ರಬಂಧಗಳನ್ನು ಮಂಡಿಸಿದ್ದಾರೆ. ನಾವು ಇನ್ನಾದರೂ ಹೊಸ ವರ್ಷದ ಹಬ್ಬವನ್ನು ಯುಗಾದಿಯಂದೇ ಆರಂಭಿಸಬೇಕು ಎಂದರು.

## ರಥಸಪ್ತಮಿ ದಿನಾಚರಣೆ

**ದಾವಣಗೆರೆ:** ದಾವಣಗೆರೆಯ ಶ್ರೀ ಗಾಯತ್ರಿ ದೇವಿಯ ಆಧ್ಯಾತ್ಮ ಪರಂಪರೆಯ ಭಕ್ತರ ಸಮೂಹ ಶ್ರೀ ಗಾಯತ್ರಿ ಪರಿವಾರದಿಂದ ಧಾರ್ಮಿಕ ಪರಂಪರೆಯ ಸದ್ಭಕ್ತರಿಗೆ ಒಂದು ಸುವರ್ಣಾವಕಾಶ ಸಂದೇಶ.

ಫೆಬ್ರವರಿ 5 ರಂದು ಬುಧವಾರದಂದು ರಥ ಸಪ್ತಮಿ ದಿನಾಚರಣೆ ದಿನಾಚರಣೆ ಇದ್ದು ಅಂದು ಬೆಳಿಗ್ಗೆ ಸೂರ್ಯೋದಯದ ಸಂದರ್ಭದಲ್ಲಿ ಸದ್ಭಕ್ತರು ತಮ್ಮ ತಮ್ಮ ಮನೆಯಲ್ಲೇ ತಲೆ ಸ್ನಾನ ಮಾಡಿ ಕಣ್ಣಿಗೆ ಕಾಣುವ ಕರ್ತವ್ಯನಿಷ್ಠೆಯ ಸಮಯ ಪ್ರಜ್ಞೆಯ ಸೂರ್ಯ ದೇವರಿಗೆ ತಾಂಬ್ರದ ಚಂಬಿನಲ್ಲಿ ನೀರೆರೆದು ಶ್ರೀ ಗಾಯತ್ರಿ ಮಂತ್ರದ ಪಠಣದೊಂದಿಗೆ ಪೂಜೆ ಸಲ್ಲಿಸಿದರೆ ನಮ್ಮ ನಿಮ್ಮೆಲ್ಲರ ಕುಟುಂಬದ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ ಜತೆಗೆ ಸೂರ್ಯ ದೇವನು ಹುಟ್ಟಿದ ದಿನಾಚರಣೆಯಂದು ಏಳು ಕುದುರೆಗಳ ರಥದಲ್ಲಿ ಕುಳಿತು ಇಡೀ ಪ್ರಪಂಚಕ್ಕೆ ಒಳ್ಳೆಯ ಸಂದೇಶದೊಂದಿಗೆ ಪೂಜೆ ಸಲ್ಲಿಸಿದ ಎಲ್ಲರಿಗೂ ಅನಾರೋಗ್ಯದ ಆರೋಗ್ಯ ಭಾಗ್ಯ ಅಷ್ಟೈಶ್ವರ್ಯ ಪ್ರಾಪ್ತಿ ಸಿಗುತ್ತದೆ.

ಶ್ರೀ ಗಾಯತ್ರಿ ಪರಿವಾರದ ಸಲಹೆಗಾರರಾದ ಉತ್ತಮಚಂದ್ ಗಾಂಧಿಯವರು ಆಧ್ಯಾತ್ಮ ಕಾಳಜಿಯೊಂದಿಗೆ ಈ ಸಂದೇಶ ಪ್ರಕಟಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 9449603008 ಈ ಸನೀಹವಾಣಿಗೆ ಸಂಪರ್ಕಿಸಬಹುದು ಎಂದು ಶ್ರೀ ಗಾಯತ್ರಿ ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## ತೋಳಹುಣಸೆಯಲ್ಲಿ ಯೋಧ ಶ್ಯಾಮಾ ನಾಯ್ಕ ಅವರಿಗೆ ಸ್ವಾಗತ



**ದಾವಣಗೆರೆ:** ತೋಳಹುಣಸೆ ಗ್ರಾಮದ ಶ್ಯಾಮಾ ನಾಯ್ಕ್ ಸೈನಿಕರಾಗಿ 22 ವರ್ಷಗಳ ಸೇವೆ ಸಲ್ಲಿಸಿ ಶನಿವಾರ ನಗರಕ್ಕೆ ಆಗಮಿಸಿದ ವೇಳೆ ಹರಿಹರದ ಶಾಸಕರಾದ ಬಿ.ಪಿ. ಹರೀಶ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಸೈನಿಕರು , ಕುಟುಂಬಸ್ಥರು , ಗೆಳೆಯರು ಗ್ರಾಮದ ಮುಖಂಡರು ಹಾಜರಿದ್ದರು.

## ಫೆ.9 ಧ್ಯಾನ ಕಾರ್ಯಾಗಾರ ಆಯೋಜನೆ

**ದಾವಣಗೆರೆ:** ಬ್ರಹ್ಮಶ್ರೀ ಪಿತಾಮಹ ಸುಭಾಷ್ ಪತ್ರೀಜಿಯವರ ದಿವ್ಯ ಪ್ರೇರಣೆಯೊಂದಿಗೆ ಫೆಬ್ರವರಿ 9 ರಂದು ದಾವಣಗೆರೆಯ ನಿಜಲಿಂಗಪ್ಪ ಬಡಾವಣೆಯ ಶ್ರೀ ನಿಮಿಷಾಂಬ ಸಮುದಾಯ ಭವನದಲ್ಲಿ ಧ್ಯಾನ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಧ್ಯಾನ ಪ್ರಗತಿ ಪರಿಷತ್ತಿನ ಶೇಖರಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಅಂದು ಬೆಳಿಗ್ಗೆ 9.30 ರಿಂದ ಸಂಜೆ 5 ರ ವರೆಗೆ ಹೊಸಪೇಟೆಯ ಕರ್ನಾಟಕ ಧ್ಯಾನ ಪ್ರಗತಿ ಪರಿಷತ್ತಿನ ರಾಜ್ಯಾಧ್ಯಕ್ಷ ಟಿ. ಹರಿಶಂಕರ್ ಧ್ಯಾನ ಕಾರ್ಯಾಗಾರ ನಡೆಸಿಕೊಡಲಿದ್ದು, ಕಾರ್ಯಾಗಾರ ಉಚಿತವಾಗಿ ನಡೆಯಲಿದೆ ಎಂದರು.

ಇಂದಿನ ಒತ್ತಡದ ಜೀವನದಲ್ಲಿ ನೆಮ್ಮದಿಯ ಕಂಡುಕೊಳ್ಳಲು ಅನೇಕರು ಹುಡುಕಾಟ ನಡೆಸುತ್ತಲೇ ಇರುತ್ತಾರೆ. ಜೀವನವನ್ನು ಹೇಗೆ ನೆಮ್ಮದಿಯಿಂದ ನಡೆಸಬಹುದು ಎಂದು ತಿಳಿಸಿಕೊಡುವ ಉದ್ದೇಶದಿಂದ ಈ ಕಾರ್ಯಾಗಾರ ನಡೆಸಿಕೊಡಲಿದ್ದು, ಸುಮಾರು 700–800 ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.




ಸುದ್ದಿಗೋಷ್ಠಿಯಲ್ಲಿ ರವಿಕುಮಾರ್, ಕರಿಬಸಪ್ಪ, ಬಕ್ಕೇಶ್, ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.

## ಶ್ರೀಲೇಖಾಚಿತ್ರ ಮಂದಿರದಲ್ಲಿ ಟಾರ್ ಟೈಸ್‌ಚಿತ್ರ ಪ್ರದರ್ಶನ

**ಚಿಕ್ಕಮಗಳೂರು:** ಚಿಕ್ಕಮಗಳೂರಿನ ಯುವ ಪ್ರತಿಭೆಯಾದ ಸೂರಜ್ ಶೆಟ್ಟಿ ನಟಿಸಿರುವ ಟಾರ್‌ಟೈಸ್‌ಕನ್ನಡಚಿತ್ರವು ಶ್ರೀಲೇಖಾ ಚಿತ್ರ ಮಂದಿರದಲ್ಲಿ ಪ್ರದರ್ಶನಗೊಳ್ಳುತ್ತಿದ್ದು ಚಿಕ್ಕಮಗಳೂರಿನ ಜನತೆ ಈ ಚಿತ್ರವನ್ನು ವೀಕ್ಷಿಸಿ ಯುವ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು ಎಂದು ಮಾಜಿ ನಗರ ಸಭೆಅಧ್ಯಕ್ಷ ಪುಷ್ಪರಾಜ್ ಹೇಳಿದರು.

ನಗರದ ಕೆಇಬಿ ಕನಕ ವೃತ್ತದಲ್ಲಿಚಿತ್ರದ ನಾಯಕ ನಟರಾದ ಸೂರಜ್ ಶೆಟ್ಟಿಯವರನ್ನು ಸನ್ಮಾನಿಸಿ ಮಾತನಾಡಿದಅವರುಟಾರ್‌ಟೈಸ್ ಎಂಬ ಕನ್ನಡಚಿತ್ರದಲ್ಲಿ ನಾಯಕ ನಟನಾಗಿ ನಟಿಸಿರುವುದರೊಂದಿಗೆ ಚಿಕ್ಕಮಗಳೂರಿನ ಹೆಮ್ಮೆಯಾಗಿ ಗುರುತಿಸಿಕೊಂಡಿದ್ದಾರೆ.ಪ್ರಥಮ ಬಾರಿಗೆ ಅಭಿನಯಿಸಿದರು ಅನುಭವದ ನಟನಾಗಿ ಕಾಣಿಸಿಕೊಂಡಿದ್ದಾರೆ ಎಂದಅವರುಚಿತ್ರವು ಹೆಚ್ಚು ಪ್ರದರ್ಶನಗೊಂಡುಇನ್ನು ಹಲವಾರು ಸಿನಿಮಾಗಳಲ್ಲಿ ನಟಿಸುವಂತ ಅವಕಾಶಗಳು ದೊರಕಲಿ ಎಂದು ಆಶೈಸಿದರು.

ಚಿಕ್ಕಮಗಳೂರಿನ ಯುವ ಪ್ರತಿಭೆಟಾರ್‌ಟೈಸ್‌ಚಿತ್ರದ ನಾಯಕ ನಟ ಸೂರಜ್ ಶೆಟ್ಟಿ ಮಾತನಾಡಿಚಿಕ್ಕಂದಿನಿಂದಲೂಚಿತ್ರರಂಗದಲ್ಲಿದಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡಿದ್ದೆ.



ನಟನೆಯಲ್ಲಿ ಪರಿಣಿತನಾಗಲುಅಭಿನಯತರಂಗ ಎಂಬ ರಂಗಭೂಮಿ ಶಾಲೆಯಲ್ಲಿತರಬೇತಿ ಪಡೆದು ಸ್ವತಃತಂಡ ರಚಿಸಿಕೊಂಡು ಮೊದಲ ಬಾರಿಗೆಚಿತ್ರದಲ್ಲಿ ನಟಿಸಿದ್ದೇನೆ. ಪ್ರತಿಯೊಬ್ಬರುಕುಟುಂಬ ಸಮೇತರಾಗಿಚಿತ್ರ ಮಂದಿರಕ್ಕೆ ಬಂದುಚಿತ್ರವನ್ನು ವೀಕ್ಷಿಸಿ ಪ್ರೋತ್ಸಯಿಸುವುದರೊಂದಿಗೆಚಿತ್ರದ ಯಶಸ್ಸಿಗೆ ಕಾರಣರಾಗಿಎಂದು ವಿನಂತಿಸಿದರು.

## ನಿಧನ ಸುದ್ದಿಗಳು

### ದ್ರಾಕ್ಷಾಯಣಮ್ಮನಿಧನ

**ದಾವಣಗೆರೆ :** ಸಿಟಿ ನಿಟ್ಟುವಳ್ಳಿ ಹೊಸ ಬಡಾವಣೆಯ ವಾಸಿ 1ನೇ ಮೇನ್, 4ನೇ ಕ್ರಾಸ್, ಕಲ್ಪತರು ಛತ್ರದ ಹಿಂಭಾಗ ಕುರುಡಿ ಮಠದ ದಿ। ಕೆ.ಎಂ. ಕೊಟ್ರಯ್ಯನವರ ಮಗನಾದ ಕೆ.ಎಂ. ವಿಶ್ವನಾಥ ಇವರ ಧರ್ಮಪತ್ನಿ ಶ್ರೀಮತಿ ದ್ರಾಕ್ಷಾಯಣಮ್ಮದಿನಾಂಕ: 02.02.20250 3 7.30 ನಿಧನರಾಗಿರುತ್ತಾರೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು, ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ದಿನಾಂಕ : 03.02.2025ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗಿದೆ. **ಇಂತಿ ದುಃಖತಪ್ತರು :** ಕೆ.ಎಂ. ವಿಶ್ವನಾಥ, ಕೆ.ಎಂ. ವಿನಯ್ ಕುಮಾರ್, ಕೆ.ಎಂ. ವಿಜಯ್ ಕುಮಾರ್ ಮತ್ತು ಅಪಾರ ಬಂಧು–ಮಿತ್ರರು, ಕುರುಡಿ ಮಠದ ವಂಶಸ್ಥರು, ಹಾಲಸ್ವಾಮಿ ಮಠದ ವಂಶಸ್ಥರು .

### ನಾಗರಕಟ್ಟೆ ಚಳಗೇರಿ ಶ್ರೀಮತಿ ಹನುಮಂತಮ್ಮ ನಿಧನ

**ದಾವಣಗೆರೆ :** ನಾಗರಕಟ್ಟೆ ಗ್ರಾಮದ ವಾಸಿ ದಿ.ಚಳಗೇರಿ ಬಸಪ್ಪ ಇವರ ಧರ್ಮಪತ್ನಿ ಚಳಗೇರಿ ಹನುಮಂತಮ್ಮ ಇವರು ದಿನಾಂಕ :02.02.20250 ಸಂಜೆ 7.40ಕ್ಕೆ ನಿಧನರಾದರು. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಮೃತರು 5 ಜನ ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ : 03.02.2025ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಾಗರಕಟ್ಟೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗಿದೆ. **ದುಃಖತಪ್ತರು :** ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಚಳಗೇರಿ ವಂಶಸ್ಥರು, ನಾಗರಕಟ್ಟೆ ಗ್ರಾಮಸ್ಥರು ಹಾಗೂ ಬಂಧು–ಮಿತ್ರರು.

### ಪುಟ್ಟಮ್ಮ ನಿಧನ

**ಹೊಸದುರ್ಗ:** ಮಾಜಿಸಚಿವ ಗೂಳಿಹಟ್ಟಿ ಡಿ.ಶೇಖರ್ ಅವರ ತಾಯಿ ಪುಟ್ಟಮ್ಮ (80) ಅನಾರೋಗ್ಯದಿಂದ ಸ್ವಗ್ರಾಮ ಗೂಳಿ–ಹಟ್ಟಿಯಲ್ಲಿ ಭಾನುವಾರ ಬೆಳಿಗ್ಗೆ ನಿಧನರಾದರು. ಇವರಿಗೆ ಇಬ್ಬರು ಪುತ್ರರು ಇದ್ದಾರೆ. ಸಂಜೆ ಅಂತ್ಯಕ್ರಿಯೆ ನಡೆಯಿತು.

### ಹರಿಹರದ ಪಿಸೆ ನಾಗರಾಜ್ ಐರಣಿ ನಿಧನ

**ಹರಿಹರ :** ನಗರದ ರಾಜರಾಮ್ ಕಾಲೋನಿ ರಾಮಮಂದಿರದ ಹತ್ತಿರದ ನಿವಾಸಿಯಾದ ಕರ್ನಾಟಕ ರಾಜ್ಯ ನಾಮದೇವ ಶಿಂಪಿ ಸಮಾಜದ ಮಾಜಿ ಪ್ರಧಾನ ಕಾರ್ಯದರ್ಶಿಗಳು, ಹರಿಹರ ನಾಮದೇವ ಶಿಂಪಿ ಸಮಾಜದ ಹಾಲಿ ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷರು, ಮಾಜಿ ದೂಡಾ ಸದಸ್ಯರಾದ ಪಿಸೆ ನಾಗರಾಜ್ ಐರಣಿ (66) ಇವರು ದಿನಾಂಕ 2.02.2025ರ ಭಾನುವಾರ ಸಂಜೆ 6.30ಕ್ಕೆ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.02.2025ರ ಸೋಮವಾರ ಹರಿಹರ ನಗರದ ವಿಶ್ರಾಮಘಾಟ್ ನಲ್ಲಿ ಬೆಳಿಗ್ಗೆ 10 ಗಂಟೆಗೆ ನೆರವೇರಿಸಲಾಯಿತು. ದುಃಖತಪ್ತ ಕುಟುಂಬ ವರ್ಗದವರು

## ಫೆ. 4 ರಿಂದ ಜಿಎಂ ವಿವಿಯಲ್ಲಿ ಐಪಿಎಲ್ ಮಾದರಿ 'ಜಿಎಂ ಲೀಗ್' ಕ್ರಿಕೆಟ್ ಪಂದ್ಯಾವಳಿ

**ದಾವಣಗೆರೆ:** ಜಿ.ಎಂ. ವಿಶ್ವವಿದ್ಯಾಲಯದಲ್ಲಿ ದಿವಂಗತ ಜಿ. ಮಲ್ಲಿಕಾರ್ಜುನಪ್ಪ ಅವರ ಹೆಸರಿನಲ್ಲಿ ಜಿಎಂ ಲೀಗ್ ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡಾ ಪಂದ್ಯಾವಳಿಗಳನ್ನು ಇದೇ ಪ್ರಥಮ ಬಾರಿಗೆ ಐಪಿಎಲ್ ಮಾದರಿಯಲ್ಲಿ ಆಯೋಜಿಸಲಾಗುತ್ತಿದೆ ಎಂದು ವಿವಿಯ ವಿದ್ಯಾರ್ಥಿಗಳ ವ್ಯವಹಾರಗಳ ನಿರ್ದೇಶನಾಲಯದ ನಿರ್ದೇಶಕ ಡಾ. ಹೆಚ್.ಎಸ್. ಕಿರಣ್ ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಬಹುಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಜಿಎಂ ವಿಶ್ವವಿದ್ಯಾಲಯದ ಕುಲಾಧಿಪತಿ ಜಿ.ಎಂ. ಲಿಂಗರಾಜು ತಮ್ಮ ತಂದೆ ಜಿ. ಮಲ್ಲಿಕಾರ್ಜುನಪ್ಪ ಅವರ ಕನಸಿನಂತೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಹಾಗೂ ಉನ್ನತ ಶಿಕ್ಷಣ ನೀಡುವ ಜೊತೆಗೆ ಅವರ ಹೆಸರಿನಲ್ಲಿ ಜಿಎಂ ಲೀಗ್ ಕ್ರೀಡಾ ಪಂದ್ಯಾವಳಿಗಳ ಮೂಲಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಕ್ರೀಡೆಯಲ್ಲಿ ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ದಾವಣಗೆರೆಯ ಜಿಎಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವ್ಯವಹಾರಗಳ ನಿರ್ದೇಶನಾಲಯ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ವತಿಯಿಂದ ಬರುವ ಫೆಬ್ರವರಿ 4 ರಿಂದ 15 ರವರೆಗೆ ಜಿಎಂ ವಿಶ್ವವಿದ್ಯಾಲಯದ ಕ್ರೀಡಾ ಮೈದಾನದಲ್ಲಿ ಜಿಎಂ ಲೀಗ್ ಕ್ರೀಡಾ ಹಬ್ಬ ನಡೆಯಲಿದ್ದು. 11 ದಿನಗಳ ಕಾಲ ಕ್ರಿಕೆಟ್, ವಾಲಿಬಾಲ್, ಕೊಕ್ಕೋ, ಥ್ರೋಬಾಲ್ ಪಂದ್ಯಾವಳಿಗಳನ್ನು ನಡೆಸಲಾಗುತ್ತಿದೆ ಎಂದು ಹೇಳಿದರು.

ಫೆಬ್ರವರಿ 4ರಂದು ಕುಸ್ತಿ ಪಟು, ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಪುರಸ್ಕೃತರಾದ ಕುಸ್ತಿಪಟು ಕಾರ್ತಿಕ್ ಜಿ. ಕಾಟೆ ಮುಖ್ಯ ಅತಿಥಿಗಳಾಗಿ ಆಗಮಿಸಿ, ಚಾಲನೆ ನೀಡಲಿದ್ದಾರೆ. ವಿವಿಯ ಕುಲಾಧಿಪತಿ ಜಿ.ಎಂ. ಲಿಂಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಕುಲಪತಿ ಡಾ. ಎಸ್.ಆರ್. ಶಂಕಪಾಲ್, ಸಹಕುಲಪತಿ ಡಾ. ಹೆಚ್.ಡಿ. ಮಹೇಶಪ್ಪ, ಕುಲಸಚಿವ ಡಾ. ಬಿ.ಎಸ್. ಸುನಿಲ್ ಕುಮಾರ್, ಜಿಎಂ ತಾಂತ್ರಿಕ ಮಹಾವಿದ್ಯಾಲಯದ ಆಡಳಿತಧಿಕಾರಿ ವೈ.ಯು. ಸುಭಾಷ್ ಚಂದ್ರ ಉಪಸ್ಥಿತರಿರುವರು.

ಹರಾಜು ಪ್ರಕ್ರಿಯೆ ನಡೆಸಿ ಫ್ರಾಂಚೈಸ್ ಗಳ ಮೂಲಕ ಆಟಗಾರರ ಆಯ್ಕೆಯಾಗಿದ್ದು, ಜಿಎಂ ವಿಶ್ವವಿದ್ಯಾಲಯದ ಸಹ ಕುಲಪತಿಗ ಡಾ. ಹೆಚ್.ಡಿ. ಮಹೇಶಪ್ಪ, ಜಿಎಂಐಟಿ ಪ್ರಾಂಶುಪಾಲರಾದ ಡಾ. ಸಂಜಯ್ ಪಾಂಡ ಎಂ.ಬಿ., ಜಿಎಂ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಗಿರೀಶ್ ಬೋಳ ಕಟ್ಟಿ, ಮುಖ್ಯ ಹಣಕಾಸು ಅಧಿಕಾರಿಗಳು ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ನಿರ್ದೇಶಕರು, ಡೀನ್ ಗಳು ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡೆಗಳ ಫ್ಯಾಂಚೈಸ್ ಗಳಾಗಿದ್ದಾರೆ. ಜಿಲ್ಲೆ, ತಾಲ್ಲೂಕು, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸ್ಪರ್ಧಿಸಿರುವ ವಿದ್ಯಾರ್ಥಿಗನ್ನು ಒಳಗೊಂಡಂತೆ ಬಿಎಂ ಲೀಗ್ ಗೆ ಆಟಗಾರರನ್ನು ಆಯ್ಕೆಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಒಟ್ಟು 9 ತಂಡಗಳಿದ್ದು, ಪ್ರತಿ ತಂಡದಲ್ಲಿ 20 ಆಟಗಾರರಿದ್ದಾರೆ. ವಾಲಿಬಾಲ್ ನಲ್ಲಿ ಒಟ್ಟು 8 ತಂಡಗಳಿದ್ದು, ಪ್ರತಿ ತಂಡದಲ್ಲಿ 10 ಆಟಗಾರರು ಇದ್ದಾರೆ. ಕೋ ಕೋ ಪುರುಷರ ವಿಭಾಗ ಮತ್ತು ಮಹಿಳಾ ವಿಭಾಗದಲ್ಲಿ ತಲಾ 4 ತಂಡಗಳಿದ್ದು ಈ ಎರಡು ವಿಭಾಗಗಳ ಪ್ರತಿ ತಂಡಗಳಲ್ಲಿ 12 ಆಟಗಾರರು ಇದ್ದಾರೆ. ಥೋಬಾಲ್ ನ ಮಹಿಳಾ ವಿಭಾಗದಲ್ಲಿ 6 ತಂಡಗಳಿದ್ದು ಪ್ರತಿ ತಂಡದಲ್ಲೂ ಆ ಆಟಗಾರರು ಇದ್ದಾರೆ. ಈ ಲೀಗ್ ನಲ್ಲಿ ಹೊರಗಿನ ಇತರೆ ಕಾಲೇಜುಗಳ ವಿದ್ಯಾರ್ಥಿಗಳಿಗೂ ಭಾಗವಹಿಸಲು ಅವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿ-ದರು. ಸುದ್ದಿಗೋಷ್ಠಿಯಲ್ಲಿ ಜಿಎಂ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕ ಜಿ.ಬಿ. ಅಜ್ಜಯ್ಯ ವಿದ್ಯಾರ್ಥಿ ಕ್ರೀಡಾ ಕಾರ್ಯದರ್ಶಿಗಳಾದ ಎ.ಎಸ್. ಗುರುಶಂಕರ್, ಬಿ.ಇ. ರಾಜೇಶ್ ಉಪಸ್ಥಿತರಿದ್ದರು.

## ವಿವಿಗಳು ಯೋಗ್ಯ ಮಾನವ ಸಂಪನ್ಮೂಲ ಸೃಜಿಸುವ ಶಕ್ತಿ ಕೇಂದ್ರಗಳಾಗಬೇಕು

(1ನೇ ಪುಟದಿಂದ)

ಉದ್ಯೋಗ ಬಯಸಿ ವಿದ್ಯಾಭ್ಯಾಸಕ್ಕೆ ಬರುವಂತಹ ವಿದ್ಯಾರ್ಥಿಗಳಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಸ್ಥಳೀಯವಾಗಿ ಕೆಲಸ ಮಾಡುವಂತಹ ಶಕ್ತಿ, ಸಾಮರ್ಥ್ಯ, ಜ್ಞಾನವನ್ನು ನೀಡಿ ಸಮರ್ಥರನ್ನಾಗಿಸಬೇಕು. ಆಗ ಪದವೀಧರರಾಗಿ ಅಷ್ಟೇ ಅಲ್ಲದೆ ಉದ್ಯೋಗಕಾಶ ಸಾಮರ್ಥ್ಯ ವಿದ್ಯಾರ್ಥಿಗಳಲ್ಲಿ ಕಾಣಬಹುದು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳಾದ ಶಿವಕುಮಾರ್ ಮಲ್ಲಾಡ್ ಮಾತನಾಡಿ, ಜಿಎಂ ವಿಶ್ವವಿದ್ಯಾಲಯವು ಎಲೆಕ್ಟ್ರಿಕಲ್ ವೆಹಿಕಲ್ ಸಂಬಂಧಪಟ್ಟಂತೆ ಪದವಿ ಕೋರ್ಸ್ ಪ್ರಾರಂಭಿಸಿದ್ದು, ಕರ್ನಾಟಕ ರಾಜ್ಯದಲ್ಲಿ ಈ ಪದವಿ ಪ್ರಾರಂಭಿಸಿದ ಮೊದಲ ವಿಶ್ವವಿದ್ಯಾಲಯವಾಗಿದೆ. ಈ ರೀತಿಯಾದಂತ ಕೌಶಲ್ಯ ಅಭಿವೃದ್ಧಿ ಪದವಿ ಪ್ರಾರಂಭಿಸಿದ್ದಕ್ಕೆ ಕರ್ನಾಟಕ ಸರ್ಕಾರ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆ ಪರವಾಗಿ ಅಭಿನಂದಿಸಿದರು.

ನಮ್ಮ ಇಲಾಖೆ ವತಿಯಿಂದ ಹೊಸ ಆವಿಷ್ಕಾರದ ಈ ವಿಶ್ವವಿದ್ಯಾಲಯವನ್ನು ಟ್ರೈನಿಂಗ್ ಪಾರ್ಟನರ್ ಆಗಿ ತೆಗೆದುಕೊಳ್ಳಲಾಗುವುದು. ಆಗ ಈ ವಿವಿಯು ಟ್ರೈನಿಂಗ್ ಸೆಂಟರ್ ನಡೆಸಲು ಅವಕಾಶ ನೀಡಬಹುದು, ಇಲ್ಲವೇ ವಿವಿಯಿಂದಲೇ ಟ್ರೈನಿಂಗ್ ಸೆಂಟರ್ ನಡೆಸಬಹುದು ಹಾಗೂ ಸಣ್ಣ ಕಾಲೇಜುಗಳಿಗೆ ಟ್ರೈನಿಂಗ್ ಪಾರ್ಟ್ನರ್ ಕೂಡ ಆಗಬಹುದು, ನಮ್ಮ ಇಲಾಖೆಯಿಂದಲೂ ಗೊತ್ತಿರುವ ಟ್ರೈನಿಂಗ್ ಸೆಂಟರ್ ಅನ್ನು ವಿವಿಗೆ ಕೊಡಬಹುದು ಎಂದರು.

ಇದೇ ವೇಳೆ ಜಿಎಂ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್.ಆರ್. ಶಂಕಪಾಲ್ ಅವರ ನಾಲ್ಕು ಪುಸ್ತಕಗಳು, ಜಿಎಂ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿಟಿಕಲ್ ಸೈನ್ಸ್ ಅಂಡ್ ರಿಸರ್ಚ್ ವಿಭಾಗದ 4 ಪುಸ್ತಕಗಳು, ಡಾ. ಉಮಾ ಮುರಳೀಧರ್ ಅವರ ಒಂದು ಪುಸ್ತಕವನ್ನು ಕುಲಾಧಿಪತಿಗಳಾದ ಜಿ.ಎಂ. ಲಿಂಗರಾಜು ಸೇರಿದಂತೆ ಅತಿಥಿ ಗಣ್ಯರು ಬಿಡುಗಡೆಗೊಳಿಸಿದರು.

ಗೌರವ ಅತಿಥಿಗಳಾಗಿ ಟಾಟಾ ಮೋಟರ್ಸ್ ನ ಜನರಲ್ ಮ್ಯಾನೇಜರ್ ಸಿ.ಎ. ಕಿರಣ್ ಕುಮಾರ್, ಸಹಕುಲಪತಿ ಡಾ. ಎಚ್.ಡಿ. ಮಹೇಶಪ್ಪ, ಕುಲಸಚಿವರಾದ ಡಾ. ಸುನಿಲ್ ಕುಮಾರ್ ಬಿ.ಎಸ್. ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು, ಡೀನ್ ಗಳು, ನಿರ್ದೇಶಕರು, ಅಧ್ಯಾಪಕ ವೃಂದದವರು ಭಾಗವಹಿಸಿದ್ದರು.



# ಪನಾಮಾ ಕಾಲುವೆ ಮೇಲೇಕೆ ಟ್ರಂಪ್ ಕಣ್ಣು? ವಿವಾದದ ಸುಳಿಯಲ್ಲಿ ಜಲಮಾರ್ಗ



1999ರಲ್ಲಿ ಪನಾಮಾಗೆ ಅತ್ಯಂತ ಪ್ರಮುಖ ಜಲಮಾರ್ಗದ ಕಾಲುವೆಯನ್ನು ಅಮೆರಿಕ ಹಸ್ತಾಂತರಿಸಿತ್ತು. ಆದರೆ ಇದರಲ್ಲಿ ಅನ್ಯ ರಾಷ್ಟ್ರಗಳ ಹಸ್ತಕ್ಷೇಪ ಇರಬಾರದು ಎಂಬ ಷರತ್ತನ್ನು ಪನಾಮಾ ಉಲ್ಲಂಘಿಸಿದೆ. ಕಾಲುವೆಯನ್ನು ಚೀನಾ ನಿರ್ವಹಿಸುತ್ತಿದೆ ಎಂದು ಅಮೆರಿಕಾ ಆರೋಪಿಸಿದೆ. ಕಾಲುವೆಯನ್ನು ಪಾನಾಮಾಕಾಲುವೆ ಪ್ರಾಧಿಕಾರ ನಿರ್ವಹಿಸುತ್ತಿದೆ. ಇದೊಂದು ಸ್ವತಂತ್ರ ಸಂಸ್ಥೆಯಾಗಿದ್ದು, ಪನಾಮಾ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ.

**ಅಮೆರಿಕಕ್ಕೆ ಏಕೆ ಈ ಕಾಲುವೆ ಬಹು ಮುಖ್ಯ?**

82 ಕಿ.ಮೀ. ಉದ್ದದ ಪನಾಮಾ ಕಾಲುವೆಯು ಪೆಸಿಫಿಕ್ ಸಾಗರ ಹಾಗೂ ಅಟ್ಲಾಂಟಿಕ್ ಸಾಗರವನ್ನು ಸಂಪರ್ಕಿಸುವ ಕೃತಕ ವ್ಯವಸ್ಥೆಯಾಗಿದೆ. ಇದರಿಂದಾಗಿ ಹಡಗುಗಳು ಸಾವಿರಾರು ಮೈಲಿ ದೂರ ಸಾಗುವುದನ್ನು ತಪ್ಪಿಸುವುದರ ಜತೆಗೆ, ಅವಧಿಯನ್ನು ಒಂದು ವಾರಗಳಿಗೆ ಇಳಿಸಿದೆ. ಇದನ್ನು ನಿರ್ಮಿಸುವ ಮೊದಲು ಹಡಗುಗಳು ದಕ್ಷಿಣ ಅಮೆರಿಕದ ತುದಿಯನ್ನು ತಲುಪಿ ಎರಡೂ ಸಾಗರಗಳನ್ನು ದಾಟಿ ಸಾಗಬೇಕಿತ್ತು.

ಪನಾಮಾಕಾಲುವೆಯ ನಿರ್ಮಾಣವನ್ನು ಫ್ರಾನ್ಸ್ ಆರಂಭಿಸಿತು. ಇದಕ್ಕಾಗಿ 25 ಸಾವಿರ ಕಾರ್ಮಿಕರು ಜೀವ ತೆತ್ತಿದ್ದಾರೆ. 20ನೇ ಶತಮಾನದಲ್ಲಿ ಅಮೆರಿಕವು ಕಾಲುವೆ ನಿರ್ಮಾಣವನ್ನು ಪೂರ್ಣಗೊಳಿಸಿತು. ವಸಾಹತುಶಾಹಿ ಚಳವಳಿಗಳ ಒತ್ತಡದ ಭಾಗವಾಗಿ 1977ರಲ್ಲಿ ಅಮೆರಿಕವು ಪನಾಮಾ ಮೇಲಿನ ಹಿಡತವನ್ನು ಕಾಲುವೆ ಪ್ರದೇಶಕ್ಕೆ ವಹಿಸುವುದಾಗಿ ಘೋಷಿಸಿತ್ತು. ಜತೆಗೆ ಶಾಶ್ವತವಾಗಿ ತಟಸ್ಥವಾಗಿ ಉಳಿಯುವುದಾಗಿ ಘೋಷಿಸಿತ್ತು. ಇದು ಕಾರ್ಯರೂಪಕ್ಕೆ ಬಂದಿದ್ದು 1999ರಲ್ಲಿ. ಆದರೆ ಹವಾಮಾನ ಬದಲಾವಣೆಯಿಂದ 2023 ಮತ್ತು 2024ರಲ್ಲಿ ಎದುರಾದ ಬರಗಾಲದಲ್ಲಿ ಕಾಲುವೆಗೆ ನೀರು ಪೂರೈಸುತ್ತಿದ್ದ ಕೆರೆಗಳು ಬರಿದಾದವು. ಇದರಿಂದಾಗಿ ಕಾಲುವೆ ನಿರ್ವಹಣೆಯ ಆಡಳಿತ ಮಂಡಳಿಯುಹಡುಗುಗಳ ಸಂಚಾರದ ಮೇಲೆ ನಿರ್ಬಂಧ ಹೇರಿತು. ಇದರ ಪರಿಣಾಮ ಹಡಗುಗಳು ತಮ್ಮ ಸಮಯಕ್ಕಾಗಿ ಕಾಯುವಂತಾಯಿತು.

ಆದರೆ ಈಗಲೂ ಇಲ್ಲಿನ ಪರಿಸ್ಥಿತಿ ಸಂಪೂರ್ಣ ಸರಿಯಾಗಿಲ್ಲ. ಕಾಲುವೆಮೂಲಕ ಸಂಚಾರಕ್ಕೆ ಹಡಗುಗಳಿಗೆ ಅವಕಾಶ ನೀ ಡಲಾಗಿದೆ. ಆದರೆ, ದ್ರವರೂಪದ ನೈಸರ್ಗಿಕ ಅನಿಲ ಸಾಗಿಸುವ ಹಡಗುಗಳನ್ನು ಒಳಗೊಂಡಂತೆ ಬೃಹತ್ ಕ್ಯಾರಿಯರ್ಗಳು ಪರ್ಯಾಯಮಾರ್ಗವನ್ನೇ ಈಗಲೂ ಅನುಸರಿಸುತ್ತಿವೆ.

ಜಗತ್ತಿನ 2ನೇ ಅತ್ಯಂತ ಜನನಿಬಿಡ ಅಂತರ ಸಾಗರ ಜಲಮಾರ್ಗ ಪನಾಮಾಕಾಲುವೆಯನ್ನು ಮರಳಿ ಪಡೆಯುತ್ತೇವೆ ಎಂಬ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯುಮಧ್ಯ ಅಮೆರಿಕಾದಲ್ಲಿ ಆತಂಕ ಮೂಡಿಸಿದೆ. ಅಷ್ಟಕ್ಕೂ ಈ ವಿವಾದ ಹುಟ್ಟಿದ್ದೇಕೆ ಎಂಬುದರಮಾಹಿತಿ ಇಲ್ಲಿದೆ....

**ಪನಾಮಾ ಕಾಲುವೆಯಲ್ಲಿ ಚೀನಾ ಪಾತ್ರವೇನು?**

'ಪನಾಮಾವು ಕಾಲುವೆ ಮೇಲಿನ ನಿಯಂತ್ರಣವನ್ನು ಚೀನಾಕ್ಕೆ ಬಿಟ್ಟುಕೊಟ್ಟಿದೆ. ಚೀನಾದ ಸೇನೆ ಕಾಲುವೆಯಲ್ಲಿ ಬೀಡು ಬಿಟ್ಟಿದೆ. ಆದರೆ ಇದಕ್ಕೆ ಯಾವುದೇ ಪುರಾವೆಯನ್ನು ಪನಾಮಾ ನೀಡುತ್ತಿಲ್ಲ' ಎಂಬ ಅಂಶವನ್ನು ಟ್ರಂಪ್ ಅಧ್ಯಕ್ಷರಾದ ನಂತರ ನೀಡಿದ ತಮ್ಮ ಚೊಚ್ಚಲ ಭಾಷಣದಲ್ಲಿ ಹಲವು ಬಾರಿ ಉಲ್ಲೇಖಿಸಿದ್ದಾರೆ.

ಆದರೆ ಟ್ರಂಪ್ ಅವರ ಈ ಆರೋಪವನ್ನು ಪನಾಮಾ ಸರ್ಕಾರ ಹಾಗೂ ಚೀನಾ ಸರ್ಕಾರಗಳು ಸಾರಾಸಗಟಾಗಿ ತಿರಸ್ಕರಿಸಿವೆ. ಕಾಲುವೆ ಇರುವ ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಪ್ರವೇಶದಲ್ಲಿರುವ ಬಾಲ್ಬೊ ಮತ್ತು ಕ್ರಿಸ್ಟೊಬಾಲ್ ಬಂದರುಗಳನ್ನು ಹಾಂಗ್ಕಾಂಗ್ಮೂಲದ ಸಿಕೆ ಹಚಿಸನ್ ಹೋಲ್ಡಿಂಗ್ಸ್ ಕಂಪನಿ ನಿರ್ವಹಿಸುತ್ತಿದೆ. ಕಂಪನಿಯು ಸಾರ್ವಜನಿಕ ಹೂಡಿಕೆಯನ್ನು ಹೊಂದಿದೆಯೇ ಹೊರತು, ಚೀನಾ ಸರ್ಕಾರದ ನೇರ ಆಡಳಿತಕ್ಕೆ ಇದು ಒಳಪಟ್ಟಿಲ್ಲ. ಆದರೂ ಹಾಂಗ್ಕಾಂಗ್ ಕಂಪನಿಯ ಮೇಲೆ ಚೀನಾ ಸರ್ಕಾರ ನಿಗಾ ಇರಿಸಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

ಅಟ್ಲಾಂಟಿಕ್ ತೀರದಲ್ಲಿರುವ ಎಂಐಟಿ ಬಂದರನ್ನು ಅಮೆರಿಕದ ಖಾಸಗಿ ಸಂಸ್ಥೆ ಎಸ್ಎಸ್ಎ ಮರೈನ್, ಅಟ್ಲಾಂಟಿಕ್ ಬಂದರನ್ನು ತೈವಾನ್ನ ಎವರ್ಗ್ರೀನ್ ಸಮೂಹ ಸಿಸಿಟಿ ಹಾಗೂ ಪೆಸಿಫಿಕ್ ತೀರದ ರೋಡ್ಮನ್ ಬಂದರನ್ನು ಸಿಂಗಪುರದ ಪಿಎಸ್ಎ ಇಂಟರ್ನ್ಯಾಷನಲ್ ನಿರ್ವಹಿಸುತ್ತಿವೆ ಎಂದು ಸರ್ಕಾರಕ್ಕೆ ಸೇರಿದ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲಾಗಿದೆ. ಆದಾಗ್ಯೂ, ನೈಸರ್ಗಿಕ ಸಂಪನ್ಮೂಲ ಹೇರಳವಾಗಿರುವ ಲ್ಯಾಟಿನ್ ಅಮೆರಿಕದಲ್ಲಿ ಚೀನಾ ಹಿಡಿತ ವರ್ಷದಿಂದ ವರ್ಷಕ್ಕೆ ಬಿಗಿಗೊಳ್ಳುತ್ತಲೇ ಸಾಗಿದೆ. ಈ ಪ್ರಾಂತ್ಯವೂ ಚೀನಾದತ್ತ ವಾಲುತ್ತಿರುವುದು ಇದು ವಾಷಿಂಗ್ಟನ್ನ ನಿದ್ದೆಗೆಡಿಸಿದೆ.

ಟ್ರಂಪ್ ಹೇಳಿಕೆಗೆ ತಿರುಗೇಟು ನೀಡಿರುವ ಪನಾಮಾ ಅಧ್ಯಕ್ಷ ಜೋಸ್ ರಾಲ್ ಮುಲಿನೊ ಅವರು, 'ಕಾಲುವೆಯು ಪನಾಮಾದ್ದಾಗಿತ್ತು, ಪನಾಮಾದ್ದಾಗಿದೆ. ಮುಂದೆಯೂ ಪನಾಮಾಕ್ಕೇ ಸೇರಿದ್ದಾಗಿರುತ್ತದೆ. ಕಾಲುವೆಮೂಲಕ ಸಾಗಲು ವಿಧಿಸುವ ಶುಲ್ಕವು ಪಾರದರ್ಶಕವಾಗಿದ್ದು, ಅದನ್ನು ಎಲ್ಲಾ ಆಯಾಮಗಳಿಂದ ಯೋಚಿಸಿ ನಿರ್ಧರಿಸಲಾಗಿದೆ' ಎಂದಿದ್ದಾರೆ.

**ಸುಂಕದ ಕುರಿತೂ ತಕರಾರು** ಪನಾಮಾಕಾಲುವೆಯಲ್ಲಿ ಸಾಗಲು ಹಡಗುಗಳಿಗೆ ಭಾರೀ ಪ್ರಮಾಣದ ಸುಂಕ ವಿಧಿಸಲಾಗುತ್ತಿದೆ ಎಂದು ಅಮೆರಿಕ ಪದೇ ಪದೇ ಆರೋಪಿಸುತ್ತಿದೆ. ಅಮೆರಿಕದ ಸರಕುಗಳು ಸಾಗಲು ಈ ಪ್ರಮಾಣದ ಸುಂ ಕವನ್ನು ವಿಧಿಸಬಾರದು ಎಂದೂ ತಾಕೀತುಮಾಡಿದೆ. ಜತೆಗೆ ಅಮೆರಿಕಕ್ಕೆ ರಾಷ್ಟ್ರಕ್ಕೆ ಸೇರಿದ ಎಲ್ಲಾ ಹಡುಗುಗಳ ಮೇಲೂ ಅಧಿಕ ಸುಂಕ ವಿಧಿಸಲಾಗುತ್ತಿದೆ. ಇದು ಸರಿಯಾದ ಕ್ರಮವಲ್ಲ ಎಂದು ಗುಡುಗಿದೆ.

2020ರಿಂದ 2023ರವರೆಗೆ ಈ ಕಾಲುವೆಯ ಆದಾಯವು ಶೇ26ರಷ್ಟು (29 ಸಾವಿರ ಕೋಟಿ) ಹೆಚ್ಚಾಗಿದೆ. ಪ್ರತಿ ಹಡಗಿಗೆ 35 ಕೋಟಿ ತೆರಿಗೆ ವಿಧಿಸಲಾಗುತ್ತಿದೆ. ಕಾಲುವೆಯಲ್ಲಿ ಸಾಗುವ ಹಡಗುಗಳಿಗೆ ಅವುಗಳ ರಾಷ್ಟ್ರ ಧ್ವಜ,ಯಾವ ದೇಶಕ್ಕೆ ಸೇರಿದ್ದು ಅಥವಾ ಎಲ್ಲಿಗೆಹೋಗಲಿದೆ ಎಂಬುದನ್ನು ಆಧರಿಸಿ ಶುಲ್ಕ ವಿಧಿಸಲಾಗುತ್ತಿಲ್ಲ. ಅಮೆರಿಕ ರಾಷ್ಟ್ರಕ್ಕೆ ಸೇರಿದ ವಾಣಿಜ್ಯ ಹಡಗುಗಳು ಇಲ್ಲ. ಈ ಕಾಲುವೆಯಲ್ಲಿ ಅಮೆರಿಕದ ಸೇನೆಗೆ ಸೇರಿದ ಹಡಗುಗಳು ಮುಕ್ತವಾಗಿ ಸಂಚರಿಸುತ್ತಿವೆ ಎಂದು ವರದಿಯಾಗಿದೆ.

ಜಗತ್ತಿನ ಹಲವು ರಾಷ್ಟ್ರಗಳ ನಡುವಿನ ರಾಜಕೀಯ ಸಂಘರ್ಷ ದಿಂದಾಗಿ ಪನಾಮಾಮಾತ್ರವಲ್ಲದೆ, ಇತರ ಜಲಮಾರ್ಗಗಳ ಶುಲ್ಕಗಳೂ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿವೆ ಎಂದು ಸರಕು ಸಾಗಣೆ ಹಡಗುಗಳಮಾಲೀಕರು ಆತಂಕ ವ್ಯಕ್ತಪಡಿಸಿದ್ದಾರೆ.

**ಮುಂದೇನು...?** ಟ್ರಂಪ್ ಬೆದರಿಕೆಯುಪನಾಮಾದ ಸಾಲದ ಪ್ರಮಾಣವನ್ನು ಹೆಚ್ಚಿಸಿದೆ. ಕಾಲುವೆ ವಾಪಾಸ್ ಪಡೆಯುವ ಟ್ರಂಪ್ ಹೇಳಿಕೆ ನಂತರ ದೇಶದ ಬಾಂಡ್ಗಳ ಬೆಲೆಯನ್ನು ಅಮೆರಿಕದಹೂಡಿಕೆ ಬ್ಯಾಂಕ್ ಜೆ.ಪಿ.ಮಾರ್ಗನ್ ತಗ್ಗಿಸಿರುವುದು ಈ ಪುಟ್ಟ ರಾಷ್ಟ್ರವನ್ನು ಮತ್ತಷ್ಟು ಸಂಕಷ್ಟಕ್ಕೆ ನೂಕಿದೆ. ಈ ನಡುವೆ ಅಮೆರಿಕದ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಜನವರಿ ಅಂತ್ಯದಿಂದ ಫೆಬ್ರುವರಿ ಮೊದಲ ವಾರದಲ್ಲಿ ಪನಾಮಾಕ್ಕೆ ಭೇಟಿ ನೀಡುತ್ತಿದ್ದು, ಅಧಿಕಾರ ವಹಿಸಿಕೊಂಡ ನಂತರ ಇದು ಅವರ ಮೊದಲ ವಿದೇಶಿ ಭೇಟಿಯಾಗಿದೆ. ಈ ಭೇಟಿಯಲ್ಲಿ ವಲಸೆ ಕುರಿತೂ ಚರ್ಚೆಗಳು ನಡೆಯುವ ಸಾಧ್ಯತೆ ಇದೆ.

# ಮಧು ಬಂಗಾರಪ್ಪ ಅವರಿಗೆ ಅಧಿಕಾರದ ಪಿತ್ತ ನೆತ್ತಿಗೇರಿದೆ



**ಶಿವಮೊಗ್ಗ:** ಜಿಲ್ಲಾ ಉಸ್ತುವಾರಿ ಸಚಿವರಾದ ಮಧು ಬಂಗಾರಪ್ಪ ಅವರಿಗೆ ಅಧಿಕಾರದ ಪಿತ್ತ ನೆತ್ತಿಗೇರಿದ್ದು ಅವರ ಉದ್ಧಟತನವನ್ನು ತಾವು ತೀವ್ರವಾಗಿ ಖಂಡಿಸುವುದಾಗಿ ಶಾಸಕ ಎಸ್.ಎನ್. ಚನ್ನಬಸಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗೋವಿಂದಾಪುರದಲ್ಲಿ ನಿರ್ಮಾಣವಾಗುತ್ತಿರುವ ಆಶ್ರಯ ವಸತಿ ಸಮುಚ್ಛಯದಲ್ಲಿ 658 ಮನೆಗಳನ್ನು ಫಲಾನುಭವಿಗಳಿಗೆ ಲಾಟರಿ ಮೂಲಕ ವಿತರಿಸಲು ಇಂದು (ಫೆ.28) ವಸತಿ ಸಚಿವ ಜಮೀರ್ ಅಹಮ್ಮದ್ ಬರಬೇಕಾಗಿತ್ತು. ನಾನು ಅವರೊಡನೆ ನಾಲ್ಕೈದು ಮಾಡಿ ಚರ್ಚಿಸಿದ್ದೆ. ವಿದ್ಯುತ್ ಸಂಪರ್ಕಕ್ಕೆ 12 ಕೋಟಿ ರೂ. ಬೇಕು ಅಂತ ತಿಳಿಸಿದ್ದೆ. ಅದಕ್ಕೆ ಸಚಿವ ಜಮೀರ್ ಒಪ್ಪಿದ್ದರು. ಆದರೆ ಸಚಿವ ಮಧು ಬಂಗಾರಪ್ಪ ಮಂತ್ರಿಗಳು ಬರುವುದನ್ನು ತಡೆದು ಅಡ್ಡಗಾಲು ಹಾಕಿದ್ದಾರೆ. ಈ ದುಷ್ಟಬುದ್ಧಿ ಯಾಕೆ? ಇದು ಯಾವ ಪುರುಷಾರ್ಥಕ್ಕೆ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಈ ಮೂಲಕ ಸಚಿವರು ತಾವು ಬಡವರ ವಿರೋಧಿ ಎಂಬುದನ್ನು ಸಾಬೀತು ಪಡಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ನಾನು ಸಚಿವ ಜಮೀರ್ ಅವರೊಂದಿಗೆ ಮಾತನಾಡಿದ್ದರ ಪರಿಣಾಮ ಸ್ಲಂ ಬೋರ್ಡ್ ಸಮಸ್ಯೆ ಪರಿಹಾರವಾಗಿದೆ. ಆಶ್ರಯ ಸಮಿತಿಯ ಅಧ್ಯಕ್ಷನಾದ ನಾನು ಮನೆ ಹಂಚಿಕೆ ವಿಷಯದ ಕುರಿತು ಸಚಿವರ ಜೊತೆ ಮಾತನಾಡಿದ್ದೇನೆ. ಬಡವರಿಗೆ ಮನೆ ಹಂಚಿಕೆಗೂ ಪುರುಸೊತ್ತು ಇಲ್ಲ ಅಂದರೆ ಯಾಕೆ ಬೇಕು ನಿಮಗೆ ಉಸ್ತುವಾರಿ ಸಚಿವರ ಪಟ್ಟ? ಬೇಜವಾಬ್ದಾರಿ, ಸಹಕಾರ ನೀಡದ ಸಚಿವ ಮಧು ಬಂಗಾರಪ್ಪ ಬಡವರ ವಿರೋಧಿ ಎಂದು ಕಟುವಾಗಿ ಟೀಕಿಸಿದರು. ಫೆ. 4 ರಂದು ಆಶ್ರಯ ಸಮಿತಿ ಸಭೆ ಕರೆದಿದ್ದೇನೆ. ಆಶ್ರಯ ಸಮಿತಿಯ ನಿರ್ಣಯವಿಲ್ಲದೆ ಸಚಿವರು ಆಶ್ರಯ ಮನೆ ಹಂಚುತ್ತಾರಾ ಎಂದು ಸವಾಲು ಹಾಕಿದ ಚನ್ನಬಸಪ್ಪ, ಕೆ.ಎಸ್. ಈಶ್ವರಪ್ಪನವರು ಗ್ರಾಮೀಣಾಭಿವೃದ್ಧಿ ಸಚಿವರಿದ್ದಾಗ ಕುಡಿಯುವ ನೀರಿಗೆ 16 ಕೋಟಿ ರೂ. ನೀಡಿದ್ದರು. ಬಡ ಫಲಾನುಭವಿಗಳು ಸಾಲ ಸೋಲ ಮಾಡಿ, ಮಾಂಗಲ್ಯ ಸರ ಅಡವಿಟ್ಟು 21 ಕೋಟಿ ರೂ. ನೀಡಿದ್ದಾರೆ. ಆಶ್ರಯ ಯೋಜನೆ ಬಂಗಾರಪ್ಪ ತಂದಿದ್ದು ನಿಜ. ನೀವೇನು ಮಾಡ್ತಾ ಇದ್ದೀರಿ? ನಿಮ್ಮದೇ ಸರ್ಕಾರ ಇದ್ದರೂ ಹಣ ತರುವ ಯೋಗ್ಯತೆ ನಿಮಗಿಲ್ಲ ಎಂದು ಛೇಡಿಸಿದರು. ಜುಲೈ 2023ರೊಳಗೆ ನಿರ್ಮಾಣದ ಯೋಜನೆ ಮುಗಿಯಬೇಕಿತ್ತು. 3000 ಮನೆ ನಿರ್ಮಾಣಕ್ಕೆ ಅವಕಾಶವಿದೆ. 620 ಮನೆ ಕೊಟ್ಟಾಗಿದೆ. 652ಕ್ಕೆ ಈಗ ಅವಕಾಶವಿದೆ. 576 ಮನೆಗಳು ಮುಗಿಯುವ ಹಂತದಲ್ಲಿವೆ. ಬಡ ಫಲಾನುಭವಿಗಳ 23 ಕೋಟಿ ರೂ.ವನ್ನು ಗುತ್ತಿಗೆದಾರರಿಗೆ ಸಂದಾಯ ಮಾಡಲಾಗಿದೆ. ಮನೆ ಹಸ್ತಾಂತರಿಸದೆ ಬಡವರನ್ನು ಬಿಕ್ಷೆ ಬೇಡುವ ಸ್ಥಿತಿಗೆ ತಂದಿದ್ದೀರಿ. ನಿಮ್ಮಪ್ಪನ ಆಸ್ತಿಯನ್ನು ಅವರು ಕೇಳುತ್ತಿಲ್ಲ ಎಂದು ಸಚಿವರ ವಿರುದ್ಧ ಹರಿಹಾಯ್ದರು.

ಬಡವರಿಗೆ ಮನೆ ಕೊಟ್ಟರೆ ಬ್ಯಾಂಕ್‌ನವರು ಸಾಲ ಕೊಡುತ್ತಾ-ರೆ. ನಮ್ಮ ಕರ್ತವ್ಯ ಮಾಡ್ಲಿಕ್ಕೂ ಬಿಡ್ತಿಲ್ಲ. ಅದ್ಕೂ ಅಡ್ಡ ಬರ್ತಾರೆ ಎಂದು ದೂರಿದರು. ಯಾವುದೇ ಕಾರಣಕ್ಕೂ ಸಚಿವರ ಉದ್ಧಟತನವನ್ನು ಸಹಿಸಿಕೊಳ್ಳುವುದಿಲ್ಲ. ಬ್ರಹ್ಮ ಬಂದರೂ ಮನೆ ಹಸ್ತಾಂತರವನ್ನು ನಿಲ್ಲಿಸುವುದಿಲ್ಲ. ಬಡವರ ಜೊತೆ ಹುಡುಗಾಟ ಮಾಡುತ್ತಿರುವ ಸಚಿವರಿಗೆ ಏರಿದ ಪಿತ್ತವನ್ನು ಇಳಿಸಲು ಬಡವರೇ ಬರ್ತಾರೆ ಎಂದು ಗುಡುಗಿದರು.

ಸಚಿವ ಮಧು ಶಿವಮೊಗ್ಗದ ರಾಜಕೀಯ ಸಂಸ್ಕೃತಿಯನ್ನು ಹಾಳುಮಾಡುತ್ತಿದ್ದಾರೆ. ಅವರು ತಮ್ಮ ನಾಲಿಗೆ ಮೇಲೆ ಹಿಡಿತ ಸಾಧಿಸಲಿ. ಅಧಿಕಾರಿಗಳ ಮೇಲೆ ಹಿಡಿತ ಸಾಧಿಸುವ ಸಂಚು ಬಿಡಬೇಕು. ಸಚಿವರ ಉದ್ಧಟತನಕ್ಕೆ ಉತ್ತರ ಕೊಡುವುದು ನಮಗೂ ಗೊತ್ತಿದೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಡಿ. ಮೋಹನ್ ರೆಡ್ಡಿ, ದೀನದಯಾಳ್, ಮಂಜುನಾಥ್ ನವಿಲೆ, ಕೆ.ವಿ. ಅಣ್ಣಪ್ಪ, ಶ್ರೀನಾಗ್ ಉಪಸ್ಥಿತರಿದ್ದರು.


**ಪುರಸಭಾ ಕಾರ್ಯಾಲಯ, ಮಲೇಬೆನ್ನೂರು,**
(ದಾವಣಗೆರೆ ಜಿಲ್ಲೆ) Phone: 08192-268858
Email: ka.malebennuru.tmc@gmail.com
ಕ್ರಮಾಂಕ/ಪುಸಮ/ತಾಂತ್ರಿಕ/ಸಿ.ಆರ್/02/2024-25 ದಿನಾಂಕ: 01-02-2025

**ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

2019-2020 ರಿಂದ 2023-24ನೇ & 2024-25 ನೇ ಸಾಲಿನ ಎಸ್ಎಫ್‌ಸಿ,24.10 ಎಸ್‌ಸಿಪಿ & ಟಿಎಸ್‌ಪಿ, ಸಾಮಾನ್ಯ ನಿಧಿ ಅನುದಾನದಡಿ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾವರದರ್ಶಕತೆ ಆದೇಶ-1999-2000ರ Act 2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-1 ರ ನಿಯಮದನ್ವಯ ಈ ಕೆಳಗಿನಂತೆ ಇಂಡೆಂಟ್ ನಂಬರ್ ನೀಡಲಾದ ಕಾಮಗಾರಿಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ದಾಖಲೆಗಳನ್ನು https://kppp.karnataka.gov.in/ ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿದೆ. (1) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಬಗ್ಗೆ ವಿಚಾರಿಸಲು ಕೊನೆಯ ದಿನಾಂಕ: 13/02/2025 ರ ರಂದು ಸಾಯಂಕಾಲ 05-30 ಗಂಟೆಯವರೆಗೆ (2) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17/02/2025 ರಂದು ಸಂಜೆ 05-30 ಗಂಟೆಯವರೆಗೆ (3) ಇ-ಪ್ರೊಕ್ಯೂರ್‌ಮೆಂಟ್ ತೆರೆಯುವ ದಿನಾಂಕ: 19/02/2025 ರಂದು ಬೆಳಿಗ್ಗೆ 11-30 ಗಂಟೆಗೆ ಅಥವಾ ನಿಗಧಿಪಡಿಸಿದ ದಿನಾಂಕದಂದು

**(1)** DMA/2024-25/OW/WORK_INDENT35588. IN WARD NO 08 A K COLONY NEEDED DEVELOPMENT WORK. ಮೊತ್ತ: 0.68 ಲಕ್ಷಗಳು
**(2)** DMA/2024-25/WS/W_I- 35585. IN WARD NO 07 VALMIKI LAYOUT CONTINUES DEVELOPMENT WORK STAGE 2 ಮೊತ್ತ: 1.95 ಲಕ್ಷಗಳು
**(3)** DMA/2024-25/WS/WORK_INDENT35583. IN WARD NO 11 MALIYAMMA TEMPLE DEVELOPMENT WORK FAWAR STONE INSTALLTION WORK. ಮೊತ್ತ : 2.00 ಲಕ್ಷಗಳು
**(4)** DMA/2024-25/WS/WORK_INDENT35582. SC Community people living area pipeline work ಮೊತ್ತ: 1.00 ಲಕ್ಷಗಳು
**(5)** DMA/2024-25/WS/W_I 35579. IN JATAPAT NAGARA INSTAION OF THE BOREWELL MOTOR AND CONNECTION WORK ಮೊತ್ತ: 0.80 ಲಕ್ಷಗಳು
**(6)** DMA/2024-25/OW/W_I 30097/CALL-4. IN OFFICE WORKS PURCHASE OF THE GENERETOR IN TMC MALEBENNURU OFFICE ಮೊತ್ತ : 5.79 ಲಕ್ಷಗಳು

**:: ಷರತ್ತುಗಳು ::** * ಎಲ್ಲಾ ಟೆಂಡರ್‌ಗಳು ಸ್ಟ್ಯಾಂಡರ್ಡ್ ಕೆಡಬ್ಲ್ಯೂ - 1 & 2ಟೆಂಡರ್ ಡಾಕುಮೆಂಟ್ ಷರತ್ತಿಗೊಳಪಟ್ಟಿದೆ. * ಟೆಂಡರ್‌ಗಳನ್ನು ಯಾವುದೇ ಕಾರಣಗಳನ್ನು ನೀಡದೆ ಅಂಗೀಕರಿಸುವ, ಅಥವಾ ರದ್ದುಪಡಿಸುವ ಅಧಿಕಾರವನ್ನು ಪುರಸಭೆ ಕಾಯ್ದಿರಿಸಿದೆ.

ವಾಸಾಇ/ದಾವಣಗೆರೆ/705/ ಕೆಎಸ್ಎಂಸಿಎ/2024-25
**ಸಹಿ/- ಮುಖ್ಯಾಧಿಕಾರಿ, ಪುರಸಭೆ, ಮಲೇಬೆನ್ನೂರು**

# ಸೌದಿ ಅರೇಬಿಯಾದಲ್ಲಿ ಭೀಕರ ಅಪಘಾತ: ಉದ್ಯೋಗ ಅರಸಿ ಹೋಗಿದ್ದ ತೆಲಂಗಾಣದ ವ್ಯಕ್ತಿ ಸೇರಿ 9 ಭಾರತೀಯರ ದುರ್ಮರಣ

ಸೌದಿ ಅರೇಬಿಯಾದ ಪಶ್ಚಿಮ ಪ್ರದೇಶದ ಜೆಡ್ಡಾ ಬಳಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ 9 ಭಾರತೀಯ ನಾಗರಿಕರು ಸೇರಿದಂತೆ 15 ಜನರು ದುರಂತ ಸಾವನ್ನಪ್ಪಿದ್ದಾರೆ. ಈ ಅಪಘಾತದಲ್ಲಿ ನೇಪಾಳ ಮತ್ತು ಘಾನಾದ ತಲಾ ಮೂವರು ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಇಂದು ಭಾರತೀಯ ರಾಯಭಾರ ಕಚೇರಿ ಅಪಘಾತವನ್ನು ದೃಢಪಡಿಸಿದ್ದು, ಮೃತರ ಕುಟುಂಬಗಳಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುವುದಾಗಿ ಭರವಸೆ ನೀಡಿದೆ. ಈ ಅಪಘಾತದ ನಂತರ, ಮೃತರ ಕುಟುಂಬಗಳಲ್ಲಿ ಶೋಕ ಮಡುಗಟ್ಟಿದೆ.ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಕೂಡ ಈ ಅಪಘಾತದ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಜೆಡ್ಡಾದಲ್ಲಿ ನಡೆದ ಈ ಭೀಕರ ರಸ್ತೆ ಅಪಘಾತದ ಬಗ್ಗೆ ಕೇಳಿ ದುಃಖಿತನಾಗಿದ್ದೇನೆ ಎಂದು ಅವರು ಇನ್ಸ್ಟಾಗ್ರಾಮ್ ನಲ್ಲಿ ಬರೆದಿದ್ದಾರೆ. ನಾನು ಜೆಡ್ಡಾದ ನಮ್ಮ ಕಾನ್ಸುಲ್ ಜನರಲ್ ಅವರೊಂದಿಗೆ ಮಾತನಾಡಿದ್ದೇನೆ. ಅವರು ಸಂತ್ರಸ್ತ ಕುಟುಂಬಗಳೊಂದಿಗೆ ಸಂಪರ್ಕದಲ್ಲಿದ್ದು ಅವರಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ಒದಗಿಸುತ್ತಿದ್ದಾರೆ ಎಂದು ಹೇಳಿದ್ದಾರೆ.
ತೆಲಂಗಾಣದ ಒಬ್ಬ ಕಾರ್ಮಿಕ ಸಾವು: ಭಾರತೀಯ ಸಮುದಾಯದ ಪ್ರಕಾರ, ಈ ಎಲ್ಲಾ ಕಾರ್ಮಿಕರು ದಕ್ಷಿಣ ಬಂದರು ನಗರವಾದ ಜಿಜಾನ್ನಲ್ಲಿರುವ ತಮ್ಮ ಕೆಲಸದ ಸ್ಥಳದ ಕಡೆಗೆ ಹೋಗುತ್ತಿದ್ದರು. ಈ ಸಮಯದಲ್ಲಿ ಅವರ ಬಸ್ ಟ್ರೇಲರ್ಗೆ ಡಿಕ್ಕಿ ಹೊಡೆದಿದೆ. ಬಸ್ಸಿನಲ್ಲಿ ಒಟ್ಟು 26 ಜನರಿದ್ದು ಸ್ಥಳದಲ್ಲೇ 15 ಮಂದಿ ಸಾವನ್ನಪ್ಪಿದ್ದಾರೆ. ಇನ್ನುಳಿದ ಪ್ರಯಾಣಿಕರು ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಮೃತರಲ್ಲಿ ತೆಲಂಗಾಣದ ಜಗತ್ಯಾಲ್ ಜಿಲ್ಲೆಯ ಮೆಟ್ಪಲಿ ಮಂಡಲದ ನಿವಾಸಿ ಕಪೇಲಿ ರಮೇಶ್ (32) ಎಂಬ ಭಾರತೀಯ ಪ್ರಜೆಯೂ ಸೇರಿದ್ದಾರೆ. ರಮೇಶ್ ಅವರ ಸಾವಿನ ಸುದ್ದಿ ಅವರ ಕುಟುಂಬಕ್ಕೆ ಬರಸಿಡಿಲು ಬಡಿದಂತಾಗಿದೆ. ಈ ಅಪಘಾತದ ಬಗ್ಗೆ ಭಾರತೀಯ ರಾಯಭಾರ ಕಚೇರಿ ತೀವ್ರ ಸಂತಾಪ ವ್ಯಕ್ತಪಡಿಸಿದೆ. "ಜೆಡ್ಡಾದ ಬಳಿ ನಡೆದ ರಸ್ತೆ ಅಪಘಾತದಲ್ಲಿ 9 ಭಾರತೀಯರು ಸಾವನ್ನಪ್ಪಿದ್ದಕ್ಕೆ ತೀವ್ರ ಸಂತಾಪ ಸೂಚಿಸುತ್ತೇವೆ" ಎಂದು ರಾಯಭಾರ ಕಚೇರಿ ಟ್ವಿಟರ್ನಲ್ಲಿ ಪೋಸ್ಟ್ ಮಾಡಿದೆ. ಮೃತರ ಕುಟುಂಬಗಳಿಗೆ ನಮ್ಮ ಸಂತಾಪಗಳು. ಭಾರತೀಯ ದೂತಾವಾಸವು ಸ್ಥಳೀಯ ಆಡಳಿತ ಮತ್ತು ಸಂತ್ರಸ್ತ ಕುಟುಂಬಗಳೊಂದಿಗೆ ಸಂಪರ್ಕದಲ್ಲಿದೆ ಮತ್ತು ಸಾಧ್ಯವಿರುವ ಎಲ್ಲ ಸಹಾಯವನ್ನು ಒದಗಿಸುತ್ತಿದೆ. ಈ ಅಪಘಾತದಲ್ಲಿ ಗಾಯಗೊಂಡವರ ಚಿಕಿತ್ಸೆಗೆ ಸಂಪೂರ್ಣ ವ್ಯವಸ್ಥೆ ಮಾಡಲಾಗುತ್ತಿದೆ. ಸಂತ್ರಸ್ತ ಕುಟುಂಬಗಳಿಗೆ ಸಹಾಯ ಮಾಡಲು ಭಾರತೀಯ ಹೈಮಿಷನ್ ವಿಶೇಷ ಸಹಾಯವಾಣಿ ಸಂಖ್ಯೆಯನ್ನು ಸಹ ಬಿಡುಗಡೆ ಮಾಡಿದೆ. ಸರ್ಕಾರವು ಮೃತರ ಶವಗಳನ್ನು ಆದಷ್ಟು ಬೇಗ ಅವರ ಕುಟುಂಬಗಳಿಗೆ ತಲುಪಿಸುವ ಪ್ರಕ್ರಿಯೆಯಲ್ಲಿ ನಿರತವಾಗಿದೆ. ಈ ಘಟನೆಯು ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಕಾರ್ಮಿಕರ ಸುರಕ್ಷತೆಯ ಬಗ್ಗೆ ಗಂಭೀರ ಕಳವಳವನ್ನು ಹುಟ್ಟುಹಾಕಿದೆ. ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಒದಗಿಸಲು ಸರ್ಕಾರ ಸಾಧ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

# ಪಾಕಿಸ್ತಾನಕ್ಕೆ 'ದೊಡ್ಡಣ್ಣನ' ಹೊಡೆತ: ವಿದೇಶಿ ನೆರವು ಸ್ಥಗಿತಗೊಳಿಸಿದ ಡೊನಾಲ್ಡ್ ಟ್ರಂಪ್!

**ಇಸ್ಲಾಮಾಬಾದ್:** ಡೊನಾಲ್ಡ್ ಟ್ರಂಪ್ ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷರಾದ ಮೇಲೆ ಪಾಕಿಸ್ತಾನಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಅವರು ಹೊರಡಿಸಿರುವ ಕಾರ್ಯನಿರ್ವಾಹಕ ಆದೇಶದ ನಂತರ ಅಮೆರಿಕ ಪಾಕಿಸ್ತಾನಕ್ಕೆ ನೀಡುವ ವಿದೇಶಿ ನೆರವನ್ನು ಮರು ಮೌಲ್ಯಮಾಪನದ ಉದ್ದೇಶದಿಂದ ತಾತ್ಕಾಲಿಕವಾಗಿ ಅಮಾನತುಗೊಳಿಸಲಾಗಿದೆ ಎಂದು ಮಾಧ್ಯಮಗಳು ಮಂಗಳವಾರ ವರದಿ ಮಾಡಿವೆ.ಅಮೆರಿಕದ ಈ ನಿರ್ಧಾರದಿಂದ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಪ್ರೋತ್ಸಾಹಿಸುವ ' ಸಾಂಸ್ಕೃತಿಕ ಸಂರಕ್ಷಣೆಗಾಗಿ ರಾಯಭಾರಿಗಳ ನಿಧಿ' ಯೋಜನೆ ಸೇರಿದಂತೆ ಪಾಕಿಸ್ತಾನದಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಅಭಿವೃದ್ಧಿಗಾಗಿನ ಅಮೆರಿಕದ ಏಜೆನ್ಸಿಯ (ಗಖ-ಂಖಆ)ಹಲವು ಯೋಜನೆಗಳು ಸ್ಥಗಿತಗೊಂಡಿವೆ. ಟ್ರಂಪ್ ನಿರ್ಧಾರದಿಂದ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದ ನಾಲ್ಕು ಯೋಜನೆಗಳು ಇಂಧನ ಕ್ಷೇತ್ರಕ್ಕೆ ಸಂಬಂಧಿಸಿದ ಐದು ಯೋಜನೆಗಳು ಕೂಡ ಸ್ಥಗಿತಗೊಂಡಿವೆ ಎಂದು ವರದಿ ತಿಳಿಸಿದೆ.ಅವುಗಳಲ್ಲಿ ಸಾಮಾಜಿಕ ರಕ್ಷಣೆ ಚಟುವಟಿಕೆಗೆ ಸಂಬಂಧಿಸಿದ ಕಾರ್ಯಕ್ರಮ 2025ರ ಅಂತ್ಯದಲ್ಲಿ ರದ್ದಾಗಬಹುದು. ಅಮೆರಿಕದ ಕ್ರಮವು ಆರೋಗ್ಯ, ಕೃಷಿ, ಜೀವನೋಪಾಯ ಮತ್ತು ಆಹಾರ ಭದ್ರತೆ, ಪ್ರವಾಹ, ಹವಾಮಾನ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಯೋಜನೆಗಳಿಗೂ ಹೊಡೆತ ನೀಡಿದೆ. ಟ್ರಂಪ್ ಅವರ ಆದೇಶದಿಂದ ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮತ್ತು ಆಡಳಿತ ನಿಧಿಗಳಿಗೂ ಹೊಡೆತ ಬಿದ್ದಿದೆ. ಈ ಕೆಲವು ಕಾರ್ಯಕ್ರಮಗಳು ಶಾಶ್ವತವಾಗಿ ಸ್ಥಗಿತಗೊಳ್ಳುತ್ತವೆ ಅಥವಾ ಕನಿಷ್ಠ ಗಮನಾರ್ಹವಾಗಿ ಕಡಿಮೆಯಾಗುತ್ತವೆ ಎಂಬ ಭಯವನ್ನು ವ್ಯಕ್ತಪಡಿಸಲಾಗುತ್ತಿದೆ. ಆದಾಗ್ಯೂ, ಈ ಯೋಜನೆಗಳ ಒಟ್ಟು ಮೌಲ್ಯವು ತಿಳಿದಿಲ್ಲ, ಏಕೆಂದರೆ ಅಮೆರಿಕ ಪ್ರಸ್ತುತ ಪಾಕಿಸ್ತಾನಕ್ಕೆ ಎಷ್ಟು ವಾರ್ಷಿಕ ನೆರವು ನೀಡುತ್ತಿದೆ ಎಂಬುದು ಸ್ಪಷ್ಟವಾಗಿಲ್ಲ. ಪಾಕಿಸ್ತಾನಕ್ಕೆ ನೆರವು ಸ್ಥಗಿತದ ಟ್ರಂಪ್ರ ಕಾರ್ಯನಿರ್ವಾಹಕ ಕ್ರಮಗಳ ಬೆಳವಣಿಗೆ ಮತ್ತು ಪರಿಣಾಮವನ್ನು ಪಾಕಿಸ್ತಾನದ ಅಧಿಕಾರಿಗಳು ಇಲ್ಲಿಯವರೆಗೆ ದೃಢಪಡಿಸಿಲ್ಲ.



# ಸಮಗ್ರ ಕೃಷಿಯಲ್ಲಿ ಸಾಧನೆ ಮಾಡಿದ ನಿವೃತ್ತ ವಲಯ ಅರಣ್ಯಾಧಿಕಾರಿ

**ಚನ್ನಗಿರಿ:** ಆಧುನಿಕ ದಿನಮಾನಗಳಲ್ಲಿ ಕೃಷಿ ಎಂದರೆ ಮೂಗು ಮುರಿಯುವಂತಹ ದಿನಗಳಲ್ಲಿ ಸಾವಯವ ಮತ್ತು ಸಮಗ್ರ ಕೃಷಿಯ ಮೂಲಕ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಲು ಮುಂದಾಗಿರುವವರು ತಾಲೂಕಿನ ನೀತಿಗೆರೆ ಗ್ರಾಮದ ನಿವೃತ್ತ ವಲಯ ಅರಣ್ಯಾಧಿಕಾರಿ ವಿರೇಶ್ ನಾಯ್ಕ್.

ಅಡಿಕೆಯ ನಾಡೆಂದೇ ಪ್ರಖ್ಯಾತಿ ಪಡೆದ ಚನ್ನಗಿರಿ ತಾಲೂಕಿನಲ್ಲಿ 70 ಸಾವಿರ ಹೆಕ್ಟೇರ್ ಪ್ರದೇಶದ ಕೃಷಿ ಯೋಗ್ಯಭೂಮಿ ಇದ್ದು, ಇದರಲ್ಲಿ ಸುಮಾರು 36 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರೈತರು ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಬಹುತೇಕ ರೈತರು ಅಡಿಕೆ ಬೆಳೆಯನ್ನೇ ಅವಲಭಿಸಿರುವುದರಿಂದ ಚನ್ನಗಿರಿ ತಾಲೂಕು ಅಡಿಕೆಯ ನಾಡು ಎಂದು ರಾಜ್ಯದಲ್ಲಿ ಹೆಸರು ಮಾಡಿದೆ.

ಅಡಿಕೆ ಹೊರತುಪಡಿಸಿಯೂ ಸಮಗ್ರ ಕೃಷಿಯ ಪರಿಕಲ್ಪನೆಯ ಮೂಲಕ ಅಧಿಕ ಲಾಭ ಗಳಿಸಬಹುದು ಎಂಬುದಕ್ಕೆ ನಿವೃತ್ತ ವಲಯ ಅರಣ್ಯಾಧಿಕಾರಿ ವೀರೇಶ್ ನಾಯ್ಕ್ ಇವರು ತಮ್ಮ 8 ಎಕರೆ ಕೃಷಿ ಪ್ರದೇಶದಲ್ಲಿ ಸಮಗ್ರ ಕೃಷಿ ಮಾಡುತ್ತಾ ರೈತರಿಗೆ ಮಾದರಿಯಾಗಿದ್ದಾರೆ. ಇವರ ಈ ಬಹು ಕೃಷಿಯಿಂದ 50ಕ್ಕೂ ಹೆಚ್ಚು ರೈತ ಕೂಲಿ ಕಾರ್ಮಿಕರಿಗೆ ಕೆಲಸ ನೀಡುವ ಜೊತೆಗೆ ಗ್ರಾಮದ ನಿರುದ್ಯೋಗಿ ಜನರಿಗೆ ಆಸರೆಯಾಗಿದ್ದಾರೆ.

ಎಂಟು ಎಕರೆ ಕೃಷಿ ಭೂಮಿಯಲ್ಲಿ ಮೀನು ಸಾಕಾಣಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಮೊಲ ಸಾಕಾಣಿಕೆ, ಜೇನು ಸಾಕಾಣಿಕೆ, ಹೈನುಗಾರಿಕೆ, ಕ್ಯಾಪ್ಸಿಕಂ, ಸೀತಾಫಲ, ಮಾವು, ಚೆರ್ರಿ ಸೇರಿದಂತೆ ಇನ್ನು ಮುಂತಾದ ಹಲವು ಬಗೆಯ ಹಣ್ಣಿನ ಗಿಡಗಳನ್ನು ಬೆಳೆದಿದ್ದಾರೆ. ಒಂದು ಎಕರೆ ಪ್ರದೇಶದಲ್ಲಿ ಕೆಂಪು ಮತ್ತು ಹಳದಿ ಬಣ್ಣದ ಕ್ಯಾಪ್ಸಿಕಂ ಬೆಳೆದಿದ್ದು, ಇದಕ್ಕಾಗಿ ಸುಸಜ್ಜಿತವಾದ ಪಾಲಿಹೌಸ್, ಹನಿ ನೀರಾವರಿ ವ್ಯವಸ್ಥೆ ಮಾಡಿದ್ದಾರೆ. ಈ ಕ್ಯಾಪ್ಸಿಕಂ ಬೆಳೆಯು ಈಗಾಗಲೇ ಕಟಾವಿಗೆ ಬಂದಿದ್ದು ಪ್ರತಿವಾರ ಎರಡರಿಂದ ಮೂರು ಕ್ವಿಂಟಾಲ್ ಕ್ಯಾಪ್ಸಿಕಂ ಕಟಾವು ಮಾಡಿ ಮದರಾಸಿನ ಮಾರುಕಟ್ಟೆಯ ಮೂಲಕ ಉತ್ತರಕೋರಿಯ, ಅಮೆರಿಕಾ ಸೇರಿದಂತೆ ಗಲ್ಫ್ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದು, ಪ್ರತಿ ಕೆ.ಜಿ ಕ್ಯಾಪ್ಸಿಕಂಗೆ 220 ರೂ.ನಂತೆ ಮಾರಾಟ ಮಾಡುತ್ತಿದ್ದಾರೆ.



ಈ ಬೆಳೆ ಬೆಳೆಯಲು 4.5 ಲಕ್ಷ ರೂ. ವೆಚ್ಚ ಮಾಡಿದ್ದು, ಇದರಿಂದ ಈಗಾಗಲೇ 10 ಲಕ್ಷ ರೂ. ಆದಾಯ ಬಂದಿದೆ. ಈ ಬೆಳೆಯಿಂದ ಇನ್ನು 30 ರಿಂದ 35 ಲಕ್ಷ ರೂ. ಆದಾಯ ಬರುವ ನಿರೀಕ್ಷೆ ಇದೆ ಎನ್ನುತ್ತಾರೆ ವೀರೇಶ್ ನಾಯ್ಕ್.

ಮೀನು ಸಾಕಾಣಿಕೆಗೆ ಒಂದು ಎಕರೆ ಪ್ರದೇಶದಲ್ಲಿ ಕೆರೆಯನ್ನು ನಿರ್ಮಿಸಿದ್ದು, ಈ ಕೆರೆಗೆ ಸೂಳೆಕೆರೆಯಿಂದ ಪೈಪ್‌ಲೈನ್ ಮಾಡಿಸಿದ್ದು ಮಳೆಯ ನೀರು ಸಹ ಹರಿದು ಬರುವಂತೆ ಮಾಡಲಾಗಿದೆ. ಈ ಕೆರೆಯಲ್ಲಿ ಕಾಟ್ಲ, ಗೌರಿ ಮೀನಿನ ಸುಮಾರು 10 ಸಾವಿರ ಮೀನು ಮರಿಗಳನ್ನು ಬಿಡಲಾಗಿದೆ. ಇವರ ಕೃಷಿ ಪದ್ಧತಿಯಲ್ಲಿ ಮಳೆ ನೀರು ಕೊಯ್ಲು ಕೃಷಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ.

ಮಳೆಯ ನೀರನ್ನು ಸಂಗ್ರಹಿಸಲು 80*80 ಅಳತೆಯ ತೊಟ್ಟಿ ನಿರ್ಮಿಸಿದ್ದು ಈ ತೊಟ್ಟಿಯಲ್ಲಿ ಸಂಗ್ರಹವಾಗುವ ನೀರನ್ನು ಶುದ್ದೀಕರಿಸಿ ಬೆಳೆಗಳಿಗೆ ವಿತರಣೆ ಮಾಡುವ ಪದ್ಧತಿಯನ್ನು ಅಳವಡಿಸಿದ್ದು ಇದಕ್ಕಾಗಿ ವಿಶೇಷ ಮೋಟಾರುಗಳನ್ನು ಅಳವಡಿಸಿದ್ದಾರೆ.

ಪ್ರಸ್ತುತ ದಿನಗಳಲ್ಲಿ ರೈತರು ಅಧಿಕವಾಗಿ ಅಡಿಕೆ ಬೆಳೆಯನ್ನೇ ಅವಲಂಭಿಸಿದ್ದು, ಅಡಿಕೆ ಬೆಳೆಗಿಂತ ರೈತರಿಗೆ ಹೆಚ್ಚಿನ ಆದಾಯ ತಂದುಕೊಡುವ ವಿವಿಧ ಕೃಷಿಗಳಿದ್ದು ಅದಷ್ಟು ಸಮಗ್ರ ಕೃಷಿಗೆ ಆದ್ಯತೆ ನೀಡಿದಾಗ ಮಾತ್ರ ಆರ್ಥಿಕವಾಗಿ ರೈತರು ಮುಂದಾಗಲು ಸಾಧ್ಯವಾಗಿದ್ದು ಈ ಸಮಗ್ರ ಕೃಷಿಯ ಬಗ್ಗೆ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಉದ್ದೇಶವಿದ್ದು ಸರ್ಕಾರದಿಂದ ಅನುಮತಿಯನ್ನು ಸಹ ಪಡೆದುಕೊಳ್ಳಲಾಗಿದೆ. ಯುವ ರೈತರು ಒಂದೇ ಬೆಳೆಗೆ ಸೀಮಿತರಾಗದೆ ವಿವಿಧ ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಸದೃಢರಾಗಬೇಕು ಎನ್ನುತ್ತಾರೆ ಸಮಗ್ರ ಕೃಷಿಯಲ್ಲಿ ಯಶಸ್ಸು ಕಾಣುತ್ತಿರುವ ವಿರೇಶ್ ನಾಯ್ಕ್.

ನಮ್ಮ ಫಾರಂನಲ್ಲಿ ಆಹಾರ ಸರಪಳಿಯನ್ನು ಗಮನಿಸಬಹುದಾಗಿದ್ದು, ಕುರಿಯ ಇಕ್ಕೆ ಕೋಳಿಗಳಿಗೆ ಆಹಾರವಾದರೆ, ಕೋಳಿಯ ಇಕ್ಕೆ ಮೀನುಗಳಿಗೆ ಆಹಾರವಾಗಿದೆ. ದನದ ಸಗಣಿಯನ್ನು ಸಾವಯವ ಗೊಬ್ಬರವನ್ನಾಗಿ ಸಂಸ್ಕರಣೆ ಮಾಡುವ ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಂಡಿದ್ದು ಇವರು ಪ್ರಗತಿಪರ ಕೃಷಿಕರಾಗಿದ್ದಾರೆ.





## ರಾಕ್ಷಸ' ಬಿಡುಗಡೆಗೆ ದಿನಾಂಕ ನಿಗದಿ; ನನ್ನ ಪಾತ್ರ ತುಂಬಾ ಪ್ರಭಾವಶಾಲಿಯಾಗಿದೆ ಎಂದ ಸೋನಲ್



ಸ್ಟಾರ್ ನಿರ್ದೇಶಕ ತರುಣ್ ಸುಧೀರ್ ಅವರನ್ನು ಇತ್ತೀಚಿಗೆ ವಿವಾಹವಾದ ನಟಿ ಸೋನಾಲ್ ಮೊಂಥೆರೋ, ತಮ್ಮ ವೈಯಕ್ತಿಕ ಹಾಗೂ ವೃತ್ತಿ ಜೀವನವನ್ನು ಸಮಾನವಾಗಿ ಮುಂದುವರೆಸಿದ್ದಾರೆ. ಅವರು ಅಭಿನಯಿಸಿರುವ ಹಲವು ಚಿತ್ರಗಳು ರಿಲೀಸ್ ಅಥವಾ ನಿರ್ಮಾಣದ ಹಂತದಲ್ಲಿದ್ದು, ನಟನಾ ವೃತ್ತಿಯಲ್ಲಿ ಸಾಕಷ್ಟು ಬ್ಯುಸಿಯಾಗಿದ್ದಾರೆ.

ಸೋನಲ್ ಮದುವೆ ನಂತರದ ಮೊದಲ ಚಿತ್ರ 'ರಾಕ್ಷಸ' ಫೆಬ್ರವರಿ 24 ರಂದು ಬಿಡುಗಡೆಯಾಗಲಿದೆ. ಎಚ್. ಲೋಹಿತ್ ನಿರ್ದೇಶನದ 'ಟೈಮ್ ಲೂಪ್' ಕಾನ್ಸೆಪ್ಟ್ ನ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ನಾಯಕ ನಟರಾಗಿ ಕಾಣಿಸಿಕೊಂಡಿದ್ದಾರೆ.

ರಾಕ್ಷಸದಲ್ಲಿನ ತನ್ನ ಪಾತ್ರ ಕುರಿತು ಅನುಭವ ಹಂಚಿಕೊಂಡ ಸೋನಲ್, ಪಾತ್ರನನ್ನು ನನ್ನನ್ನು ಸೆಳೆಯಿತು. ಲೋಹಿತ್ ಅವರ ಹಿಂದಿನ ಚಿತ್ರಗಳಲ್ಲಿ ವಿಶಿಷ್ಟ ಪರಿಕಲ್ಪನೆಗಳ ಮೂಲಕ ಬಲವಾದ ಸ್ತೀ ಪಾತ್ರ ತೋರಿಸುವಲ್ಲಿ ಹೆಸರುವಾಸಿಯಾಗಿದ್ದಾರೆ. ಈ ಚಿತ್ರವೂ ಅದಕ್ಕೆ ಹೊರತಾಗಿಲ್ಲ. ರಾಕ್ಷಸ ಕಮರ್ಷಿಯಲ್ ಅಂಶಗಳಿರುವ ಹಾರರ್ ಚಿತ್ರವಾಗಿದೆ.ಲೋಹಿತ್ ಅವರ ಟೈಮ್–ಲೂಪ್ ಪರಿಕಲ್ಪನೆ ಆಕರ್ಷಕವಾಗಿದ್ದು, ಪ್ರಜ್ವಲ್ ದೇವರಾಜ್ ಜೊತೆಗೆ ಕೆಲವು ಅದ್ಭುತವಾದ ಆಕ್ಷನ್ ಸೀಕ್ವೆನ್ಸ್ಗಳಿವೆ. ನನ್ನ ಪಾತ್ರ ಪ್ರಭಾವಶಾಲಿಯಾಗಿದೆ. ನನ್ನ ಪಾತ್ರವು ನೆರೆ ಮನೆಯ ವಿವಾಹಿತ ಮಹಿಳೆಗೆ ಹೋಲುತ್ತದೆ. 10 ಮಹಿಳೆಯರಲ್ಲಿ ಆರು ಮಂದಿ ಈ ಪಾತ್ರದಲ್ಲಿ ತಮ್ಮನ್ನು ಕಂಡುಕೊಳ್ಳುತ್ತಾರೆ ಎಂದು ಈ ಹಿಂದೆಯೇ ನಾನು ಹೇಳಿದ್ದೆ. ಇದೊಂದು ಅದ್ಭುತವಾದ ಪಾತ್ರವಾಗಿದೆ.

# ಚಿತ್ರದ ಯಶಸ್ಸಿಗೆ ಸ್ಟಾರ್‌ಗಳ ಅಗತ್ಯವಿಲ್ಲ

## ಥಿಯೇಟರ್ಗಳಲ್ಲಿ 25 ದಿನ ಪೂರೈಸಿರುವುದೇ ಸಾಕ್ಷಿ: ಕೇಶವ ಮೂರ್ತಿ

ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು' ಸಿನಿಮಾ ಚಿತ್ರಮಂದಿರಗಳಲ್ಲಿ ನಾಲ್ಕನೇ ವಾರ ಪ್ರದರ್ಶನ ಕಾಣುತ್ತಿದ್ದು, 25 ದಿನಗಳನ್ನು ಪೂರೈಸುವ ಸನಿಹದಲ್ಲಿದೆ. ಇದೇ ಮೊದಲ ಬಾರಿಗೆ ಕೇಶವ ಮೂರ್ತಿ ಅವರು ಆ?ಯಕ್ಷನ್ ಕಟ್ ಹೇಳಿರುವ ಈ ಚಿತ್ರವು ಸಾಂಪ್ರದಾಯಿಕ ರೂಢಿಗಳಿಗೆ ಸವಾಲೆಸೆಯುತ್ತದೆ ಮತ್ತು ಕಂಟೆಂಟ್ ಆಧರಿತ ಚಿತ್ರಗಳು ಯಶಸ್ಸು ಕಾಣುತ್ತವೆ ಎಂಬ ಸಂದೇಶ ನೀಡಿದೆ.

ಚಿತ್ರದ ಯಶಸ್ಸಿನ ಕುರಿತು ಮಾತನಾಡಿದ ಕೇಶವ ಮೂರ್ತಿ, 'ಚಿತ್ರಗಳು ಯಶಸ್ವಿಯಾಗಲು ಸ್ಟಾರ್ಗಳ ಅಗತ್ಯವಿಲ್ಲ ಎಂಬುದಕ್ಕೆ ಚಿತ್ರಮಂದಿರಗಳಲ್ಲಿ 25 ದಿನಗಳನ್ನು ಪೂರೈಸಿರುವುದೇ ಸಾಕ್ಷಿ. ಸರಿಯಾದ ಕಂಟೆಂಟ್ ಮತ್ತು ನಿರೂಪಣೆಯೊಂದಿಗೆ ನೀವು ಪ್ರೇಕ್ಷಕರ ಹೃದಯವನ್ನು ಗೆಲ್ಲಬಹುದು' ಎಂದರು.

ನಾನು ವಿಭಿನ್ನವಾದದ್ದನ್ನು ರಚಿಸಲು ಬಯಸುತ್ತೇನೆ. ಅದು ಇಂದಿನ ಪ್ರೇಕ್ಷಕರಿಗೆ ಇಷ್ಟವಾಗುವಂತದ್ದಾಗಿರಬೇಕು. ಸಾಮಾನ್ಯ ಸಿದ್ಧ ಸೂತ್ರಗಳಿಂದ ಹೊರಬಂದು, ಜನರು ಚಿತ್ರಮಂದಿರಗಳಿಂದ ಹೊರಬಂದ ನಂತರವೂ ಅವರೊಂದಿಗೆ ಉಳಿಯುವಂತ ಕಥೆಯನ್ನು ರಚಿಸುವುದು ಮುಖ್ಯವಾಗಿತ್ತು ಎನ್ನುತ್ತಾರೆ.

ಮಲ್ಟಿಪ್ಲೆಕ್ಸ್ ನಲ್ಲಿ ಸ್ಕ್ರೀನ್ಗಳನ್ನು ಪಡೆಯುವುದು ಒಂದು ಸವಾಲಾಗಿತ್ತು. ಆದರೆ, ಚಿತ್ರವು ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಯಿತು. ಯಾವುದೇ ಚಿತ್ರಕ್ಕೆ ಚಿತ್ರಮಂದಿರಗಳನ್ನು ಪಡೆಯುವುದು ಸುಲಭವಲ್ಲ. ಆದರೆ, ಪ್ರೇಕ್ಷಕರಿಂದ ದೊರೆಯುವ ಅಗಾಧ ಬೆಂಬಲವು ಸ್ವತಂತ್ರ ಸಿನೆಮಾಕ್ಕೆ ದೊಡ್ಡ ಮೌಲ್ಯೀಕರಣವಾಗಿದೆ ಎಂದು ಕೇಶವ ಮೂರ್ತಿ ಹೇಳುತ್ತಾರೆ.



ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು ಮೂರು ಭಾಗಗಳಲ್ಲಿ ಇದ್ದು, ಕಳ್ಳತನ, ಆಸ್ತಿ ಮತ್ತು ಮಾನವ ದುರ್ಬಲತೆಗಳ ವಿಷಯಗಳ ಕುರಿತು ಹೇಳುತ್ತದೆ. ಚಿತ್ರದಲ್ಲಿ ನಟ ದಿಲೀಪ್ ರಾಜ್, ಪ್ರಸನ್ನ ವಿ ಶೆಟ್ಟಿ, ಅಪೂರ್ವ ಭಾರದ್ವಾಜ್, ಮಧುಸೂದನ್ ಗೋವಿಂದ್ ಮತ್ತು ಶಿಲ್ಪಾ ಮಂಜುನಾಥ್ ನಟಿಸಿದ್ದಾರೆ.

'ಇದು ಕೇವಲ ಆರಂಭವಷ್ಟೇ. ನಮ್ಮ ಯಶಸ್ಸು ಹೆಚ್ಚಿನ ನಿರ್ದೇಶಕರಿಗೆ ರಿಸ್ಕ್ ತೆಗೆದುಕೊಳ್ಳಲು ಮತ್ತು ಅವರ ದೃಷ್ಟಿ ನಿಜವಾಗಲು ಪ್ರೇರೇಪಿಸುತ್ತದೆ ಎಂದು ನಾನು ಭಾವಿಸುತ್ತೇನೆ. ನಾವು ಈಗ ಪ್ರಾರಂಭಿಸಿದ್ದೇವೆ ಮತ್ತು ಈ ರೀತಿಯ ಸಿನಿಮಾದ ಈ ಹೊಸ ಅಲೆ ಎಲ್ಲಿಗೆ ಕರೆದೊಯ್ಯುತ್ತದೆ ಎಂಬುದನ್ನು ನೋಡಲು ನಾನು ಉತ್ಸುಕನಾಗಿದ್ದೇನೆ' ಎಂದು ಹೇಳುತ್ತಾರೆ.

## ಕುಂಭಮೇಳದಲ್ಲಿ ಪ್ರಕಾಶ್ ರೈ ಫೋಟೋ: ಪ್ರಶಾಂತ್ ಸಂಬರಗಿ ವಿರುದ್ಧ ದೂರು ದಾಖಲು



**ಬೆಂಗಳೂರು:** ಸಾಮಾಜಿಕ ಜಾಲತಾಣದಲ್ಲಿ ನಕಲಿ ಫೋಟೋ ಹರಿಬಿಡುತ್ತಿರುವುದರ ವಿರುದ್ಧ ನಟ ಪ್ರಕಾಶ್ ರಾಜ್ ಅವರು ಪ್ರಶಾಂತ್ ಸಂಬರಗಿ ವಿರುದ್ಧ ಲಕ್ಷ್ಮಿಪುರಂ ಠಾಣೆಯಲ್ಲಿ ಶನಿವಾರ ಬೆಳಿಗ್ಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಪ್ರಶಾಂತ್ ಸಂಬರಗಿ ಅವರು ನನ್ನ ಖ್ಯಾತಿಗೆ ಕುತ್ತು ತರುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಪೇಸ್ಬುಕ್ನಲ್ಲಿ ನನ್ನ ಹೆಸರು ಬಳಸಿ ಕೃತಕ ಬುದ್ಧಿಮತ್ತೆಯ ಮೂಲಕ ಸೃಷ್ಟಿಸಿದ ಭಾವಚಿತ್ರ ಬಳಸಿದ್ದು, ಸುಳ್ಳು ಶೀರ್ಷಿಕೆ ನೀಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಪ್ರಶಾಂತ್ ಸಂಬರಗಿ ಅವರಿಗೆ ಇ ಮೇಲ್ ಮೂಲಕ ನೋಟಿಸ್ ಕಳುಹಿಸಿದ್ದು, ತನಿಖೆ ಮುಂದುವರೆದಿದೆ' ಎಂದು ಪೊಲೀಸರು ತಿಳಿಸಿದರು.

ಪ್ರಶಾಂತ್ ಸಂಬರಗಿ ನಟಿಯರೂ ಸೇರಿದಂತೆ ಅನೇಕರಿಗೆ ಈ ರೀತಿ ತೊಂದರೆ ನೀಡಿದ್ದು, ಆತನಿಗೆ ಪಾಠ ಕಲಿಸಬೇಕು, ಸಾಮಾಜಿಕ ಜಾಲತಾಣದಲ್ಲಿ ನಕಲಿ ಸುದ್ದಿ ಹರಡುವವರಿಗೂ ಇದೊಂದು ಪಾಠವಾಗಬೇಕು ಎಂಬ ಕಾರಣಕ್ಕೆ ದೂರು ನೀಡಿದ್ದೇನೆ' ಎಂದು ನಟ ಪ್ರಕಾಶ್ ರಾಜ್ ತಿಳಿಸಿದರು. ತಪ್ಪು ಪ್ರಚಾರ ಮಾಡುವುದು, ಅನುಮತಿ ಇಲ್ಲದೆ ಯಾರದೋ ಫೋಟೊಗಳನ್ನು ಬಳಸುವುದು ಅಕ್ಷಮ್ಯ ಅಪರಾಧ' ಎಂದರು.

ಕುಂಭಮೇಳದಲ್ಲಿನ ಪುಣ್ಯಸ್ನಾನದ ಬಗ್ಗೆ ಪ್ರಶ್ನಿಸಿದಾಗ 'ಸ್ನಾನ ಮಾಡುವುದರಲ್ಲಿ ತಪ್ಪೇನಿದೆ. ಅದು ಅವರ ನಂಬಿಕೆ. ನನಗೆ ದೇವರ ಮೇಲೆ ನಂಬಿಕೆಯಿಲ್ಲ. ಮನುಷ್ಯರ ಮೇಲೆ ನಂಬಿಕೆ. ದೇವರಿಲ್ಲದೆ ಬದುಕಬಹುದು ಆದರೆ, ಮನುಷ್ಯರಿಲ್ಲದೆ ಬದುಕಲು ಸಾಧ್ಯವಿಲ್ಲ. ಹಾಗೆಂದು ಅವರ ನಂಬಿಕೆಯನ್ನು ಪ್ರಶ್ನಿಸುವುದಿಲ್ಲ. ಆದರೆ ಅದನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದು ತಪ್ಪು' ಎಂದರು.

ಕುಂಭಮೇಳದ ಬಗ್ಗೆ ಕಾಂಗ್ರೆಸ್ ಟೀಕೆ ಮಾಡುತ್ತಿರುವುದರ ಬಗ್ಗೆ ಪ್ರಶ್ನಿಸಿದಾಗ, 'ಅವರವರ ಭಾವಕ್ಕೆ ಅವರ ಬಕುತಿಗೆ ಹೇಳುತ್ತಾ ಹೋಗಲಿ. ನಾನು ಯಾರ ಬಗ್ಗೆಯೂ ಮಾತನಾಡುವುದಿಲ್ಲ. ಯಾವ ನಂಬಿಕೆಯ ಬಗ್ಗೆ ಟೀಕೆ ಮಾಡಲ್ಲ' ಎಂದು ತಿಳಿಸಿದರು.

## ಆರಾಮ್ ಅರವಿಂದ ಸ್ವಾಮಿ' ಖ್ಯಾತಿಯ ನಟ ಅನೀಶ್ ನಿರ್ದೇಶನಕ್ಕೆ ವಾಪಸ್



2024ರಲ್ಲಿ ತೆರೆಕಂಡ ಅಭಿಷೇಕ್ ಶೆಟ್ಟಿ ನಿರ್ದೇಶನದ ಆರಾಮ್ ಅರವಿಂದ ಸ್ವಾಮಿ ಕಮರ್ಷಿಯಲ್ ಎಂಟರ್ಟೈನರ್ ಯಶಸ್ಸಿನ ನಂತರ, ನಟ ಅನೀಶ್ ಇದೀಗ ನಿರ್ದೇಶಕನ ಕ್ಯಾಪ್ ತೊಡಲು ತಯಾರಿ ನಡೆಸುತ್ತಿದ್ದಾರೆ. ನಟ ಕಮರ್ಷಿಯಲ್ ಅಂಶಗಳನ್ನು ಒಳಗೊಂಡ ಬಲವಾದ ಕಂಟೆಂಟ್ ಹೊಂದಿರುವ ಚಿತ್ರಕ್ಕೆ ಆ?ಯಕ್ಷನ್ ಕಟ್ ಹೇಳಲು ಸಿದ್ಧರಾಗಿದ್ದಾರೆ. ಅನೀಶ್ ಈ ಹಿಂದೆ ತಾವೇ ನಟಿಸಿದ್ದ ರಾಮಾರ್ಜುನ ಚಿತ್ರವನ್ನು ನಿರ್ದೇಶಿಸಿದ್ದರು. ಈ ಮುಂಬರುವ ಹೊಸ ಚಿತ್ರಕ್ಕಾಗಿ ಮತ್ತೊಮ್ಮೆ ಕ್ಯಾಮೆರಾ ಹಿಂದೆ ತಮ್ಮ ಕೈಚಳಕ ತೋರಿಸಲು ಸಜ್ಜಾಗಿದ್ದಾರೆ. ಭಾವಪ್ರೀತ್ ಪ್ರೊಡಕ್ಷನ್ಸ್ನೊಂದಿಗೆ ಪಾಲುದಾರಿಕೆ ಹೊಂದಿರುವ ಈ ಚಿತ್ರಕ್ಕೆ ವಿಜಯ್ ಎಂ ರೆಡ್ಡಿ ಅವರ ಬೆಂಬಲವಿದೆ. ಈ ಚಿತ್ರದ ಮೂಲಕ ವಿಜಯ್ ಅವರು ಕನ್ನಡ ಚಿತ್ರರಂಗಕ್ಕೆ ಎಂಟ್ರಿ ನೀಡುತ್ತಿದ್ದಾರೆ.

ಈ ರೋಚಕ ಸುದ್ದಿಯನ್ನು ಅನೀಶ್ ತಮ್ಮ ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

'ತನ್ನ ಮುಂದಿನ ಯೋಜನೆಯನ್ನು ಘೋಷಿಸಲು ಥ್ರಿಲ್ ಆಗಿದ್ದೇನೆ. ರಾಮಾರ್ಜುನ ಚಿತ್ರದ ನಂತರ, ನಾನು ಮತ್ತೊಮ್ಮೆ ನಿರ್ದೇಶಕನ ಕುರ್ಚಿಗೆ ಮರಳುತ್ತಿದ್ದೇನೆ ಮತ್ತು ಈ ಬಾರಿ ಅದು ದೊಡ್ಡದಾಗಿರಲಿದೆ ಮತ್ತು ಉತ್ತಮವಾಗಿರಲಿದೆ!' · ಎಂದು ನಟ–ನಿರ್ದೇಶಕರು ಬರೆದಿದ್ದಾರೆ.

ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ನಮ್ಮ ತಂಡವು ಶ್ರಮಿಸುತ್ತಿದೆ. ನೀವು ನನ್ನನ್ನು ಮತ್ತೊಂದು ಭರವಸೆಯ ಮತ್ತು ವಿಶಿಷ್ಟ ಪಾತ್ರದಲ್ಲಿ ನೋಡುತ್ತೀರಿ ಎಂದು ನಾನು ನಂಬುತ್ತೇನೆ. ಹೆಚ್ಚಿನ ಪ್ರೇಕ್ಷಕರನ್ನು ತಲುಪಲು, ನಾವು ಕನ್ನಡ ಮತ್ತು ತೆಲುಗು ಎರಡರಲ್ಲೂ ಏಕಕಾಲದಲ್ಲಿ ಚಿತ್ರೀಕರಣ ಮಾಡುತ್ತಿದ್ದೇವೆ ಎಂದಿದ್ದಾರೆ.

## ಹಾಯ್ ನಾನ್ನ' ಚಿತ್ರವನ್ನು ಕನ್ನಡದ 'ಭೀಮಸೇನ ನಳಮಹಾರಾಜ'ದಿಂದ ನಕಲು ಮಾಡಲಾಗಿದೆ: ನಿರ್ಮಾಪಕ ಆರೋಪ

**ಅವನೇ ಶ್ರೀಮನ್ನಾರಾಯಣ ಮತ್ತು ಕಿರಿಕ್ ಪಾರ್ಟಿ ಚಿತ್ರಗಳಿಗೆ ಹೆಸರಾದ ಕನ್ನಡ ಚಿತ್ರ ನಿರ್ಮಾಪಕ ಪುಷ್ಕರ ಮಲ್ಲಿಕಾರ್ಜುನಯ್ಯ, ತೆಲುಗಿನ 'ಹಾಯ್ ನಾನ್ನ' ನಿರ್ದೇಶಕರು ರೀಮೇಕ್ ಹಕ್ಕುಗಳನ್ನು ಪಡೆಯದೆ ತಮ್ಮ 2020ರಲ್ಲಿ ತೆರೆಕಂಡ ಕನ್ನಡದ 'ಭೀಮಸೇನ ನಳಮಹಾರಾಜ' ಚಿತ್ರವನ್ನು ನಕಲು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.**

ಈ ಕುರಿತು ಇನ್ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ಅವರು, ತೆಲುಗು ಚಿತ್ರವು ತನ್ನ ಚಿತ್ರದ ಮೂಲ ಕಥೆಯನ್ನು ಮತ್ತು ನಿರೂಪಣೆಯನ್ನು ನೇರವಾಗಿ ನನ್ನ ಚಿತ್ರದಿಂದ ನಕಲು ಮಾಡಲಾಗಿದೆ ಎಂದು ಆರೋಪಿಸಿದ್ದಾರೆ. ನಟ ನಾನಿ ಮತ್ತು ಚಿತ್ರ ನಿರ್ದೇಶಕರನ್ನು ಟೀಕಿಸಿದ ಅವರು, 'ರೀಮೇಕ್ ಹಕ್ಕುಗಳನ್ನು ಪಡೆಯದೆ, ಹಾಯ್ ನಾನ್ನ ಚಿತ್ರವನ್ನು ನಮ್ಮ ಮೂಲ ಚಿತ್ರ ಭೀಮಸೇನ ನಳಮಹಾರಾಜ ಚಿತ್ರದಿಂದ ಮಾಡಲಾಗಿದೆ. ಇಂತಹ ಕೆಲಸ ಮಾಡುವುದು ಸರಿಯಾಗಿದೆಯಾ, ನಾನಿ' ಎಂದಿದ್ದಾರೆ.

ನಟ ನಾನಿ ಅವರಿಗೆ ಹಾಯ್ ನಾನ್ನ ಚಿತ್ರವು ವೃತ್ತಿಜೀವನದಲ್ಲಿ ಮಹತ್ವದ ಸಿನಿಮಾವಾಗಿದೆ. ಇದು ಬಾಕ್ಸ್ ಆಫೀಸ್ನಲ್ಲಿ ಉತ್ತಮ ಗಳಿಕೆ ಕಾಣುವ ಮೂಲಕ ಸೂಪರ್‌ಹಿಟ್ ಚಿತ್ರವಾಗಿ ಗುರುತಿಸಿಕೊಂಡಿದೆ. 2023ರ ಡಿಸೆಂಬರ್ 7 ರಂದು ಬಿಡುಗಡೆಯಾದ ಈ ಚಿತ್ರದಲ್ಲಿ ನಾನಿ ತಂದೆಯಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರವನ್ನು ಶೌರ್ಯುವ್ ನಿರ್ದೇಶಿಸಿದ್ದು, ಫ್ಯಾಮಿಲಿ ಪ್ರೇಕ್ಷಕರನ್ನು ಆಕರ್ಷಿಸಿತು.



ಈ ಎರಡೂ ಚಿತ್ರಗಳಲ್ಲಿ ಕಥೆ ಹೇಳುವ ವಿಧಾನಕ್ಕೆ ಪ್ರಮುಖ ಸಾಮ್ಯತೆ ಇದೆ ಎಂಬುದನ್ನು ಚಿತ್ರದ ಅಭಿಮಾನಿಗಳು ಮತ್ತು ಪ್ರೇಕ್ಷಕರು ಗಮನಿಸಿದ್ದಾರೆ. ಈ ಎರಡೂ ಚಿತ್ರಗಳಲ್ಲಿ ನಾಯಕನು ನಾಯಕಿಗೆ ಪ್ರೇಮಕಥೆಯನ್ನು ನಿರೂಪಿಸುತ್ತಾನೆ ಮತ್ತು ಈ ನಿರೂಪಣೆಯಲ್ಲಿ ಮಗು ನಿರ್ಣಾಯಕ ಪಾತ್ರ ವಹಿಸುತ್ತದೆ. ಹಾಯ್ ನಾನ್ನ ಚಿತ್ರತಂಡ ಈ ಆರೋಪಗಳಿಗೆ ಇನ್ನೂ ಪ್ರತಿಕ್ರಿಯಿಸಿಲ್ಲ.

## ರಿಷಿ ಅಭಿನಯದ 'ರುದ್ರ ಗರುಡ ಪುರಾಣ'ದ ತೆಲುಗು ಡಬ್ಬಿಂಗ್ ರೈಟ್ಸ್ ಭಾರಿ ಬೆಲೆಗೆ ಮಾರಾಟ

ನಟ ರಿಷಿ ಅಭಿನಯದ 'ರುದ್ರ ಗರುಡ ಪುರಾಣ' ಬಿಡುಗಡೆಯಾಗಿ ಸುಮಾರು ಒಂದು ವಾರ ಕಳೆದಿದೆ. ದಿನದಿಂದ ದಿನಕ್ಕೆ ಸ್ಕ್ರೀನ್ ಸಂಖ್ಯೆ ಹೆಚ್ಚುತ್ತಿದ್ದು, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗುತ್ತಿದೆ. ಚಿತ್ರದ ಈ ಯಶಸ್ಸನ್ನು ಆಚರಿಸಲು ಚಿತ್ರತಂಡ ಇತ್ತೀಚೆಗೆ ಒಂದೆಡೆ ಸೇರಿತ್ತು.

ನಿರ್ಮಾಪಕ ಲೋಹಿತ್ ಮಾತನಾಡಿ, 'ಈ ಚಿತ್ರವನ್ನು ಸಾಕಷ್ಟು ಉತ್ಸಾಹದಿಂದ ಮಾಡಲಾಗಿದೆ ಮತ್ತು ಇದು ಪ್ರೇಕ್ಷಕರಿಗೆ ಇಷ್ಟವಾಗಿರುವುದನ್ನು ನೋಡುವುದು ನಿಜವಾಗಿಯೂ ಲಾಭದಾಯಕವಾಗಿದೆ. ಹೆಚ್ಚುತ್ತಿರುವ ಥಿಯೇಟರ್ಗಳ ಸಂಖ್ಯೆ ಅದರ ಯಶಸ್ಸಿಗೆ ಸಾಕ್ಷಿಯಾಗಿದೆ' ಎನ್ನುತ್ತಾರೆ.

ನಿರ್ದೇಶಕ ನಂದೀಶ್ ಮಾತನಾಡಿ, ಈ ಚಿತ್ರದ ಯಶಸ್ಸಿಗೆ ಸಾಮೂಹಿಕ ಪ್ರಯತ್ನವೇ ಕಾರಣವಾಗಿದೆ. ಪ್ರತಿಯೊಬ್ಬ ನಟ ಮತ್ತು ತಂತ್ರಜ್ಞರು ಈ ಯೋಜನೆಗಾಗಿ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಮಾಧ್ಯಮಗಳ ಬೆಂಬಲ ಮತ್ತು ಪ್ರೇಕ್ಷಕರ ಮೆಚ್ಚುಗೆಯ ಮಾತುಗಳು ಈ ಪ್ರಯಾಣಕ್ಕೆ ಸಹಕಾರಿಯಾಗಿದೆ' ಎಂದು ಹೇಳಿದರು.

ನಟ ರಿಷಿ, ತಮ್ಮ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. 'ಚಿತ್ರವನ್ನು ವಿಮರ್ಶಿಸಿದ ವಿಮರ್ಷಕರಿಗೆ ನಾನು ಮೊದಲು ಧನ್ಯವಾದ ಹೇಳಲು ಬಯಸುತ್ತೇನೆ. ಅವರ ಮಾತುಗಳು ಹೆಚ್ಚು ಪ್ರೇಕ್ಷಕರನ್ನು ಚಿತ್ರಮಂದಿರಗಳತ್ತ ಸೆಳೆದಿವೆ.

ಚಿತ್ರ ಬಿಡುಗಡೆಯಾದ ಐದು ದಿನಗಳಲ್ಲಿ, ಹೆಚ್ಚಿನ ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಾಣುತ್ತಿದೆ ಮತ್ತು ಈಗ ತೆಲುಗು ಡಬ್ಬಿಂಗ್ ಹಕ್ಕು ಹೆಚ್ಚಿನ ಮೊತ್ತಕ್ಕೆ ಮಾರಾಟವಾಗಿದೆ' ಎಂದರು

ರುದ್ರ ಗರುಡ ಪುರಾಣದಲ್ಲಿ ರಿಷಿ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ರಾಜಕಾರಣಿಯ ಮಗನ ನಿಗೂಢ ಕಣ್ಮರೆಯ ತನಿಖೆಗೆ ಸಂಬಂಧಿಸಿದೆ. ಈ ಚಿತ್ರ 1955 ರಲ್ಲಿ ಇದ್ದಕ್ಕಿಂದ್ದಂತೆ ಕಣ್ಮರೆಯಾಗಿ, ಮೂರು ದಶಕಗಳ ನಂತರ ಮತ್ತೆ ಕಾಣಿಸಿಕೊಂಡ ಕಚಿಟಿ ಂಟ ಈಟುಝಿಣ 914 ನಿಂದ ಸ್ಫೂರ್ತಿ ಪಡೆದಿದೆ. ಪ್ರಿಯಾಂಕಾ ಕುಮಾರ್ ನಾಯಕಿಯಾಗಿ ನಟಿಸಿದ್ದರೆ, ಶಿವರಾಜ್ ಕೆಆರ್ ಪೇಟೆ, ಗಿರೀಶ್ ಶಿವಣ್ಣ, ವಿನೋದ್ ಆಳ್ವಾ ಮತ್ತು ಅವಿನಾಶ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.



ಚಿತ್ರಕ್ಕೆ ಸಂದೀಪ್ ಕುಮಾರ್ ಅವರ ಛಾಯಾಗ್ರಹಣ, ಮನು ಶೇಡಗಾರ್ ಅವರ ಸಂಕಲನವಿದ್ದು, ರಘು ನಿಡುವಳ್ಳಿ ಅವರು ಸಂಭಾಷಣೆ ಬರೆದಿದ್ದಾರೆ. ಸಂಭ್ರಮಾಚರಣೆಗೆ ಪೂರಕವಾಗಿ, ತಂದೆ–ಮಗನ ಬಾಂಧವ್ಯವನ್ನು ಎತ್ತಿ ತೋರಿಸುವ ವಿಶೇಷ ಹಾಡನ್ನು ಚಿತ್ರತಂಡ ಬಿಡುಗಡೆ ಮಾಡಿದೆ.

## ಅದಿತಿ ಪ್ರಭುದೇವ ನಟನೆಯ 'ಅಂದೊಂದಿತ್ತು ಕಾಲ' ಬಿಡುಗಡೆಗೆ ಸಿದ್ಧತೆ

ಹಾಯಾಗಿದೆ ಮತ್ತು ಜಗವೇ ನೀನು ಗೆಳತಿಯೇ ಮುಂತಾದ ಕನ್ನಡ ಗೀತೆಗಳಿಗೆ ಧ್ವನಿ ನೀಡಿರುವ ಗಾಯಕ ಸಿದ್ ಶ್ರೀರಾಮ್ ಇದೀಗ ವಿನಯ್ ರಾಜ್ಕುಮಾರ್ ಮತ್ತು ಅದಿತಿ ಪ್ರಭುದೇವ ಮುಖ್ಯ ಭೂಮಿಕೆಯಲ್ಲಿರುವ 'ಅಂದೊಂದಿತ್ತು ಕಾಲ' ಚಿತ್ರದ ಮತ್ತೊಂದು ಹೃದಯಸ್ಪರ್ಶಿ ಹಾಡಿಗೆ ಧ್ವನಿ ನೀಡಿದ್ದಾರೆ. ಚಿತ್ರದಲ್ಲಿ ಕ್ರೇಜಿ ಸ್ಟಾರ್ ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. 1990ರ ದಶಕದ ಹಿನ್ನೆಲೆಯನ್ನು ಹೊಂದಿರುವ ಚಿತ್ರವು ಟೈಮ್ಲೆಸ್ ಪ್ರೀತಿಯನ್ನು ಹೇಳುತ್ತದೆ.

ಚಿತ್ರತಂಡ ಇದೀಗ 'ಮುಂಗಾರು ಮಳೆಯಲ್ಲಿ ತಂದಲ್ಲೇ ನೀನಿಲ್ಲಿ ಪ್ರೀತಿಯ ಮುನ್ಸೂಚನೆ' ಎಂಬ ಮೊದಲ ಹಾಡನ್ನು ಬಿಡುಗಡೆ ಮಾಡಿದೆ. ಧನಂಜಯ್ ರಂಜನ್ ಬರೆದಿರುವ ಈ ಹಾಡನ್ನು ತೀರ್ಥಹಳ್ಳಿಯ ಸುಂದರವಾದ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ. ರಘು ಆರ್.ಜೆ ನೃತ್ಯ ಸಂಯೋಜನೆ ಮಾಡಿರುವ ಈ ಹಾಡು ಈಗಾಗಲೇ ಗಮನ ಸೆಳೆದಿದ್ದು, ಮುಂಗಾರು ಮಳೆ ತಂಡದಿಂದ ಲಾಂಚ್ ಆಗಿದೆ.ಗೋಲ್ಡನ್ ಸ್ಟಾರ್ ಗಣೇಶ್, ನಿರ್ದೇಶಕ ಯೋಗರಾಜ್ ಭಟ್, ನಟಿ ಪೂಜಾ ಗಾಂಧಿ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ವಿ ರಾಘವೇಂದ್ರ ಸಂಗೀತ ಸಂಯೋಜಿಸಿದ್ದಾರೆ. ಈ ಹಾಡನ್ನು ಂ2 ಮ್ಯೂಸಿಕ್ ಗಮನಾರ್ಹ ಮೊತ್ತಕ್ಕೆ ಆಡಿಯೋ ಹಕ್ಕುಗಳನ್ನು ಪಡೆದುಕೊಂಡಿದೆ. ಈ ಯೋಜನೆಯು ವಿನಯ್ ರಾಜ್ಕುಮಾರ್ ಅವರ ವೃತ್ತಿಜೀವನದಲ್ಲಿ ಮೈಲಿಗಲ್ಲು ಎಂದು ಗುರುತಿಸಲಾಗಿದೆ.



ಭುವನ್ ಮೂವೀಸ್ ಬ್ಯಾನರ್ ಅಡಿಯಲ್ಲಿ ಭುವನ್ ಸುರೇಶ್ ನಿರ್ಮಿಸಿರುವ ಈ ಚಿತ್ರವನ್ನು ಕೀರ್ತಿ ಕೃಷ್ಣಪ್ಪ ನಿರ್ದೇಶಿಸಿದ್ದು, ಮಾರ್ಚ್ನಲ್ಲಿ ಬಿಡುಗಡೆ ಮಾಡುವ ಗುರಿಯನ್ನು ಚಿತ್ರತಂಡ ಹೊಂದಿದೆ. ಸಂತೋಷ್ ಮುಂದಿನಮನೆ ಸಂಭಾಷಣೆಗೆ ಸಹಕರಿಸಿದ್ದಾರೆ ಮತ್ತು ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಚಿತ್ರಕ್ಕೆ ಅಭಿಷೇಕ್ ಅವರ ಛಾಯಾಗ್ರಹಣ ಮತ್ತು ಎಆರ್ ಕೃಷ್ಣ ಅವರ ಸಂಕಲನವಿದೆ.

ಚಿತ್ರದ ತಾರಾಗಣದಲ್ಲಿ ನಿಶಾ ಮಿಲನ್, ಅರುಣಾ ಬಾಲರಾಜ್, ಕಡ್ಡಿಪುಡಿ ಚಂದ್ರು, ಜಗ್ಗಪ್ಪ, ಗೋವಿಂದೇಗೌಡ, ಧರ್ಮೇಂದ್ರ ಅರಸ್ ಮತ್ತು ತುಕಾಲಿ ಸಂತೋಷ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಸದ್ಯ ಚಿತ್ರ ಪೋಸ್ಟ್–ಪ್ರೊಡಕ್ಷನ್ ಹಂತದಲ್ಲಿದ್ದು, ಚಿತ್ರತಂಡ ಮಾರ್ಚ್ನಲ್ಲಿ ಬಿಡುಗಡೆ ಮಾಡಲು ಸಿದ್ಧತೆ ನಡೆಸುತ್ತಿದೆ.

## ಸಂಜು ವೆಡ್ಸ್ ಗೀತಾ–2: ಹೆಚ್ಚುವರಿ ದೃಶ್ಯಗಳೊಂದಿಗೆ ಮರು ಬಿಡುಗಡೆಗೆ ಸಿದ್ಧತೆ!

ನಾಗಶೇಖರ್ ನಿರ್ದೇಶನದ ಶ್ರೀನಗರ ಕಿಟ್ಟಿ ಹಾಗೂ ರಚಿತರಾಮ್ ಅಭಿನಯದ 'ಸಂಜು ವೆಡ್ಸ್ ಗೀತಾ–2 ಸಿನಿಮಾ 20 ನಿಮಿಷಗಳ ಹೆಚ್ಚುವರಿ ದೃಶ್ಯಗಳೊಂದಿಗೆ 2ನೇ ಬಾರಿಗೆ ಬಿಡುಗಡೆಗೆ ಸಿದ್ಧತೆ ನಡೆಸಿದೆ.

ಈ ಹಿಂದೆ ಜನವರಿ 17 ರಂದು ಚಿತ್ರ ಬಿಡುಗಡೆ ಆಗಿತ್ತು. ಆದರೆ ಸಿನಿಮಾ ಬಗ್ಗೆ ನೆಗೆಟಿವ್ ಕಾಮೆಂಟ್ ಹಾಗೂ ಪ್ರೇಕ್ಷಕರಿಂದ ನೀರಸ ಪ್ರತಿಕ್ರಿಯೆ ಕೇಳಿಬಂದ ನಂತರ ಚಿತ್ರತಂಡ ಹೆಚ್ಚುವರಿ

ಚಿತ್ರೀಕರಣವನ್ನು ಚಿತ್ರಕ್ಕೆ ಮರು ಜೋಡಿಸಲು ನಿರ್ಧರಿಸಿದ್ದಾರೆ. ಇದರಲ್ಲಿ ಹೊಸದಾಗಿ ಹಾಸ್ಯ, ಭಾವನಾತ್ಮಕ ಮತ್ತು ಸಾಹಸ ದೃಶ್ಯ ಒಳಗೊಂಡಂತೆ 20 ನಿಮಿಷಗಳ ಹೆಚ್ಚುವರಿ ದೃಶ್ಯಗಳನ್ನು ಸೇರಿಸಲಾಗುತ್ತಿದೆ.


ಮೊದಲ ಬಾರಿಗೆ ಚಿತ್ರ ಬಿಡುಗಡೆಯಾದಾಗ ಒಂದಷ್ಟು ಆತಂಕ ಸೃಷ್ಟಿಯಾಗಿದ್ದ ಕಾರಣ ಎಲ್ಲವನ್ನೂ ಗಮನಿಸಲು ಸಾಧ್ಯವಾಗಿಲ್ಲ. ಹಾಗಾಗಿ ಈಗ ಹೊಸದಾಗಿ ಹೆಚ್ಚುವರಿ ದೃಶ್ಯಗಳು, ಸಂಗೀತ ಸೇರಿದಂತೆ ಸಣ್ಣ ಪುಟ್ಟ ಸಮಸ್ಯೆಗಳನ್ನು ಸರಿಪಡಿಸಿ, ಪ್ರೇಕ್ಷಕರಿಗೆ ಇಷ್ಟವಾಗುವಂತೆ ಮರು ಚಿತ್ರೀಕರಣ ಮಾಡಲಾಗುತ್ತಿದೆ ಎಂದು ಚಿತ್ರ ತಂಡ ತಿಳಿಸಿದೆ.

ಹೆಚ್ಚುವರಿ ಚಿತ್ರೀಕರಣದ ಭಾಗವು ಕೂಡಾ ಸೆನ್ಸಾರ್ ಮಂಡಳಿಯಿಂದ ಅನುಮೋದನೆ ಪಡೆಯಬೇಕಾಗಿದೆ. ಮರು–ಬಿಡುಗಡೆ ದಿನಾಂಕವನ್ನು ಇನ್ನೂ ದೃಢೀಕರಿಸದಿದ್ದರೂ, ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಚಿತ್ರತಂಡ ತಿಳಿಸಿದೆ.



ಛಲವಾದಿ ಕುಮಾರ್ ಈ ಚಿತ್ರವನ್ನು ನಿರ್ಮಿಸಿದ್ದು, ಶ್ರೀಧರ್ ವಿ ಸಂಗೀತ ಮತ್ತು ಸತ್ಯ ಹೆಗ್ಡೆ ಅವರ ಛಾಯಾಗ್ರಹಣವಿದೆ. ಫೆಬ್ರವರಿ 14 ರಂದು ಚಿತ್ರ ಬಿಡುಗಡೆಯಾಗಬಹುದು ಎಂಬ ವದಂತಿ ಇದೆ. ಆದರೆ ಮರು ಬಿಡುಗಡೆಯ ಅಧಿಕೃತ ದಿನಾಂಕಕ್ಕೆ ಕಾಯಲಾಗುತ್ತಿದೆ.

## ಎಸ್ ನಾರಾಯಣ್ ನಿರ್ದೇಶನದ 'ಮಾರುತ' ಚಿತ್ರೀಕರಣ ಪೂರ್ಣ



ಎಸ್ ನಾರಾಯಣ್ ನಿರ್ದೇಶನದ, ನಟ ದುನಿಯಾ ವಿಜಯ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಮಾರುತ ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದೆ.

ಈಶಾ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಕೆ ಮಂಜು ಮತ್ತು ರಮೇಶ್ ಯಾದವ್ ನಿರ್ಮಿಸಿರುವ ಈ ಚಿತ್ರದ ಚಿತ್ರೀಕರಣ ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಧಾರವಾಡ, ಕೂಡಲ ಸಂಗಮ, ಸವದತ್ತಿ, ಬೆಳಗಾವಿ ಮತ್ತು ಗೋವಾ ಸೇರಿದಂತೆ ವಿವಿಧ ಸ್ಥಳಗಳಲ್ಲಿ ನಡೆಸಲಾಗಿದ್ದು, ಚಿತ್ರೀಕರಣ ಇದೀಗ ಪೂರ್ಣಗೊಂಡಿದೆ.

## ಅಪಾಯವಿದೆ ಎಚ್ಚರಿಕೆ' ಚಿತ್ರ ಬಿಡುಗಡೆ ದಿನಾಂಕ ಫಿಕ್ಸ್

ಸ್ಯಾಂಡಲ್ ವುಡ್ ನಲ್ಲಿ ನಿರೀಕ್ಷೆ ಹುಟ್ಟಿಸಿರುವ ಅಣ್ಣಯ್ಯ ಧಾರಾವಾಹಿ ಖ್ಯಾತಿಯ ನಟ ವಿಕಾಶ್ ಉತ್ತಯ್ಯ ನಟನೆಯ ಅಪಾಯವಿದೆ ಎಚ್ಚರಿಕೆ ಚಿತ್ರ ಫೆ.28ಕ್ಕೆ ತೆರೆಗೆ ಬರಲು ಸಜ್ಜಾಗಿದೆ.

'ಅಪಾಯವಿದೆ ಎಚ್ಚರಿಕೆ' ಚಿತ್ರ ವಿಭಿನ್ನ ಕಥೆಯ ಹಾರರ್ ಥ್ರಿಲ್ಲರ್ ಚಿತ್ರವಾಗಿದ್ದು, ಕೆಲ ದಿನಗಳ ಹಿಂದಷ್ಟೇ ಮೋಶನ್ ಪೋಸ್ಟರ್ ಬಿಡುಗಡೆ ಮಾಡಿದ್ದ ಚಿತ್ರತಂಡ ಪ್ರೇಕ್ಷಕರಲ್ಲಿ ನಿರೀಕ್ಷೆ ಹೆಚ್ಚಾಗುವಂತೆ ಮಾಡಿತ್ತು. ನಂತರ ಬಿಡುಗಡೆಯಾದ ವಿಬ್ಯಾಚುಲರ್ ಬದುಕುಹಿ ಎನ್ನುವ ಗೀತೆ. ಎಲ್ಲಾ ಬ್ಯಾಚುಲರ್ಸ್ ಬದುಕಿನ ಬವಣೆಗಳ ನೈಜತೆಯನ್ನು ತೋರಿಸಿತ್ತು. ಚಿತ್ರದ ಟೀಸರ್ ಕೂಡ ಪ್ರೇಕ್ಷಕರಲ್ಲಿ ಕುತೂಹಲ ಹೆಚ್ಚಾಗುವಂತೆ ಮಾಡಿದೆ.

ಇದೀಗ ಚಿತ್ರವು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಬಿಡುಗಡೆಗೆ ಸಜ್ಜಾಗಿದೆ. ವಿಕಾಸ್ ಉತ್ತಯ್ಯ ಅವರು ಚಿತ್ರದಲ್ಲಿ ಸೂರಿ ಪಾತ್ರದ ಮೂಲಕ ಕಾಣಿಸಿಕೊಂಡಿದ್ದು, ಈ ಮೂಲಕ ಸ್ಯಾಂಡಲ್'ವುಡ್'ಗೆ ಪಾದಾರ್ಪಣೆ ಮಾಡಿದ್ದಾರೆ.

ಚಿತ್ರದಲ್ಲಿ ರಾಧಾ ಭಗವತಿ (ಅಮೃತಧಾರೆ ಖ್ಯಾತಿಯ ನಟಿ), ರಾಘವ್ ಕೊಡಚಾದ್ರಿ ಮತ್ತು ಮಿಥುನ್ ತೀರ್ಥಹಳ್ಳಿ ಕೂಡ ನಟಿಸಿದ್ದಾರೆ. ಯಶಸ್ವಿನಿ ಕ್ರಿಯೇಷನ್ಸ್ ಅಡಿಯಲ್ಲಿ ವಿಜಿ ಮಂಜುನಾಥ್ ಮತ್ತು ಪೂರ್ಣಿಮಾ ಎಂ ಗೌಡ ನಿರ್ಮಿಸಿರುವ ಈ ಚಿತ್ರಕ್ಕೆ ಸುನಾದ ಗೌತಮ್ ಸಂಗೀತ ಮತ್ತು ಛಾಯಾಗ್ರಹಣವನ್ನು ನೀಡಿದ್ದಾರೆ.



ಚಿತ್ರವು ಭೂಮಿ, ಗಾಳಿ, ನೀರು, ಬೆಂಕಿ ಮತ್ತು ಆಕಾಶ ಎಂಬ ಐದು ಅಂಶಗಳ ಸಾರವನ್ನು ಪರಿಶೋಧಿಸಲಿದೆ. ಟೀಸರ್'ನಲ್ಲಿ ದೃಶ್ಯಗಳು, ಮ್ಯೂಸಿಕ್ ಕುತೂಹಲ ಮೂಡಿಸಿದ್ದು, ಆಸನದ ತುದಿಯಲ್ಲಿ ಕುಳಿತು ನೋಡುವ, ಪ್ರೇಕ್ಷಕರಿಗೆ ಮನರಂಜನೆ ಒದಗಿಸುವ ಭರವಸೆ ನೀಡಿದೆ.

## ನೆನಪಿರಲಿ ಪ್ರೇಮ್'ಗೆ ಶರಣ್ಯಾ ಶೆಟ್ಟಿ ನಾಯಕಿ




1980, ನಗುವಿನ ಹೂಗಳೇ, ಕೃಷ್ಣಂ ಪ್ರಣಯ ಸಖಿ, ಮತ್ತು ಫಾರೆಸ್ಟ್ನಂತಹ ಸಿನಿಮಾಗಳಲ್ಲಿ ನಟಿಸಿ ಖ್ಯಾತಿ ಗಳಿಸಿರುವ ನಟಿ ಶರಣ್ಯ ಶೆಟ್ಟಿ ಅವರು, ನಾಯಕ ನಟಿಯಾಗಿ ಸ್ಯಾಂಡಲ್ವುಡ್ಗೆ ಕಾಲಿಡಲು ಸಜ್ಜಾಗಿದ್ದಾರೆ.

ಚಿತ್ರದಲ್ಲಿ ನೆನಪಿರಲಿ ಪ್ರೇಮ್ ಅವರು ನಾಯಕ ನಟನಾಗಿ ನಟಿಸುತ್ತಿದ್ದು, ಈ ಮೂಲಕ ಚಿತ್ರರಂಗಕ್ಕೆ ಕಮ್'ಬ್ಯಾಕ್ ಆಗುತ್ತಿದ್ದಾರೆ. ಚಿತ್ರದಲ್ಲಿ ಶರಣ್ಯ ಅವರು ಪ್ರೇಮ್ ಅವರಿಗೆ ಜೋಡಿಯಾಗಿ ಹಾಗೂ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರದ ಕಥೆ ಹಾಗೂ ನಿರ್ದೇಶನವನ್ನು ತೇಜಲ್ ಅವರು ಮಾಡಿದ್ದು, ಚಿತ್ರವು ಫೆಬ್ರವರಿಯಲ್ಲಿ ತೆರೆಗೆ ಬರಲು ಸಜ್ಜಾಗಿದೆ. ಚಿತ್ರದಲ್ಲಿ ನಾಯಕ ನಟಿಯಾಗಿ ನಟಿಸಿರುವ ಶರಣ್ಯಾ ಅವರು ಚಿತ್ರ ಬಿಡುಗಡೆಗೆ ಕಾತುರರಾಗಿದ್ದಾರೆ. ಪಾತ್ರದ ಬಗ್ಗೆ ಉತ್ಸುಕಳಾಗಿದ್ದೇನೆ. ಇದೂವರೆಗೂ ಮಾಡಿದ ಪಾತ್ರಗಳಿಗಿಂತ ಈ ಚಿತ್ರದಲ್ಲಿ ಮಾಡಿರುವ ಪಾತ್ರ ವಿಭಿನ್ನವಾಗಿದೆ. ಚಿತ್ರದಲ್ಲಿ ನಾಯಕ ನಟಿಯಾಗಿದ್ದೇನೆ. ಹೊಸ ಭಾಷೆ ಕಲಿಯಲು ಅಗತ್ಯವಿರುವ ಪಾತ್ರವಾಗಿದೆ. ನಾಯಕ ನಟಿಯಾಗಬೇಕೆಂಬ ಬಯಕೆ ಇತ್ತು. ಆದರೆ, ಟೈಪ್ಕಾಸ್ಟ್ ಆಗಲು ಎಂದಿಗೂ ಬಯಸಲಿಲ್ಲ. ಯಾವಾಗಲೂ ವಿಭಿನ್ನ ಪಾತ್ರ ಮಾಡಲು ಬಯಸುತ್ತೇನೆಂದು ನಟಿ ಶರಣ್ಯಾ ಅವರು ಹೇಳಿದ್ದಾರೆ.

### ಮಹಾಕುಂಭ ಮೇಳದಲ್ಲಿ ಕಾಲ್ತುಳಿತ

# ಚರ್ಚೆಗೆ ಆಗ್ರಹಿಸಿ ಲೋಕಸಭೆಯಲ್ಲಿ ಪ್ರತಿಭಟನೆ, ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳಿಂದ ಸಭಾತ್ಯಾಗ



**ನವದೆಹಲಿ:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭದಲ್ಲಿ ಕಳೆದ ವಾರ ಸಂಭವಿಸಿದ ಕಾಲ್ತುಳಿತದಲ್ಲಿ ಹಲವಾರು ಮಂದಿ ಸಾವಿಗೀಡಾಗಿದ್ದು, ಈ ಬಗ್ಗೆ ತಕ್ಷಣವೇ ಚರ್ಚೆ ನಡೆಸಬೇಕೆಂಬ ತಮ್ಮ ಬೇಡಿಕೆಯನ್ನು ಸಭಾಪತಿ ಅಂಗೀಕರಿಸದ ಹಿನ್ನೆಲೆಯಲ್ಲಿ ಪ್ರತಿಪಕ್ಷಗಳು ಸೋಮವಾರ ರಾಜ್ಯಸಭೆಯಿಂದ ಹೊರನಡೆದವು.

ಮಹಾಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತ ವಿಚಾರ ಸೇರಿದಂತೆ ವಿವಿಧ ವಿಚಾರಗಳ ಕುರಿತು ಚರ್ಚಿಸಲು ಇಂದಿನ ಕಾರ್ಯಕಲಾಪದ ಪಟ್ಟಿಯನ್ನು ಅಮಾನತುಗೊಳಿಸುವಂತೆ ಕೋರಿ ನಿಯಮ 267ರ ಅಡಿಯಲ್ಲಿ ಒಂಭತ್ತು ನೋಟಿಸ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಸಭಾಪತಿ ಜಗದೀಪ್ ಧಂಖರ್ ತಿಳಿಸಿದರು.

ಕಾಂಗ್ರೆಸ್ ನಾಯಕರಾದ ಪ್ರಮೋದ್ ತಿವಾರಿ ಮತ್ತು ದಿಗ್ವಿಜಯ ಸಿಂಗ್, ಟಿಎಂಸಿಯ ಸಾಗರಿಕಾ ಘೋಷ್, ಸಮಾಜವಾದಿ ಪಕ್ಷದ ಜಾವೇದ್ ಅಲಿ ಮತ್ತು ರಾಮ್‌ಜಿ ಲಾಲ್ ಸುಮನ್ ಮತ್ತು ಸಿಪಿಐ ಪಕ್ಷಧ ಜಾನ್ ಬ್ರಿಟಾಸ್ ಅವರು ಮಹಾಕುಂಭ ವಿಷಯದ ಬಗ್ಗೆ ಚರ್ಚೆಗೆ ಒತ್ತಾಯಿಸಿ ನೋಟಿಸ್ ನೀಡಿದ್ದರು.

ಸಂವಿಧಾನ ಮತ್ತು ಬಿಆರ್ ಅಂಬೇಡ್ಕರ್ ಅವರಿಗೆ ಅಗೌರವ ತೋರುವ ಘಟನೆಗಳು ಮತ್ತು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ರಾಜ್ಯ ಸಚಿವರು ನೀಡಿದ್ದ ತಾರತಮ್ಯ ಮತ್ತು ಜಾತಿವಾದಿ ಹೇಳಿಕೆಗಳಿಗೆ' ಸಂಬಂಧಿಸಿದ ವಿಚಾರಗಳ ಚರ್ಚೆಗೆ ಒತ್ತಾಯಿಸಲಾಗಿದೆ.

ನಿಯಮ 267ರ ಅಡಿಯಲ್ಲಿ ಸಲ್ಲಿಕೆಯಾಗಿದ್ದ ನೋಟಿಸ್‌ಗಳಿಗೆ ಸಂಬಂಧಿಸಿದಂತೆ ಸಭಾಪತಿ ಧಂಖರು ಅವರು ಚರ್ಚೆಗೆ ಅವಕಾಶ ನೀಡಲಿಲ್ಲ. ಬಳಿಕ ನಿಗದಿಯಂತೆ ಶೂನ್ಯವೇಳೆ ಮುಂದುವರಿಯಿತು.

ಚರ್ಚೆಗೆ ಅವಕಾಶ ನೀಡದಿದ್ದರಿಂದ ಕಾಂಗ್ರೆಸ್, ಎಸ್‌ಪಿ, ಡಿಎಂಕೆ, ಎಎಪಿ, ಆರ್‌ಜೆಡಿ, ಸಿಪಿಐ ಮತ್ತು ಸಿಪಿಎಂ ಸೇರಿದಂತೆ ವಿರೋಧ ಪಕ್ಷಗಳ ಸಂಸದರು ತೀವ್ರ ಪ್ರತಿಭಟನೆ ನಡೆಸಿದರು. ಮೌನಿ ಅಮಾವಾಸ್ಯೆಯಂದು ಮಹಾಕುಂಭದಲ್ಲಿ ನಡೆದ ಕಾಲ್ತುಳಿತದಲ್ಲಿ ಕನಿಷ್ಠ 30 ಜನರು ಸಾವಿಗೀಡಾಗಿದ್ದು, ಅದನ್ನು ಎತ್ತಿ ತೋರಿಸುವ ಪ್ರಯತ್ನದಲ್ಲಿ ಹಲವಾರು ಸಂಸದರು ಘೋಷಣೆಗಳನ್ನು ಕೂಗಿದರು. ನಂತರ ಸದಸ್ಯರು ಸಭಾತ್ಯಾಗ ಮಾಡಿದರು.

ಇದಕ್ಕೂ ಮುನ್ನ ಬೆಳಿಗ್ಗೆ ಮಾತನಾಡಿದ ಧಂಖರ್, ರಾಜ್ಯಸಭೆಯು ದೇಶದ ಸಾಂವಿಧಾನಿಕ ಪ್ರಯಾಣದಲ್ಲಿ ಒಂದು ಮೈಲಿಗಲ್ಲು ಮತ್ತು ಸದನದಲ್ಲಿ ತಮ್ಮ ನಡವಳಿಕೆಗಳು ಅನುಕರಣೀಯವಾಗಿರುವಂತೆ ನೋಡಿಕೊಳ್ಳಬೇಕು ಎಂದು ಸಂಸದರಿಗೆ ಮನವಿ ಮಾಡಿದರು.

**ಲೋಕಸಭೆಯಲ್ಲಿ ಪ್ರತಿಭಟನೆ :** ಪ್ರಯಾಗ್‌ರಾಜ್‌ನಲ್ಲಿ ಇತ್ತೀಚೆಗೆ ನಡೆದ ಮಹಾಕುಂಭದಲ್ಲಿ ನಡೆದ ಕಾಲ್ತುಳಿತದ ಕುರಿತು ಚರ್ಚೆಗೆ ಆಗ್ರಹಿಸಿ ವಿಪಕ್ಷಗಳ ಸದಸ್ಯರು ಲೋಕಸಭೆಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸದನ ಸೇರಿದಾಗ, ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷದ ಸಂಸದರು ಮಹಾಕುಂಭದಲ್ಲಿ ಇತ್ತೀಚೆಗೆ ಸಂಭವಿಸಿದ ದುರಂತದ ಬಗ್ಗೆ ಚರ್ಚೆಗೆ ಒತ್ತಾಯಿಸಿದರು. ಕೂಡಲೇ ಪ್ರತಿಪಕ್ಷದ ಸದಸ್ಯರು ಸದನದ ಬಾವಿಗೆ ನುಗ್ಗಿ ಗದ್ದಲ, ಘೋಷಣೆ ಕೂಗಿದರು.

ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪ ನಾಯಕ ಗೌರವ್ ಗೊಗೊಯ್ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ನೇತೃತ್ವದಲ್ಲಿ ವಿಪಕ್ಷ ಸದಸ್ಯರು ಪ್ರಶ್ನೋತ್ತರ ಅವಧಿಯನ್ನು ಅಮಾನತುಗೊಳಿಸುವಂತೆ ಒತ್ತಾಯಿಸಿದರು. ಕಾಲ್ತುಳಿತದ ಬಗ್ಗೆ ಚರ್ಚೆಗೆ ಒತ್ತಾಯಿಸಿದರು ಮತ್ತು ಕಾಲ್ತುಳಿತದಲ್ಲಿ ಸಾವಿಗೀಡಾದವರ ಸಂಪೂರ್ಣ ಪಟ್ಟಿಯನ್ನು ಕೇಳಿದರು.

ರಾಷ್ಟ್ರಪತಿಗಳು ಜಂಟಿ ಸದನವನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ತಮ್ಮ ಸಮಸ್ಯೆಗಳನ್ನು ಪ್ರಸ್ತಾಪಿಸಬಹುದು ಎಂದು ಸ್ಪೀಕರ್ ಓಂ ಬಿರ್ಲಾ ಪ್ರತಿಭಟನಾನಿರತ ಸದಸ್ಯರಿಗೆ ತಿಳಿಸಿದರು.

ಪ್ರಮುಖ ವಿಷಯಗಳ ಚರ್ಚೆ ನಡೆಯುವ ಪ್ರಶ್ನೋತ್ತರ ವೇಳೆಗೆ ಅಡ್ಡಿಪಡಿಸಬಾರದು ಮತ್ತು ವಿರೋಧ ಪಕ್ಷದ ಸದಸ್ಯರು ಸದನ ಸುಗಮವಾಗಿ ನಡೆಯಲು ಅವಕಾಶ ನೀಡಬೇಕು. ಸದನ ಸರಿಯಾಗಿ ನಡೆಯುವುದು ನಿಮಗೆ ಇಷ್ಟವಿಲ್ಲ. ಸದನಕ್ಕೆ ಅಡ್ಡಿಪಡಿಸಲು ಮತ್ತು ಘೋಷಣೆಗಳನ್ನು ಕೂಗಲೆಂದು ಜನರು ನಿಮ್ಮನ್ನು ಆಯ್ಕೆ ಮಾಡಿದ್ದಾರೆಯೇ' ಎಂದು ಪ್ರಶ್ನಿಸಿದರು.

ಕಾಂಗ್ರೆಸ್, ಡಿಎಂಕೆ, ಟಿಎಂಸಿ ಮತ್ತು ಎಸ್‌ಪಿ ಸೇರಿದಂತೆ ಪ್ರತಿಪಕ್ಷಗಳ ಸದಸ್ಯರು ಪ್ರಶ್ನೋತ್ತರ ಅವಧಿ ಮುಗಿದ ನಂತರ ಸ್ವಲ್ಪ ಹೊತ್ತು ಸಭಾತ್ಯಾಗ ಮಾಡಿದರು. ನಂತರ ಅವರು ವಾಪಸಾದರು.

## ತವರುಮನೆ ಜಮ್ಮಾಪುರ ಜಾತ್ರೆಗೆ ತೆರಳಿದ ದೊಡ್ಡ ಮಾರಿಕಾಂಬಾ ದೇವಿ

**ಜಗಳೂರು:** ಪಟ್ಟಣದ ದೊಡ್ಡಮಾರಿಕಾಂಭ ದೇವಿಯನ್ನು ತಾಲ್ಲೂಕಿನ ಜಮ್ಮಾಪುರ ಜಾತ್ರಾ ಮಹೋತ್ಸವಕ್ಕೆ ಕರೆದುಕೊಂಡು ಹೋಗಲಾಯಿತು.

9 ವರ್ಷದ ನಂತರ ಫೆ.3 ರಿಂದ 8 ರವರೆಗೆ ನಡೆಯಲಿರುವ ಜಾತ್ರಾ ಮಹೋತ್ಸವಕ್ಕೆ ದೊಡ್ಡಮಾರಿಕಾಂಭ ದೇವಿ ಗಂಡನ ಮನೆ ಜಗಳೂರಿನಿಂದ ತವರುಮನೆ ಜಮ್ಮಾಪುರಕ್ಕೆ ಅದ್ದೂರಿಯಾಗಿ ಉರಿಮೆ, ವಾದ್ಯವೃಂದದೊಂದಿಗೆ ಮೆರವಣಿಗೆಯೊಂದಿಗೆ ತೆರಳಿದ್ದು ವಿಶೇಷವಾಗಿತ್ತು.

ಜಗಳೂರಿನಲ್ಲಿ ನಡೆಯುವ ದೊಡ್ಡಮಾರಿಕಾಂಭ ದೇವಿ ಜಾತ್ರೆ ಸಂದರ್ಭದಲ್ಲಿಯೂ ಜಮ್ಮಾಪುರ ಗ್ರಾಮಕ್ಕೆ ತೆರಳಿ ತವರುಮನೆ ಸೀರೆ ಧರಿಸಿ ಪುನಃ ಗಂಡನ ಮನೆಗೆ ಬರುವುದು ವಾಡಿಕೆಯಾಗಿದೆ. ಜಗಳೂರಿಗೂ ಜಮ್ಮಾಪುರ ಗ್ರಾಮಕ್ಕೆ ದೇವಿಯ ನಂಟು ಅವಿನಾಭಾವ ಸಂಬಂಧ ಪೂರ್ವಜರ ಕಾಲದಿಂದಲೂ ಸಂಪ್ರಾದಾಯಿಕವಾಗಿ ನಡೆದುಕೊಂಡು ಬಂದಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

**ಜಾತ್ರೆಯಲ್ಲಿ ನಡೆಯುವ ಕಾರ್ಯಕ್ರಮಗಳು :** ಫೆ.4 ಮಂಗಳವಾರದಂದು ದೇವಿಯ ಗಂಗಾಪೂಜೆ, ಫೆ.5 ಬುಧವಾರದಂದು ದೇವಿಗೆ ಮೀಸಲು ಮತ್ತು ಎಡೆಪೂಜೆ, ಫೆ.6 ಗುರುವಾರದಂದು ಬಿರೂರಿನ ನ್ಯೂ ಮೇಘನಾ ಮೆಲೋಡಿಯಸ್ ವತಿಯಿಂದ ಸಂಜೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

# ಭ್ರಷ್ಟ ರಾಜಕಾರಣಿಗಳ ಚಳಿ ಬಿಡಿಸಿದ ದಿವ್ಯಾ

ಇನೋಸೆಂಟ್ ದಿವ್ಯಾ. ಸುದೀರ್ಘ ಐದು ವರ್ಷ ಊಟಿ ಡಿಸಿಯಾಗಿ ಅಧಿಕಾರ ನಡೆಸಿದ ಏಕೈಕ ಅಧಿಕಾರಿ ಡಿಸಿ ದಿವ್ಯಾ. 2009ರ ಐಎಎಸ್ ಬ್ಯಾಚ್ ದಿವ್ಯಾ, 2017ರಲ್ಲಿ ನೀಲಗಿರಿ ಜಿಲ್ಲೆಯ ಊಟಿ ಡಿಸಿಯಾಗಿ ನೇಮಕವಾದರು.

ಆಕೆ ಎಷ್ಟು ಖಡಕ್ ಅಂದ್ರೆ, ಒಬ್ಬೇ ಒಬ್ಬ ಎಂಎಲ್ಎ, ಎಂಪಿ, ಮಿನಿಸ್ಟರ್ ಬಾಲ ಬಿಚ್ಚುತ್ತಿರಲಿಲ್ಲ. ಯಾವ ಮಂತ್ರಿಗೂ, ಜನಪ್ರತಿನಿಧಿಗೂ ಕ್ಯಾರೆ ಎನ್ನದೇ ಕೆಲಸ ಮಾಡಿದ ದಿವ್ಯಾ, ಊಟಿ ಡಿಸಿಯಾಗಿ ವರ್ಗಾವಣೆಯಾದಾಗ, ಮಾಡಿದ ಮೊದಲ ಕೆಲಸ 38 ಅನಧಿಕೃತ ರೆಸಾರ್ಟ್ ಗಳನ್ನು ಮುಚ್ಚಿಸಿಬಿಟ್ಟರು. ಅನಧಿಕೃತ ರೆಸಾರ್ಟ್ ನಿರ್ಮಾಣಕ್ಕೆ ಅಧಿಕಾರಿಗಳ ಲಂಚಗುಳಿತನ, ರಾಜಕಾರಣಿಗಳ ಒತ್ತಾಸೆ ಎಲ್ಲ ಸೇರಿ ಇಡೀ ಊಟಿಯ ಪ್ರಾಕೃತಿಕ ಸೌಂದರ್ಯಕ್ಕೆ ಭಾರೀ ಅಪಾಯದ ಗಂಟೆ ಬಡಿದಿತ್ತು. ಊಟಿಯು ಸಮುದ್ರ ಮಟ್ಟಕ್ಕಿಂತ ಸುಮಾರು 7,500 ಅಡಿ (2,286 ಮೀ) ಎತ್ತರದಲ್ಲಿದೆ. ಅದ್ಭುತ ಪ್ರಾಕೃತಿಕ ಸೌಂದರ್ಯ ಸೊಬಗು ಮತ್ತು ಭವ್ಯವಾದ ಹಸಿರು ಆಳ ಕಣಿವೆಗಳನ್ನು ಹೊಂದಿರುವ ನೀಲಗಿರಿಯನ್ನು ಕಾಪಾಡಿ ಎಂದು ಊಟಿ ಜನರ ಮೊರೆ ಕೇಳಿಸಿದಂತೆ ಕೆಲಸಕ್ಕಿಳಿದ ದಿವ್ಯಾ, ರೆಸಾರ್ಟ್ ಗಳ ನಿರ್ಮಾಣಕ್ಕೆ ನೀಡಿದ್ದ ಅನುಮತಿ ರದ್ದುಪಡಿಸಿದರು. ಹೊಸದಾಗಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನಿರಾಕರಿಸಿದರು. ಆನೆ ಕಾರಿಡಾರ್ ಕಾಪಾಡುವ ಕಠಿಣ ಕಾನೂನು ಜಾರಿಗೊಳಿಸಿದರು. ಇಡೀ ನೀಲಗಿರಿ ಜಿಲ್ಲೆಯಲ್ಲಿ ಬೋರೆ ವೆಲ್ ಕೊರೆಸುವುದನ್ನು ನಿಷೇಧಿಸಿದರು. ಕುಡಿಯುವ ನೀರು ಪೂರೈಸುವಕ್ಕೆ ಸರಕಾರದಿಂದಲೇ ವ್ಯವಸ್ಥೆ ಮಾಡಿದರು. ಅರ್ಧ ಲೀಟರ್, ಒಂದು ಲೀಟರ್ ನೀರು ಮಾರಾಟ ಬ್ಯಾನ್ ಮಾಡಿದರು. 5 ಲೀಟರ್ ಕ್ಯಾನ್ ಗಳಲ್ಲಿ ನೀರು ಮಾರಬೇಕು ಮತ್ತು ಅದನ್ನೇ ಮರುಬಳಕೆ ಮಾಡಬೇಕೆಂಬ ಕಟ್ಟಳೆ ಜಾರಿ ಮಾಡಿದರು. ಮುಖ್ಯವಾಗಿ ನೀಲಗಿರಿ, ಊಟಿಯ ಆದಿವಾಸಿಗಳ ಪುನಶ್ಚೇತನಕ್ಕೆ ಮುಂದಾಗಿ 300 ಮನೆ ನಿರ್ಮಿಸಿಕೊಟ್ಟರು. ಡಿಸಿ ದಿವ್ಯಾರ ಒಂದೊಂದು ಆದೇಶವೂ ಭ್ರಷ್ಟ ಅಧಿಕಾರಿಗಳು, ರಾಜಕಾರಣಿಗಳಿಗೆ ನುಂಗಲಾರದ ಬಿಸಿ ತುಪ್ಪವಾಯ್ತು. ಎಷ್ಟೇ ಪ್ರಭಾವ ಬಳಸಿದರೂ, ಒತ್ತಡ ಹೇರಿದರೂ ದಿವ್ಯಾ ಜಗ್ಗಲಿಲ್ಲ. ಕೊನೆಗೆ, ರಾಜಕಾರಣಿಗಳೆಲ್ಲ ಸೇರಿ ದಿವ್ಯಾರನ್ನು ಟ್ರಾನ್ಸ್ ಫರ್ ಮಾಡಿಸುವಲ್ಲಿ ಯಶಸ್ವಿಯಾಗಿಬಿಟ್ರು.

ಇನ್ನೇನು ದಿವ್ಯಾ ಊಟಿ ಖಾಲಿ ಮಾಡುತ್ತಾರೆಂದು ಖುಷಿಪಡುತ್ತಿದ್ದವರ ಸಂಭ್ರಮಕ್ಕೆ ಸುಪ್ರೀಂಕೋರ್ಟ್ ತಣ್ಣೀರೆರಚಿತು. ಯಾವುದೇ ಕಾರಣಕ್ಕೂ, ದಿವ್ಯಾ ಒಪ್ಪದ ಹೊರತು ಅವರನ್ನು ವರ್ಗಾವಣೆ ಮಾಡದಂತೆ ಸುಪ್ರೀಂ ಕೋರ್ಟ್ ಆದೇಶಿಸಿ ಇಡೀ ರಾಜಕಾರಣಿಗಳು, ಪ್ರಭಾವಿಗಳಿಗೆ ಮರ್ಮಾಘಾತ ನೀಡಿತು.

ತಾನು ಇರುವವರೆಗೂ ಊಟಿಯನ್ನು ಕಾಪಾಡಲು ಶತಪ್ರಯತ್ನ ಮಾಡಿದ ದಿವ್ಯ ಅದರಲ್ಲಿ ಯಶಸ್ವಿಯಾದರು. ಕೆಲಸದಲ್ಲಿ ಸ್ಪಷ್ಟತೆ, ಅಭಿವೃದ್ಧಿಯ ಕನಸು, ಪ್ರಾಮಾಣಿಕತೆ, ಸಾಧಿಸಬೇಕೆಂಬ ಛಲ ಇದ್ದರೆ, ಇಡೀ ಜಿಲ್ಲೆಯನ್ನೇ ಉದ್ಧರಿಸಬಹುದು ಎಂಬುದಕ್ಕೆ ದಿವ್ಯಾ ಸಾಕ್ಷಿ. ಊಟಿ ಪಾರಂಪರಿಕ ಸೌಂದರ್ಯ ಉಳಿಸಲು ಮಾಡಿದ ಪ್ರಯತ್ನಗಳಿಂದಾಗಿ, ಮೊನ್ನೆ ವಯನಾಡಿನಲ್ಲಾದ ಪ್ರವಾಹ ದುರಂತದಿಂದ ಊಟಿ ಪಾರಾಯಿತು.

ದಿವ್ಯರಂಥ ಖಡಕ್ ಅಧಿಕಾರಿಗಳು ರಾಜಕಾರಣಿಗಳಿಗೆ, ಆಳುವ ಸರಕಾರಕ್ಕೆ ಬೇಕಾಗಿಲ್ಲ. ಅದೇ ಕಾರಣಕ್ಕೆ ದಿವ್ಯಾ ಇಂದುಟಆಇ ಜಜತಜಟಠರಿಟಜಟಣ ಮಂಡಳಿಯ ಎಂಡಿಯಾಗಿ ವರ್ಗಾಯಿಸಿ ಸರ್ಕಾರ ಕೈ ತೊಳೆದುಕೊಂಡಿದೆ.

ಪ್ರಾಮಾಣಿಕತೆ ಬಿಟ್ಟು, ಅಭಿವೃದ್ಧಿ ಕನಸು ಮರೆತು, ಭ್ರಷ್ಟವ್ಯವಸ್ಥೆ ಜತೆ ಕೈಜೋಡಿಸಿ, ರಾಜಕಾರಣಿಗಳಿಗೆ ಸಲಾಂ ಹೊಡೆಯುವ ಅಧಿಕಾರಿಗಳು ಇರೋವರೆಗೂ, *ಏಯ್ ಇಲ್ಯಾಕ್ ಕೂತಿದ್ದೀಯ, ಎದ್ದು ಹೋಗು.. * ಎಂದು ರಾಜಕಾರಣಿಗಳು ಸಾರ್ವಜನಿಕವಾಗಿ ಅವಮಾನಿಸಿಕೊಳ್ಳುತ್ತಲೇ ಇರಬೇಕು.



– ಶೋಭಾ ಮಳವಳ್ಳಿ,
ಪತ್ರಕರ್ತೆ



### ಶರಾವತಿ ಕಣಿವೆಯಲ್ಲಿ ಭೂಗರ್ಭ ವಿದ್ಯುತ್ ಯೋಜನೆ

# ಪರಿಸರ ಪ್ರೇಮಿಗಳ ವಿರೋಧ

**ಶಿವಮೊಗ್ಗ:** ರಾಜ್ಯದ ಎರಡನೇ ಭೂಗರ್ಭ ವಿದ್ಯುತ್ ಯೋಜನೆ ಹಾಗೂ ಅತೀ ದೊಡ್ಡ ವಿದ್ಯುತ್ ಉತ್ಪಾದನಾ ಯೋಜನೆ ಶರಾವತಿ ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್ ಅನುಷ್ಠಾನಕ್ಕೆ ಸಕಲ ಸಿದ್ಧತೆಗಳು ನಡೆಯುತ್ತಿವೆ. ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳ್ಳಲಿರುವ ಯೋಜನೆಗೆ ಮೊದಲಿನಿಂದಲೂ ಪರಿಸರಾಸಕ್ತರ ವಿರೋಧವು ಇದೆ.

ಕಳೆದ ಮಂಗಳವಾರ ಸಿಎಂ ಅಧ್ಯಕ್ಷತೆಯಲ್ಲಿ ನಡೆದ ವನ್ಯಜೀವಿ ಮಂಡಳಿ ಸಭೆಯಲ್ಲಿ ಯೋಜನೆ ಅನುಷ್ಠಾನಕ್ಕೆ ಷರತ್ತುಬದ್ಧ ಅನುಮೋದನೆ ನೀಡಲು ತೀರ್ಮಾನಿಸಲಾಗಿದ್ದು, ಶರಾವತಿ ಕಣಿವೆ ಭಾಗದಲ್ಲಿ ಪರಿಸರಾಸಕ್ತರ ವಿರೋಧ ಮುಂದೆ ತೀವ್ರವಾಗುವ ಸಾಧ್ಯತೆಗಳಿವೆ.

ಏನಿದು ಯೋಜನೆ?

ಕಾರ್ಗಲ್ ಸಮೀಪದ ಹಿರೇಹೆನ್ನಿ ಗ್ರಾಮದ ಬಳಿ ಈ ಯೋಜನೆ ಅನುಷ್ಠಾನವಾಗಲಿದೆ. ನೀರು ಸಂಗ್ರಹ ಟ್ಯಾಂಕ್ (ಸರ್ಜ್ ಟ್ಯಾಂಕ್) ಹಾಗೂ ವಿದ್ಯುತ್ ಉತ್ಪಾದನಾ ಘಟಕ (ಪವರ್ ಸ್ಟೇಷನ್) ನಿರ್ಮಾಣಕ್ಕೆ ಅಂದಾಜು ಮಾಡಿರುವ ಸ್ಥಳದಲ್ಲಿ ಡ್ರಿಲ್ಲಿಂಗ್ ನಡೆಸಿ ಅದರ ವರದಿ ಆಧರಿಸಿ ಅಂತಿಮ ವಾಗಿ ನಿಗದಿಪಡಿಸಿದ ಸ್ಥಳಗಳಲ್ಲಿ ಟ್ಯಾಂಕ್, ಪವರ್ ಸ್ಟೇಷನ್ ನಿರ್ಮಾಣಕ್ಕೆ ಕೆಪಿಸಿ ತೀರ್ಮಾನಿಸಿದೆ. ಶರಾವತಿ ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್ ಕಾರ್ಯಗತಗೊಳಿಸಲು ಮುಂದಾಗಿರುವ ಇಂಧನ ಇಲಾಖೆ ಇದಕ್ಕಾಗಿ ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಿದೆ. ಐದು ವರ್ಷಗಳ ಹಿಂದೆ 4,500 ಕೋಟಿ ರೂ.ಗೆ ಸೀಮಿತವಾಗಿದ್ದ ಯೋಜನೆಯ ಗಾತ್ರ ಇದೀಗ 8.500 ಕೋಟಿ ರೂ.ಗೆ ಏರಿದೆ. ಶರಾವತಿ ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್ ಹೆಸರಿನಲ್ಲಿ ಕೆಪಿಸಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಿದೆ. ಗೇರುಸೊಪ್ಪ ಹಿನ್ನೀರಿನಿಂದ ತಲಕಳಲೆ ಡ್ಯಾಂಗೆ ಪೈಪ್ ಮೂಲಕ ನೀರನ್ನು ಲಿಫ್ಟ್ ಮಾಡಲಾಗುತ್ತದೆ. ಅಲ್ಲಿಂದ ಹಿರೇಹೆನ್ನಿ ಬಳಿ ಪವರ್ ಸ್ಟೇಷನ್‌ನಲ್ಲಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ. ಬಳಿಕ ಈ ನೀರು ಮತ್ತೆ ಗೇರುಸೊಪ್ಪ ತಲುಪಲಿದೆ.

ರಾಜ್ಯದ ಎರಡನೇ ಭೂಗರ್ಭ ಯೋಜನೆ ಎಂಬ ಖ್ಯಾತಿಗೆ ಇದು ಪಾತ್ರವಾಗಲಿದೆ. ಪ್ರಸ್ತುತ ವಾರಾಹಿ ಜಲವಿದ್ಯುತ್ ಯೋಜನೆ ಮೂಲಕ ನಾಲ್ಕು ಘಟಕಗಳಲ್ಲಿ 460 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ನೂತನ ಯೋಜನೆಯಿಂದ 2000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲು ನಿರ್ಧರಿಸಲಾಗಿದೆ. ಯೋಜನಾ ವೆಚ್ಚ ದುಪ್ಪಟ್ಟಾದರೂ, ಪರಿಸರ ತಜ್ಞರು, ನಿವೃತ್ತ ಅರಣ್ಯಾಧಿಕಾರಿಗಳು ಹಾಗೂ ಮಲೆನಾಡಿಗರ ಸಾಕಷ್ಟು ವಿರೋಧವಿದ್ದರೂ ಹಿಂದೇಟು ಹಾಕದ ಕೆಪಿಸಿ ಶರಾವತಿ ಕಣಿವೆ ಪ್ರಾಜೆಕ್ಟ್ ಸಾಲಿಗೆ ಹೊಸ ಯೋಜನೆಯನ್ನು ಸೇರ್ಪಡೆ ಮಾಡಲು ಮುಂದಾಗಿದೆ.

## ಲಕ್ಷಾಂತರ ಮರ, ಗಿಡ ನಾಶ

ರಾಜ್ಯ ಸರ್ಕಾರ 2019ರಲ್ಲಿ ಶರಾವತಿ ಅಭಯಾರಣ್ಯವನ್ನು ವಿಸ್ತರಿಸಿ ಆದೇಶ ಹೊರಡಿಸಿತ್ತು. ಸಿಂಗಳೀಕ ಹಾಗೂ ಇಂಡಿಯನ್ ಗ್ರೇಟ್ ಹಾರ್ನ್‌ಬಿಲ್‌ಗಳ ಸಂರಕ್ಷಣೆಗೆ ಈ ಕ್ರಮ ಅನಿವಾರ್ಯ ಎಂದು ಸರ್ಕಾರವೇ ಹೇಳಿತ್ತು. 43 ಸಾವಿರ ಹೆಕ್ಟೇರ್ ಶರಾವತಿ ಅಭಯಾರಣ್ಯವನ್ನು 93 ಸಾವಿರ ಹೆಕ್ಟೇರ್‌ಗೆ ಹಿಗ್ಗಿಸಲಾಗಿತ್ತು. ಹೀಗಿರುವಾಗ ಅಭಯಾರಣ್ಯದ ವ್ಯಾಪ್ತಿಯಲ್ಲಿ ಎರಡು ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್ ಏಕೆ ಎಂದು ಪರಿಸರಾಸಕ್ತರು ವಿರೋಧ ವ್ಯಕ್ತಪಡಿಸಿದ್ದರು. ಅದಕ್ಕೂ ಮುನ್ನ 2017ರಲ್ಲಿ ಯೋಜನೆ ಘೋಷಣೆಯಾದಾಗಲೂ ವ್ಯಾಪಕ ವಿರೋಧ ವ್ಯಕ್ತವಾಗಿ ಪರಿಸರ ಪ್ರೇಮಿಗಳು ಕೋರ್ಟ್ ಮೆಟ್ಟಿಲೇರಿದ್ದರು. ಈ ಯೋಜನೆಯಿಂದ ಲಕ್ಷಾಂತರ ಮರಗಿಡ ನಾಶವಾಗಲಿವೆ. 2020ರಲ್ಲಿ ನ್ಯಾಯಾಲಯ ಸರ್ವೆಗೆ ತಡೆಯಾಜ್ಞೆ ನಡೆದಿತ್ತು. ನಂತರ ನಡೆದ ಕಾನೂನು ಹೋರಾಟದಲ್ಲಿ ಸರ್ಕಾರಕ್ಕೆ ಜಯ ಸಿಕ್ಕಿದ್ದು, ಐದಾರು ತಿಂಗಳ ಹಿಂದೆ ಯೋಜನೆ ಟೆಂಡರ್‌ಗೆ ತೆರೆದುಕೊಂಡಿತ್ತು. ಕಸ್ತೂರಿ ರಂಗನ್ ವರದಿ ಪ್ರಕಾರ ಪಶ್ಚಿಮ ಘಟ್ಟದ ತಪ್ಪಲಲ್ಲಿರುವ ಶರಾವತಿ ಕಣಿವೆ ಪರಿಸರ ಸೂಕ್ಷ್ಮ ವಲಯದಲ್ಲಿದೆ. ಹೀಗಾಗಿ ಇಲ್ಲಿ ಯೋಜನೆ ಜಾರಿ ಮಾಡಿದರೆ ಅಪಾಯ ಎಂದು ಪರಿಸರ ಪ್ರೇಮಿಗಳು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

## ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಪತ್ರ

ರಾಜ್ಯ ವನ್ಯಜೀವಿ ಮಂಡಳಿ ಶರಾವತಿ ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್‌ಗೆ ಷರತ್ತು ಬದ್ಧ ಅನುಮತಿಯನ್ನು ನೀಡಿರಬಹುದು. ಆದರೆ ಯೋಜನೆ ಅನುಷ್ಠಾನಕ್ಕೆ ರಾಷ್ಟ್ರ ವನ್ಯಜೀವಿ ಮಂಡಳಿ ಹಾಗೂ ಪರಿಸರ ಇಲಾಖೆ ಅನುಮತಿ ಬೇಕಾಗುತ್ತದೆ. ನಾವು ಈಗಾಗಲೇ ಈ ಇಲಾಖೆಗಳಿಗೆ ಪತ್ರ ಬರೆದಿದ್ದೇವೆ. ಮತ್ತೊಮ್ಮೆ ಈಗ ಪತ್ರ ಬರೆದು ಅನುಮತಿ ಕೊಡಬಾರದು ಎಂದು ಮನವಿ ಮಾಡ ಲಾಗುವುದು. ಆಡಳಿತಾತ್ಮಕವಾದ ಪರಿಹಾರ ಹುಡುಕಲು ಪ್ರಯತ್ನ ಮಾಡುತ್ತೇವೆ. ಪ್ರಾಜೆಕ್ಟ್ ಮಾಡಲು ನಾವು ಬಿಡುವುದಿಲ್ಲ. ಯೋಜನೆ ಅನುಷ್ಠಾನಗೊಳ್ಳಲಿರುವ ಪ್ರದೇಶ ಅಪ್ಪಟ ಸ್ವರ್ಗದಂತಿದೆ. ಒಮ್ಮೆ ಮಾನವನ ಹಸ್ತಕ್ಷೇಪದಿಂದ ಈ ಪ್ರದೇಶ ಬರಡಾದರೆ ಮತ್ತೆ ಮೊದಲಿನಂತೆ ಮಾಡಲು ಸಾಧ್ಯವೇ ಇಲ್ಲ.

**–ಅಖಿಲೇಶ್ ಚಿಪ್ಳಿ,** ಪರಿಸರ ಹೋರಾಟಗಾರ

## ಲೋಕಸಭಾ ಚುನಾವಣೆಯಲ್ಲಿ ಅಕ್ರಮ: ಸಾಕ್ಷಿ ಸಲ್ಲಿಸಲು ಸೂಚಿಸಿರುವ ಕೋರ್ಟ್




ದಾವಣಗೆರೆ: ಲೋಕಸಭಾ ಚುನಾವಣೆಯಲ್ಲಿ ಹಣ ಹಂಚಿಗೆದ್ದಿರುವ ಅಭ್ಯರ್ಥಿ ಆಯ್ಕೆಯನ್ನು ರದ್ದುಪಡಿಸಬೇಕು ಹಾಗೂ ಸೂಕ್ತ ಕಾರಣವಿಲ್ಲದೆ ನನ್ನ ನಾಮಪತ್ರ ತಿರಸ್ಕರಿಸಿರುವ ಜಿಲ್ಲಾಧಿಕಾರಿಗಳ ನಡೆ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿ, ಫೆ.7 ರಂದು ಈ ಸಂಬಂಧಿಸಿರುವ ದಾಖಲೆ ಹಾಗೂ ತಕರಾರುಗಳನ್ನು ನ್ಯಾಯಾಲಕ್ಕೆ ಸಲ್ಲಿಸುವಂತೆ ತಮಗೆ ಸೂಚಿಸಲಾಗಿದೆ ಎಂದು ಲೋಕಸಭಾ ಚುನಾವಣೆ ವೇಳೆ ನಾಮಪತ್ರ ಸಲ್ಲಿಸಿದ್ದ ಸುಭಾನ್ ಖಾನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೈಕೋರ್ಟ್‌ನ ನ್ಯಾಯಾಧೀಶರಾದ ಎಂ.ಐ. ಅರುಣ್ ಅವರು ನಾನು ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಿರುವ ಕಾರಣ ಫೆ. 7 ರಂದು ನನ್ನಲ್ಲಿರುವ ದಾಖಲೆಗಳನ್ನು ಸಲ್ಲಿಸುತ್ತಿದ್ದೇನೆ. ವಾರ್ಡ್‌ನ ಕಾರ್ಪೋರೇಟರ್ ಗಳು ಮೂಲಕ ಮನೆ ಮನೆಗೆ ಹಣ ಹಂಚಿದ ಬಗ್ಗೆ ಫೋಟೋ, ವಿಡಿಯೋ ದಾಖಲೆಗಳನ್ನು ಸಲ್ಲಿಸುತ್ತಿದ್ದು, ಹಣ ಪಡೆದು, ಮತ ಹಾಕಿದ ಮತದಾರರ ಸಾಕ್ಷಿಗಳನ್ನು ಕೂಡ ಹಾಜರುಪಡಿಸುತ್ತಿದ್ದೇನೆ ಎಂದು ಸುಭಾನ್ ಖಾನ್ ತಿಳಿಸಿದರು. ಲೋಕಸಭಾ ಕ್ಷೇತ್ರ ಶಿವಮೊಗ್ಗಕ್ಕೆ 12.04.24 ರಂದು ನಾಮಪತ್ರ ಸಲ್ಲಿಸಲಾಗಿತ್ತು. ಚುನಾವಣಾಧಿಕಾರಿಗಳು ಮುಂದೆ ಪ್ರಮಾಣವಚನ ತೆಗೆದುಕೊಳ್ಳಲಾಗಿತ್ತು. 15.04.24 ರಂದು ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಸಿದರೆ. ನಾಮಪತ್ರ ಪರಿಶೀಲನೆ ನಡೆಯುವ ಮೊದಲು ಪ್ರಮಾಣ ವಚನ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲು ಕೋರಿದೆ. ಶಿವಮೊಗ್ಗದಲ್ಲಿ ತೆಗೆದುಕೊಂಡಿದ್ದೇನೆ ಎಂದು ಹೇಳಿದರೂ, ಜಿಲ್ಲಾಧಿಕಾರಿಗಳು ಅವಕಾಶ ನೀಡಿದೆ, ನನ್ನ ನಾಮಪತ್ರ ತಿರಸ್ಕರಿಸಿದ್ದಾರೆ ಎಂದು ಸುಭಾನ್ ಖಾನ್ ಆರೋಪಿಸಿದರಲ್ಲದೆ, ತಮಗೆ ನ್ಯಾಯ ಸಿಗುವ ನಂಬಿಕೆ ಇದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ, ಅಲ್ಲಾ ಭಕ್ಷಿ, ಹೆಚ್. ಪರ್ವೀಜ್, ತಸ್ಲೀಮ್ ಬಾನು, ಮೊಹಮ್ಮದ್ ಸೊಹೇಲ್ ಖಾನ್ ಉಪಸ್ಥಿತರಿದ್ದರು.

## ವೀರೇಶಪ್ಪ, ಮಹೇಶ್ವರಪ್ಪ ಅವಿರೋಧ ಆಯ್ಕೆ

**ಹೊನ್ನಾಳಿ:** ತಾಲ್ಲೂಕು ನಂದಿನಿ ಹಾಲು ಉತ್ಪಾದಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ನ್ಯಾಮತಿ ಕೆ.ವೀರೇಶಪ್ಪ, ಉಪಾಧ್ಯಕ್ಷರಾಗಿ ಸೂರಗೊಂಡನಕೊಪ್ಪದ ಮಹೇಶ್ವರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.ಗುರುವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ನವೀನ ಘೋಷಣೆ ಮಾಡಿದರು.

Published and Owned by : **PRATHIBHA M.S.,** Published at : No. 900/A2, Opp-Banashankri Temple Arch, Main Road, Shakti Nagara, Davanagere, Karnataka-577004. Printed by : **MALLIKARJUNAPPA H.G.** Printed at : SHIVA MEDIA HOUSE, No.900/A2, Opp-Banashankari Temple Arch, Main Road, Davanagere, Karnataka-577004. Editor: **MALLIKARJUNAPPA H.G.**